ಭಕ್ತಿಮಾರ್ಗ



ಲೇಖಕರು :

ಡಾ|| ಶಂಕರನಾರಾಯಣ ಅಡಿಗ

ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರು ಹಾಗೂ ಉಪನಿರ್ದೇಶಕರು

ಪೂರ್ಣಪ್ರಜ್ಞ ಸಂಶೋಧನ ಮಂದಿರ, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು - 560 028

ಪ್ರಕಾಶಕರು:

ಅಖಿಲ ಭಾರತ ಮಾಧ್ವ ಮಹಾ ಮಂಡಲ (ರಿ)

ಪಬ್ಲಿಕೇಶನ್ ಟ್ರಸ್ಟ್, ಪೂರ್ಣಪ್ರಜ್ಞ ವಿದ್ಯಾಪೀಠ, ಬೆಂಗಳೂರು - 560 028

ಭಕ್ತಿಮಾರ್ಗ

ಲೇಖಕರು
ಡಾ || ಶಂಕರನಾರಾಯಣ ಅಡಿಗ ಕೆ.
ಉಪನಿರ್ದೇಶಕರು
ಪೂರ್ಣಪ್ರಜ್ಞಸಂಶೋಧನ ಮಂದಿರ
ಬೆಂಗಳೂರು

ಪ್ರಕಾಶಕರು
ಅಖಿಲ ಭಾರತ ಮಾಧ್ವಮಹಾಮಂಡಲ ಪಬ್ಲಿಕೇಶನ್ ಟ್ರಸ್ಟ್ (ರಿ.)
ಪೂರ್ಣಪ್ರಜ್ಞವಿದ್ಯಾಪೀಠ, ಬೆಂಗಳೂರು-28
2009

ಪ್ರಕಾಶಕರ ನುಡಿ

ತತ್ವಜ್ಞಾನ ಧರ್ಮ ಮತ್ತು ಭಾರತೀಯ ಸಂಸ್ಕೃತಿಯ ಸಮಗ್ರಸಾರವೇ ಶ್ರೀ ಮಧ್ವಾಚಾರ್ಯರು ವಿರಚಿಸಿದ ಅಮೂಲ್ಯ ಗ್ರಂಥಗಳಲ್ಲಿ ಅಡಕವಾಗಿರುವುದು. ಅಖಿಲ ಭಾರತ ಮಾಧ್ವ ಮಹಾ ಮಂಡಲದ ಸಂರಕ್ಷಕರಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಮಾರ್ಗದರ್ಶನದಲ್ಲಿ ಸರ್ವಮೂಲ ಗ್ರಂಥಗಳ ಕನ್ನಡೀಕರಣ ಯೋಜನೆ ಕಾರ್ಯಗತವಾಗುತ್ತಿದ್ದು ಸರ್ವಜನೋಪಯೋಗಿ ಮಾಡುತ್ತಿರುವುದು ಸರ್ವ ವಿದಿತ.

ಪರಮಪೂಜ್ಯ ಪೇಜಾವರ ಶ್ರೀಪಾದರು ಹುಟ್ಟುಹಾಕಿದ ಅ.ಭಾ. ಮಾ.ಮ.ಮಂಡಲವು, ಪ್ರೌಢಶಾಲಾ ವಿದ್ಯಾರ್ಥಿಗಳನ್ನು ಹಾಗೂ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ಶಾಸ್ತ್ರ-ಇತಿಹಾಸ-ಪುರಾಣ- ಸನಾತನ ಸಂಸ್ಕೃತಿಗಳ ಮಹತ್ವವನ್ನು ಬಿಂಬಿಸುವ ಕಿರುಹೊತ್ತಿಗೆಗಳನ್ನು ಹೊರತರಲು ಸಂಕಲ್ಪಿಸಿತ್ತು. ಪರಮಪೂಜ್ಯ ಶ್ರೀಪಾದರ ಇಚ್ಛಾಶಕ್ತಿಯ ಫಲವಾಗಿ ಇದೀಗ ಪೂರ್ಣಪ್ರಜ್ಞ ಸಂಶೋಧನ ಮಂದಿರದ ಉಪನಿರ್ದೇಶಕರಾದ ಡಾ|| ಶಂಕರನಾರಾಯಣ ಅಡಿಗರ ''ಭಕ್ತಿಮಾರ್ಗ'' ಕೃತಿಯನ್ನು ಜನತೆಯ ಕರಕಮಲಗಳಲ್ಲಿ ಅರ್ಪಿಸುತ್ತಿದ್ದೇವೆ. ಭಕ್ತಿಯು ಮುಕ್ತಿಸಾಧನವೆಂಬುದು ಮೂವರು ಆಚಾರ್ಯರ ಕೊರಳ ದನಿ. ಆದರೆ ಭಕ್ತಿಯ ಲಕ್ಷಣ (ಸ್ವರೂಪ) ವಿವೇಚನೆ ಭಿನ್ನ ಭಿನ್ನವಾಗಿದೆ. ಶ್ರೀ ಮಧ್ವಾಚಾರ್ಯರ ಭಕ್ತಿಯ ವಿವೇಚನೆ ನಾರದ ಪಂಚರಾತ್ರಗಮ-ಭಾಗವತಗಳಿಂದ ಸ್ಫೂರ್ತಿ ಪಡೆದಿದೆ. ಅಡೆತಡೆಗಳಿಲ್ಲದ (ಅವಿಚ್ಛಿನ್ನವಾದ) ನಿಷ್ಕಾಮವಾದ ಪ್ರೇಮವೇ ಭಕ್ತಿ ಎಂಬುದು ಶ್ರೀಮಧ್ವರ ಚಿಂತನೆ. ಇದುವೇ ಮುಕ್ತಿಗೆ ಸೋಪಾನ. ನಾನು (ಜೀವ) ದೇವರೆಂಬ ತಿಳಿವು ಭಕ್ತಿ ಎನಿಸದು. ಸೇವೆಯ ಹಿರಿಮೆಯನ್ನು ವಿವರಿಸುವ ಭಕ್ತಿಶಬ್ದ ಪೂಜ್ಯ-ಪೂಜಕರೀರ್ವರ ಅಸ್ತಿತ್ವವನ್ನು ಸಮರ್ಥಿಸುತ್ತದೆ. ಆಚಾರ್ಯರು ಭಕ್ತಿಸ್ವರೂಪದ ಬಗ್ಗೆ ಮಾಡಿದ

ವಿಮರ್ಶೆಯ ಉತ್ತಮ ಸಂಗ್ರಹ ಇಲ್ಲಿದೆ.. ಪುರಾಣಗಳಲ್ಲಿ ಭಕ್ತಿಯಂತೆ ಕಾಮ-ದ್ವೇಷಗಳೂ ಮುಕ್ತಿಸಾಧನವೆಂಬ ಮೋಹಕ ವರ್ಣನೆಗಳಿವೆ. ಅವುಗಳ ಅಂತರ್ಯವನ್ನು ಅರಿಯುವುದು ಬಹು ಕಠಿಣ. ಶಂಕರನಾರಾಯಣ ಅಡಿಗರು ಶ್ರೀ ಮಧ್ವರ ಹಾಗೂ ಶ್ರೀವಾದಿರಾಜರ ಕೃತಿಗಳ ಬೆಳಕಿನಲ್ಲಿ ಪುರಾಣಗಳ ನಿಜ ದೃಷ್ಟಿಯನ್ನು ತೆರೆದು ತೋರಿಸಿದ್ದಾರೆ. ಹರಿ ದ್ವೇಷದಿಂದ ಆಗುವ ಅನರ್ಥವನ್ನು ಮನಮುಟ್ಟುವಂತೆ ವರ್ಣಿಸಿದ್ದಾರೆ. ನವವಿಧ ದ್ವೇಷ ಹಾಗೂ ನವವಿಧ ಭಕ್ತಿಯ ಚಿನ್ಹೆಗಳ ವಿವೇಚನೆ ಇಲ್ಲಿದೆ. ಶ್ರೀ ಹರಿಯಲ್ಲಿ ಭಕ್ತಿ ಮಾಡುವುದು ಎಷ್ಟು ಅಗತ್ಯವೋ ಅವನ ಭಕ್ತರಲ್ಲಿ ಅವರವರ ಯೋಗ್ಯತೆಯನ್ನು ಗಮನಿಸಿ ಮಾಡಬೇಕಾದ ಶುದ್ಧಭಕ್ತಿಯ ಸ್ವಚ್ಛ ನಿರೂಪಣೆ ಇಲ್ಲಿದೆ. ಡಾ.ಶಂಕರನಾರಾಯಣ ಅಡಿಗರ ಹತ್ತಾರು ವರ್ಷಗಳ ಸಂಶೋಧನೆಯ ನವನೀತ ಸಂಗ್ರಹ ಇಲ್ಲಿದೆ. ಸುಜನರು ಈ ಕೃತಿಯ ಅಧ್ಯಯನದಿಂದ ಹೆಚ್ಚಿನ ಜ್ಞಾನಲಾಭವನ್ನು ಪಡೆಯುವರೆಂದು ನನ್ನ ನಂಬಿಕೆ.

ಈ ಯೋಜನೆಗೆ ಪ್ರೇರಣಾಶಕ್ತಿಯಾದ ಪರಮಪೂಜ್ಯ ಶ್ರೀಪಾದರಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ಸಂಶೋಧಕರೂ ಉತ್ತಮ ವಿದ್ವಾಂಸರೂ ಆದ ಅಡಿಗರಿಗೆ ನನ್ನ ಹೃತ್ಪೂರ್ವಕ ವಂದನೆಗಳು. ಈ ಸಂಪುಟದ ಪ್ರಕಟಣೆಗೆ ಎಲ್ಲಾ ಹಂತದಲ್ಲಿ ಶ್ರಮ ವಹಿಸಿದ ಟ್ರಸ್ಟೀ ಕಾರ್ಯದರ್ಶಿಗಳಾದ ಶ್ರೀ ಹೆಚ್.ಎನ್.ನಾರಾಯಣ ರಾಯರಿಗೆ ಹಾಗೂ ಅ.ಭಾ.ಮಾ.ಮ.ಮಂಡಲದ ಕಾರ್ಯದರ್ಶಿಗಳಾದ ಶ್ರೀಯುತ ಕೃಷ್ಣಾಚಾರ್ಯ ಗೋಟೂರು ಇವರುಗಳಿಗೆ ನನ್ನ ಪ್ರೀತಿಯ ಅಭಿನಂದನೆಗಳು. ಜನತೆಯು ಈ ಕೃತಿಯನ್ನು ಆದರದಿಂದ ಬರಮಾಡಿಕೊಳ್ಳುವುದಾಗಿ ನಂಬುವೆ.

ಕೆ.ವಿಷ್ಣುಮೂರ್ತಿ ಎರ್ಕಾಡಿತ್ತಾಯ
ಅಧ್ಯಕ್ಷರು
ಅ.ಭಾ.ಮಾ.ಮ.ಮಂಡಲ ಪಬ್ಲಿಕೇಷನ್ ಟ್ರಸ್ಟ್
ಅಖಿಲ ಭಾರತ ಮಾಧ್ವ ಮಹಾ ಮಂಡಲ,
ಬೆಂಗಳೂರು

ಲೇಖಕರ ನುಡಿ

ಭಕ್ತಿಗೆ ಮೂರು ಮತದ ಆಚಾರ್ಯರು ಮಹತ್ವದ ಸ್ಥಾನವನ್ನು ನೀಡಿದ್ದಾರೆ. ಶ್ರೀಶಂಕರರ ಸಿದ್ಧಾಂತದಲ್ಲಿ ಜೀವಬ್ರಹ್ಮರಿಗೆ ಐಕ್ಯವನ್ನು ಅರಿಯುವುದೇ 'ಭಕ್ತಿ' ಎನಿಸಿದೆ. ಆದರೆ ಸಕಲಶಾಸ್ತ್ರಗಳು ಭಗವಂತನ ಹಿರಿಮೆ-ಗರಿಮೆಗಳನ್ನು ಪ್ರತಿಪಾದಿಸಲು ಹೊರಟಿವೆಯೇ ವಿನಹ ಜೀವ-ಭಗವಂತನಿಗೆ ಏಕತೆಯನ್ನು ಹೇಳಲು ಹೊರಟಿಲ್ಲ - ಎಂಬ ವಿಷಯವು ಶಾಸ್ತ್ರಗಳನ್ನು ಅವಲೋಕಿಸುವ ಜ್ಞಾನಿಗಳಿಗೆ ಸ್ಪಷ್ಟ.

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ-

'ಯಸ್ಮಾತ್ ಕ್ಷರಮತೀತೋಽಹಮಕ್ಷರಾದಪಿ ಚೋತ್ತಮಃ।
ಅತೋಽಸ್ಮಿ ಲೋಕೇ ವೇದೇ ಚ ಪ್ರಥಿತಃ ಪುರುಷೋತ್ತಮಃ॥'

(ಭ.ಗೀ. 15-18)

ಕ್ಷರರೆನಿಸಿದ ಚತುರ್ಮುಖ ಮುಂತಾದ ಸಕಲಜೀವರಿಂದ, ಅಕ್ಷರಳೆನಿಸಿದ ಮಹಾಲಕ್ಷ್ಮಿಯಿಂದಲೂ ತಾನು ಶ್ರೇಷ್ಠನೆಂದು ಹೇಳಿ, ಸ್ವರೂಪದಿಂದ ಯಥಾರ್ಥವಾಗಿ ತಾನು ಜೀವರಿಂದ ಭಿನ್ನನೆಂದು ತಿಳಿಸಿದ್ದಾನೆ. ಹೀಗೆ ಜೀವ-ಬ್ರಹ್ಮರ ಐಕ್ಯವು ಸಕಲಶಾಸ್ತ್ರಗಳಿಗೆ ಸಮ್ಮತವಾದ ವಿಷಯವಾಗಿಲ್ಲದಿರುವುದರಿಂದ ಅವರ ಭಕ್ತಿವ್ಯಾಖ್ಯಾನವು ಸರಿಹೊಂದದು.

ಶ್ರೀರಾಮಾನುಜಾಚಾರ್ಯರ ಮತದಲ್ಲಿ ಮೋಕ್ಷಕ್ಕೆ - ಎರಡು ಸ್ವತಂತ್ರ ಮಾರ್ಗಗಳು. ಒಂದು ಭಕ್ತಿಮಾರ್ಗ. ಇನ್ನೊಂದು ಪರಮಾತ್ಮನನ್ನು

ಶರಣಾಗುವ ಪ್ರಪತ್ತಿ ಮಾರ್ಗ. ಇವೆರಡಕ್ಕೆ ಸಮಪ್ರಾಧಾನ್ಯತೆಯನ್ನು ಅವರು ಪ್ರತಿಪಾದಿಸಿರುವುದರಿಂದ ಅವರ ಮತದಲ್ಲಿ ಭಕ್ತಿಗೆ ಹೆಚ್ಚಿನ ಪ್ರಾಧಾನ್ಯತೆ ಇಲ್ಲದಂತಾಗುವುದು.

ಶ್ರೀಮಧ್ವಾಚಾರ್ಯರು ಮೋಕ್ಷಕ್ಕಾಗಿ ಮಾಡುವ ಎಲ್ಲ ಸಾಧನೆಗಳಲ್ಲಿ ಭಕ್ತಿಗೆ ಹೆಚ್ಚಿನ ಸ್ಥಾನವನ್ನು ನೀಡಿದ್ದಾರೆ. ಮೊದಲ ಹಂತದಲ್ಲಿ ಮಾಡುವ ಕರ್ಮದಿಂದಾರಂಭಿಸಿ ಅಪರೋಕ್ಷಜ್ಞಾನವಾಗುವ ವರೆಗೆ ಸಾಧಕನು ಮಾಡುವ ಪ್ರತಿಯೊಂದು ಸಾಧನೆಗೂ ಭಕ್ತಿಯೇ ಕಾರಣವಾಗಿರುತ್ತದೆ - ಎಂದು ಭಕ್ತಿಯ ಮಹತ್ವವನ್ನು ಸಾರಿ ಹೇಳಿದ್ದಾರೆ. ಸಕಲವಿಧವಾದ ಕರ್ಮಾನುಷ್ಠಾನವು ಭಗವಂತನಲ್ಲಿ ಭಕ್ತಿಯ ಹುಟ್ಟಿಗೆ ಕಾರಣವಾಗದಿದ್ದರೆ ಕ್ಲೇಶದಾಯಕಗಳಷ್ಟೆ ಆಗುತ್ತವೆ ಎಂದು ಶ್ರೀ ಮದ್ಭಾಗವತವು ಹೇಳುತ್ತಿದೆ-

'ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಷಕ್ಸೇನ ಕಥಾಶ್ರಯಾಂ ।
ನೋತ್ಪಾದಯೇದ್ ಯದಿ ರತಿಂ ಶ್ರಮ ಏವ ಹಿ ಕೇವಲಂ ॥'

(ಶ್ರೀಭಾಗವತ - 1-2-8)

ಈ ಮೊದಲಾಗಿ ಸಕಲ ಸರ್ವಮೂಲಗ್ರಂಥಗಳು, ವಿಶೇಷವಾಗಿ ಶ್ರೀಭಾಗವತ ತಾತ್ಪರ್ಯವು ಶ್ರೀಮಧ್ವಾಚಾರ್ಯರು ಸ್ಥಾಪಿಸಿದ ಭಕ್ತಿಸಿದ್ಧಾಂತದ ಬಗೆಗೆ ವಿಶಿಷ್ಟಗಳಾದ ಹೊಸ ಹೊಸ ವಿಚಾರಗಳನ್ನು ಪ್ರಚುರಪಡಿಸುತ್ತಿವೆ. ಶ್ರೀಮದ್ ಭಗವದ್ಗೀತೆ, ಶ್ರೀಮದ್ಭಾಗವತ ಮುಂತಾದ ಗ್ರಂಥಗಳಲ್ಲಿ ಹೆಜ್ಜೆ ಹೆಜ್ಜೆಗೂ ಭಕ್ತಿಯ ಮಹತ್ವವನ್ನು ಎತ್ತಿ ಹೇಳಲಾಗಿದೆ.

ಈ ಎಲ್ಲಾ ಗ್ರಂಥಗಳಲ್ಲಿ ಬಂದಿರುವ ಕೆಲವಷ್ಟೆ ವಿಷಯಗಳನ್ನು ಸಂಗ್ರಹಿಸಿ ಜೋಡಿಸಿ 'ಭಕ್ತಿಮಾರ್ಗ' ಎಂಬ ಈ ಕಿರುಹೊತ್ತಿಗೆಯನ್ನು ಸಿದ್ಧಪಡಿಸಲಾಗಿದೆ.

ಇತ್ತೀಚೆಗೆ ಎರಡು ವರ್ಷಗಳಿಂದ ನಾಲ್ಕೈದು ಜನ ಜಿಜ್ಞಾಸುಗಳು ಶ್ರೀಮದ್ಭಾಗವತ ತಾತ್ಪರ್ಯನಿರ್ಣಯ ಸಹಿತವಾದ ಶ್ರೀಮದ್ಭಾಗವತ ಗ್ರಂಥದ ಪಾಠಕ್ಕೆ ಮನೆಗೆ ಬರುತ್ತಿದ್ದರು. ಈ ಪಾಠದ ನಿಮಿತ್ತವಾಗಿ ಈ ಎರಡು

ಗ್ರಂಥಗಳನ್ನು ನೋಡುವ ಅವಕಾಶ ನನಗೆ ಒದಗಿ ಬಂತು. ಹಾಗು ಎರಡು ವರ್ಷಗಳಿಂದ ತಿಂಗಳಿಗೆ 10 ದಿವಸ ಶ್ರೀಭಗವದ್ಗೀತೆಯ ಪ್ರವಚನವನ್ನು ಮಾಡುತ್ತಿರುವುದರಿಂದ ಭಗವದ್ಗೀತೆಯ ಅಧ್ಯಯನ ಮಾಡಲು ಸಾಧ್ಯವಾಯಿತು. ಇದರಿಂದ ಭಕ್ತಿಯ ಬಗ್ಗೆ ಹಲವಾರು ವಿಷಯಗಳನ್ನು ಎರಡು ಗ್ರಂಥಗಳಿಂದ ಪಡೆದು ಒಂದೆಡೆ ಸಂಗ್ರಹಿಸಿ ಇಟ್ಟುಕೊಂಡಿದ್ದೆ. ಇದರ ಫಲವಾಗಿ 'ಭಕ್ತಿಮಾರ್ಗ' ಎಂಬ ಈ ಪುಸ್ತಕ ಹೊರಗೆ ಬಂದಿದೆ.

ಇದರಲ್ಲಿ ಏನಾದರೂ ಗ್ರಾಹ್ಯಾಂಶಗಳಿದ್ದರೆ ಅದು ನನ್ನ ಗುರುಗಳಾದ ಪರಮಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ಸೇರಬೇಕು. ಅವರು ನನ್ನಲ್ಲಿ ಹಚ್ಚಿದ ಜ್ಞಾನದೀಪದಿಂದ ಇಂದು ಈ ಕಿರು ಪುಸ್ತಕದ ಪ್ರಕಾಶನ ಸಾಧ್ಯವಾಗಿದೆ. ಈ ಪುಸ್ತಕದಲ್ಲಿ ಏನಾದರೂ ನ್ಯೂನತೆಗಳಿದ್ದರೆ ಅದು ನನಗೆ ಸೇರಬೇಕು.

ಕೃತಜ್ಞತಾ ಸಮರ್ಪಣೆ

ಆಧ್ಯಾತ್ಮಿಕ ವಿದ್ಯೆಯನ್ನು ಉಪದೇಶಿಸಿ ಸ್ವರೂಪೋದ್ಧಾರ ಮಾಡಿದ ಪರಮಪೂಜ್ಯ ಗುರುಗಳಾದ ಶ್ರೀ ಶ್ರೀ 1008 ಶ್ರೀ ವಿಶ್ವೇಶತೀರ್ಥ ಶ್ರೀಪಾದರಿಗೆ ನನ್ನ ಭಕ್ತಿಪೂರ್ವಕ ಸಾಷ್ಟಾಂಗ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಪೂರ್ಣಪ್ರಜ್ಞ ಸಂಶೋಧನ ಮಂದಿರದ ನಿರ್ದೇಶಕರಾದ ಡಾ|| ಎ.ವಿ.ನಾಗಸಂಪಿಗೆಯವರು ಸಮಗ್ರ ಪುಸ್ತಕವನ್ನು ಆಮೂಲಾಗ್ರವಾಗಿ ಓದಿ ಪರಿಶೀಲಿಸಿ ಕೆಲವು ಸಲಹೆಗಳನ್ನು ನೀಡಿ ಪರಮೋಪಕಾರ ಮಾಡಿದ್ದಾರೆ. ಅವರಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು.

ಸುಮಾರು 6 ತಿಂಗಳ ಹಿಂದೆ ಪೂರ್ಣಪ್ರಜ್ಞಸಂಶೋಧನ ಮಂದಿರದ ಅಧ್ಯಕ್ಷರಾದ ಹಾಗೂ ಅಖಿಲ ಭಾರತ ಮಾಧ್ವ ಮಹಾಮಂಡಲದ ಕಾರ್ಯಾಧ್ಯಕ್ಷರಾದ ಶ್ರೀ ಡಿ.ಪ್ರಹ್ಲಾದಾಚಾರ್ಯರ ಅಧ್ಯಕ್ಷತೆಯಲ್ಲಿ ಶ್ರೀ

ಹೆಚ್.ಎನ್.ನಾರಾಯಣರಾಯರು ಹಾಗೂ ಶ್ರೀ ಗೋಟೂರ ಆಚಾರ್ಯರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಕಿರು ಪುಸ್ತಕವನ್ನು ಬರೆಯಲು ಸೂಚಿಸಲಾಯಿತು. ಆಗ ನಾನು ಒಪ್ಪಿಕೊಂಡರೂ ಕಾರ್ಯಭಾರದ ಒತ್ತಡದಿಂದ ಪುಸ್ತಕ ಬರೆಯಲು ಸಾಧ್ಯವಾಗಿರಲಿಲ್ಲ. ಶ್ರೀ ಗೋಟೂರಾಚಾರ್ಯರು ನನ್ನನ್ನು ಎಡೆಬಿಡದೆ ಸಂಪರ್ಕಿಸಿ ಪುಸ್ತಕ ಬರೆಯಲು ಒತ್ತಾಯಿಸುತ್ತಿದ್ದರು. ಅವರ ಪ್ರಯತ್ನದಿಂದ ಈ ಪುಸ್ತಕ ಇಂದು ಹೊರಗೆ ಬರಲು ಸಾಧ್ಯವಾಗಿದೆ. ಶ್ರೀ ಗೋಟೂರಾಚಾರ್ಯರಿಗೆ ನನ್ನ ಕೃತಜ್ಞತೆಗಳು.

ಪೂರ್ಣಪ್ರಜ್ಞ ಸಂಶೋಧನ ಮಂದಿರದ ಉಪನಿರ್ದೇಶಕರಾದ ಡಾ|| ಶ್ರೀರಂಗನಾಥ ಕಟ್ಟಿಯವರು ಕರಡುಪ್ರತಿಯನ್ನು ಅವಲೋಕಿಸಿ ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ಮಕ್ಕಳ ಏಳಿಗೆಗಾಗಿ ತಮ್ಮ ಜೀವನವನ್ನು ಸವೆಸಿದ ನನ್ನ ಮಾತೃಶ್ರೀಯವರಿಗೆ ನನ್ನ ವಂದನೆಗಳು.

ಬರವಣಿಗೆಗೆ ಉಪಯುಕ್ತಗಳಾದ ಪುಸ್ತಕಗಳನ್ನು ಒದಗಿಸಿದ ಶ್ರೀ ಮಾಧವರಾವ್ ಅವರಿಗೆ ಧನ್ಯವಾದಗಳು.

ಈ ಗ್ರಂಥವನ್ನು ಪ್ರಕಾಶನ ಪಡಿಸುತ್ತಿರುವ ಅಖಿಲ ಭಾರತ ಮಾಧ್ವ ಮಹಾಮಂಡಲದ ಎಲ್ಲಾ ಪದಾಧಿಕಾರಿಗಳಿಗೂ ನನ್ನ ತುಂಬು ಹೃದಯದ ಕೃತಜ್ಞತೆಗಳು. ಶ್ರೀಹರಿವಾಯು ಗುರುಗಳು ಪ್ರಸನ್ನರಾಗಲಿ ಎಂದು ಆಶಿಸುತ್ತಾ ವಿರಮಿಸುತ್ತೇನೆ.

ಡಾ|| ಶಂಕರನಾರಾಯಣ ಅಡಿಗ
ಉಪನಿರ್ದೇಶಕರು
ಪೂರ್ಣಪ್ರಜ್ಞಸಂಶೋಧನಾ ಮಂದಿರ
ಪೂರ್ಣಪ್ರಜ್ಞವಿದ್ಯಾಪೀಠ
ಬೆಂಗಳೂರು
ದೂರವಾಣಿ : 9481037898, 9449341205

ಅನುಗ್ರಹ ಸಂದೇಶ

ಆಧ್ಯಾತ್ಮಿಕ ಸಿದ್ಧಿಗಾಗಿ ನಮ್ಮಲ್ಲಿರುವ ಸಾಧನೆಗಳಲ್ಲಿ ಭಕ್ತಿಯೇ ಪ್ರಧಾನ ಸಾಧನವೆಂದು ಶ್ರೀಮದಾನಂದತೀರ್ಥ ಭಗವತ್ಪಾದರು ಪ್ರತಿಪಾದಿಸಿದ್ದಾರೆ. ಭಗವಂತನಲ್ಲಿ ಪ್ರೇಮ ಮತ್ತು ಅವನ ಮಹಿಮೆಯ ಪರಿಜ್ಞಾನ ಇವುಗಳ ಸಮನ್ವಯವೇ ಭಕ್ತಿಯೆನಿಸಿದೆ. ಈ ಭಕ್ತಿಯು ಮುಕ್ತಿಗೆ ಸಾಧನವೂ ಆಗಿದೆ. ಪ್ರತ್ಯಕ್ಷ ಜೀವನದಲ್ಲಿ ನಮ್ಮ ನೈತಿಕ ಮೌಲ್ಯಗಳ ಪ್ರೇರಕ ಶಕ್ತಿಯೂ ಆಗಿದೆ. ಎಲ್ಲವೂ ಭಗವಂತನದ್ದು, ಎಲ್ಲೆಡೆಯೂ ಅವನಿದ್ದಾನೆ, ಎಲ್ಲ ಜೀವರೊಳಗೆ ಅವನು ನೆಲೆಸಿದ್ದಾನೆ ಎಂಬ ಭಾವನೆಯು ನಾನು, ನನ್ನದು ಎಂಬ ಅಹಂಕಾರವನ್ನು ತ್ಯಜಿಸಿ ಭಗವಂತನ ಬಗ್ಗೆ ಎಚ್ಚರವಹಿಸಿ ಕೆಟ್ಟ ಕೆಲಸಗಳನ್ನು ತೊರೆದು ಎಲ್ಲರ ಬಗ್ಗೆಯೂ ಅನುಕಂಪದಿಂದ ವರ್ತಿಸಿ ಕರ್ತವ್ಯ ನಿಷ್ಠರಾಗುವ ಪ್ರೇರಣೆಯನ್ನೂ ನೀಡುತ್ತದೆ. ಇದರಿಂದಲೇ ನಾವು ಪ್ರತ್ಯಕ್ಷ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ನಿರೀಕ್ಷಿಸಬಲ್ಲೆವು. ಆಚಾರ್ಯ ಮಧ್ವರು ತಮ್ಮ ಗ್ರಂಥದಲ್ಲಿ ನಿರೂಪಿಸಿದ ರೀತಿಯಲ್ಲಿ ಭಕ್ತಿಯ ವಿಸ್ತಾರ ವಿವರಣೆ ಮತ್ತು ಭಕ್ತಿಯ ವಿವಿಧ ಪ್ರಕಾರಗಳ ನಿರೂಪಣೆಯನ್ನು ಈ ಕೃತಿಯಲ್ಲಿ ಕಾಣಬಹುದು. ನಮ್ಮ ಪ್ರಿಯ ಶಿಷ್ಯರು ಹಾಗೂ ಪೂರ್ಣಪ್ರಜ್ಞ ಸಂಶೋಧನ ಮಂದಿರದ ಉಪನಿರ್ದೇಶಕರೂ ಆದ ಶಂಕರನಾರಾಯಣ ಅಡಿಗರನ್ನು ನಾವು ಅಭಿನಂದಿಸುತ್ತೇವೆ. ಅಖಿಲ ಭಾರತ ಮಾಧ್ವ ಮಹಾ ಮಂಡಲದಿಂದ ಇಂತಹ ಕೃತಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಳ್ಳಲೆಂದು ಆಶಿಸುತ್ತೇವೆ.

ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು
ಶ್ರೀ ಪೇಜಾವರ ಮಠ, ಉಡುಪಿ

ವಿಷಯಾನುಕ್ರಮಣಿಕೆ

ಭಕ್ತಿಮಾರ್ಗ

ಈ ಬ್ರಹ್ಮಸೃಷ್ಟವಾದ ಜಗತ್ತಿನಲ್ಲಿ ಪ್ರತಿಯೊಬ್ಬ ವ್ಯಕ್ತಿಯು **'ಸುಖಮೇವ ಮೇ ಸ್ಯಾತ್, ದುಃಖಂ ಮನಾಗಪಿ ಮಾಭೂತ್'** - 'ದುಃಖ ಅಮಿಶ್ರಿತ ವಾದ ಸುಖವೊಂದೆ ನನಗೆ ಬರಲಿ ಎಂದು ಆಶಿಸುತ್ತಾನೆ. ಇದೇ ಮುಕ್ತಿಯೆಂದು ಹೇಳಲಾಗಿದೆ. ಇಂಥಹ ಮುಕ್ತಿಗೆ ಸಾಧನವಾದುದೇ ನಿರ್ಮಲವಾದ ಭಗವದ್‌ಭಕ್ತಿ.

'ಅಮಲಾ ಭಕ್ತಿಶ್ಚ ತತ್ಸಾಧನಂ'

(ಪ್ರಮೇಯ ನವಮಾಲಿಕಾ)

ಭಕ್ತಿಯಿಂದ ಭಗವಂತ ಸುಪ್ರೀತನಾಗಿ ಜೀವನಿಗೆ ತನ್ನ ಸಾಕ್ಷಾತ್ಕಾರ ವಾಗುವಂತೆ ಮಾಡುತ್ತಾನೆ. ಜೀವನಿಂದ ಸಾಕ್ಷಾತ್‌ಕೃತನಾದ ಶ್ರೀಹರಿ ಅವನಲ್ಲಿ ಪ್ರಸನ್ನನಾಗಿ ಅವನ ಸಾಂಸಾರಿಕ ಬಂಧವಿಮೋಚನೆಯನ್ನು ಮಾಡುತ್ತಾನೆ. ಹೇಗೆ ರಾಜ ತನ್ನ ದರ್ಶನದಿಂದ ಖೈದಿಗೆ ಪ್ರಸನ್ನನಾಗಿ ಅವನ ಕಾರಾಗೃಹ ಬಂಧನವನ್ನು ತೆಗೆದುಹಾಕುತ್ತಾನೋ ಇದು ಹಾಗೆಯೆ ಎಂದು ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ತಿಳಿಸಿದ್ದಾರೆ.

ಯಥಾ ದೃಷ್ಟ್ಯಾ ಪ್ರಸನ್ನಃ ಸನ್ ರಾಜಾ ಬಂಧಾಪನೋದಕೃತ್ ।
ಏವಂ ದೃಷ್ಟಃ ಸ ಭಗವಾನ್ ಕುರ್ಯಾದ್ ಬಂಧವಿಭೇದನಂ ॥

(ಅನುವ್ಯಾಖ್ಯಾನ -1-1-1 ಶ್ಲೋ.41)

ತನ್ನ ವಿಶ್ವರೂಪವನ್ನು ಅರ್ಜುನನಿಗೆ ತೋರಿಸಿದ ಕೃಷ್ಣ ತನ್ನನ್ನು ನೋಡಲು ಭಕ್ತಿಯನ್ನು ಬಿಟ್ಟು ಉಳಿದ ಸಾಧನಗಳಿಂದ ಅಸಾಧ್ಯ ಎಂದು ತಿಳಿಸಿದ್ದಾನೆ. ವೇದಗಳಿಂದ, ತಪಸ್ಸಿನಿಂದ, ದಾನದಿಂದ, ಯಾಗದಿಂದ ಭಗವಂತನ ವಿಶ್ವರೂಪವನ್ನು ನೋಡಲು ಸಾಧ್ಯವಿಲ್ಲ. ಅಸಹಾಯಕವಾದ ಭಕ್ತಿಯಿಂದಲೇ ಅವನ ತಾತ್ತ್ವಿಕ ಜ್ಞಾನ, ಸಾಕ್ಷಾತ್ಕಾರ, ಸಾಯುಜ್ಯ ಮೋಕ್ಷವನ್ನು ಪಡೆಯಲು ಸಾಧ್ಯ ಎಂದು ಗೀತಾಚಾರ್ಯನ ಅಭಿಪ್ರಾಯ ವಾಗಿದೆ.

ನಾಹಂ ವೇದೈರ್ನ ತಪಸಾ ನ ದಾನೇನ ನ ಚೇಜ್ಯಯಾ ।
ಶಕ್ಯ ಏವಂ ವಿಧೋ ದ್ರಷ್ಟುಂ ದೃಷ್ಟವಾನಸಿ ಮಾಂ ಯಥಾ ॥

ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಮೇವಂ ವಿಧೋಽರ್ಜುನ ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ ॥

(ಭ.ಗೀ.11-53,54)

ಭಗವಂತನಲ್ಲಿ ಮಾಡಿದ ಭಕ್ತಿಗೆ ಇಷ್ಟು ಸಾಮರ್ಥ್ಯವಿರುವುದು ಮಾತ್ರವಲ್ಲ. ಭಗವದ್ಭಕ್ತರ ಸಂಗಕ್ಕೆ ಇತರರಿಂದ ಅಸಾಧ್ಯವಾದ ಪಾಪ ಪರಿಹಾರ ಸಾಮರ್ಥ್ಯವಿದೆ ಎಂದು ಭಾಗವತದಲ್ಲಿ ಶ್ರೀಶುಕಾಚಾರ್ಯರು ತಿಳಿಸುತ್ತಾರೆ. ಬೇಡರು, ಚಂಡಾಲರು, ಮ್ಲೇಚ್ಛರು ಮುಂತಾದ ಹೀನಜಾತಿ ಜಾತರು ಹಾಗು ಬ್ರಹ್ಮಹತ್ಯಾದಿ ಪಾಪಾಚಾರಿಗಳೂ ಭಗವದ್‌ಭಕ್ತರನ್ನು ಆಶ್ರಯಿಸುವುದರಿಂದ ಪಾಪದಿಂದ ವಿಮುಕ್ತರಾಗುತ್ತಾರೆ. ಇನ್ನು ಶ್ರವಣ-ಕೀರ್ತನಾದಿಗಳಿಂದ ಭಗವಂತನನ್ನು ಆರಾಧಿಸಿದರೆ ಪವಿತ್ರ ರಾಗದಿರುವರೇನು? ಎಂದು ಶ್ರೀ ಭಾಗವತವು ಹೇಳುತ್ತಿದೆ.

ಕಿರಾತ ಹೂಣಾಂಧ್ರಪುಲಿಂದ ಪುಲ್ಕಸಾ
ಆಭೀರಕಂಕಾ ಯವನಾಃ ಶಕಾದಯಃ ।

ಯೇऽನ್ಯೇ ಚ ಪಾಪಾ ಯದಪಾಶ್ರಯಾಶ್ರಯಾತ್
ಶುಧ್ಯಂತಿ ತಸ್ಮೈ ಪ್ರಭವಿಷ್ಣವೇ ನಮಃ ||

(ಭಾಗವತ-2-4-18)

ಭಕ್ತಿಯಿಂದಲೇ ಮುಕ್ತಿ

ಭಗವಂತ ಭಕ್ತಿಗೆ ಒಲಿಯುವವ. ಭಕ್ತಿಯೇ ಮುಕ್ತಿಗೆ ಪರಮಸಾಧನ. ಅನಿತರ ಸಾಧಾರಣವಾದ ಹಾಗೂ ಸರ್ವೋತ್ಕೃಷ್ಟವಾದ ಭಕ್ತಿಯಿಂದಲೇ ಭಗವತ್ಪ್ರಾಪ್ತಿ ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಉದ್ಘೋಷಿಸಿರುವನು.

ಪುರುಷಃ ಸ ಪರಃ ಪಾರ್ಥ ಭಕ್ತ್ಯಾ ಲಭ್ಯಸ್ತ್ವನನ್ಯಯಾ |
ಯಸ್ಯಾಂತಃಸ್ಥಾನಿ ಭೂತಾನಿ ಯೇನ ಸರ್ವಮಿದಂ ತತಂ ||

(ಭ.ಗೀ.8-22)

ನಿತ್ಯವಾಗಿ ನಿರಂತರವಾಗಿ ಹರಿಯುತ್ತಿರುವ ಭಕ್ತಿಪ್ರವಾಹ ರೂಪವಾದ ಉಪಾಯದಿಂದ ಶ್ರೀಕೃಷ್ಣನನ್ನು ಸೇವಿಸುವ ಭಕ್ತನು ಪ್ರಾಕೃತಿಕ ಬಂಧಗಳನ್ನು ಕಳಚಿಕೊಂಡು ಮಹಾಲಕ್ಷ್ಮಿಯನ್ನು ಹೊಂದಿ ಕೊನೆಗೆ ಕೃಷ್ಣನನ್ನೇ ಹೊಂದುವನು.

ಮಾಂ ಚ ಯೋऽವ್ಯಭಿಚಾರೇಣ ಭಕ್ತಿಯೋಗೇನ ಸೇವತೇ |
ಸ ಗುಣಾನ್ ಸಮತೀತ್ಯೈತಾನ್ ಬ್ರಹ್ಮಭೂಯಾಯ ಕಲ್ಪತೇ ||

(ಭ.ಗೀ.14-26)

ಭಕ್ತಿಯ ಮಹಿಮೆ

ದೇವಾಂಶಸಂಭೂತನಾದ ಯಾವನೋ ಒಬ್ಬ ಋಷಿ ಅಥವಾ ವ್ಯಕ್ತಿಯು ಪ್ರಾರಬ್ಧಕರ್ಮವಶದಿಂದ ಬಹಳ ದುರಾಚಾರಿಯಾಗಿದ್ದರೂ ಇತರ ದೇವತೆಗಳು ಅಸ್ವತಂತ್ರರು ಎಂದು ತಿಳಿದು ವಿಷ್ಣುವನ್ನೇ

ಸ್ವಾತಂತ್ರ್ಯಾನುಸಂಧಾನದಿಂದ ಭಜಿಸುತ್ತಿದ್ದಾನಾದರೆ ಅವನನ್ನು ಸಜ್ಜನ ಎಂದು ಸ್ವೀಕರಿಸಬೇಕು. ಏಕೆಂದರೆ ಅವನಿಗೆ ಸರಿಯಾದ ತತ್ತ್ವಜ್ಞಾನವಿರುವುದಷ್ಟೆ. ಮುಂದೆ ಆ ಭಕ್ತನು ಭಗವದ್ಭಕ್ತಿಯಿರುವವನಾದುದರಿಂದಲೇ ದುರಾಚಾರವನ್ನು ತೊರೆದು ಸದಾಚಾರ ನಿಷ್ಠನಾಗುವನು. ಅದಷ್ಟು ಬೇಗ ಶಾಶ್ವತ ಮೋಕ್ಷವನ್ನು ಪಡೆಯುತ್ತಾನೆ. ದೇವಾಂಶಸಂಭೂತನಾದ ಭಗವದ್ಭಕ್ತನು ದುರಾಚಾರಿಯಾಗಿದ್ದರೂ ನರಕಾದಿ ಅನರ್ಥವನ್ನು ಹೊಂದುವುದಿಲ್ಲ. ಇದು ಶ್ರೀಕೃಷ್ಣ ಗೀತೆಯಲ್ಲಿ ಪ್ರತಿಪಾದಿಸಿದ ಭಕ್ತಿಯ ಮಹಿಮೆ-

ಅಪಿ ಚೇತ್ ಸುದುರಾಚಾರೋ ಭಜತೇ ಮಾಮನನ್ಯಭಾಕ್ ।
ಸಾಧುರೇವ ಸ ಮಂತವ್ಯಃ ಸಮ್ಯಗ್ ವ್ಯವಸಿತೋ ಹಿ ಸಃ ॥

ಕ್ಷಿಪ್ರಂ ಭವತಿ ಧರ್ಮಾತ್ಮಾ ಶಶ್ವಚ್ಛಾಂತಿಂ ನಿಗಚ್ಛತಿ ।
ಕೌಂತೇಯ ಪ್ರತಿಜಾನೀಹಿ ನ ಮೇ ಭಕ್ತಃ ಪ್ರಣಶ್ಯತಿ ॥

(ಭ.ಗೀ. 9-30,31)

ಯಾರು ಪಾಪಕರ್ಮದಿಂದ ಹೀನ ಜನ್ಮವನ್ನು ಪಡೆದು ಸ್ತ್ರೀಯರೋ, ವೈಶ್ಯರೋ, ಶೂದ್ರರೋ ಆಗಿರುತ್ತಾರೋ ಅವರು ಭಗವದ್ಭಕ್ತರಾದರೆ ಮೋಕ್ಷವನ್ನು ಹೊಂದುತ್ತಾರೆ. ಇನ್ನು ಸ್ವಾಭಾವಿಕವಾಗಿಯೇ ಬ್ರಾಹ್ಮಣರು, ರಾಜರು, ಋಷಿಗಳು ಎನಿಸಿದವರು ವಿಷ್ಣುಭಕ್ತರಾಗಿದ್ದರೆ ಮೋಕ್ಷಕ್ಕೆ ಹೋಗುತ್ತಾರೆಂದು ಹೇಳಬೇಕೇನು?

ಮಾಂ ಹಿ ಪಾರ್ಥ ವ್ಯಪಾಶ್ರಿತ್ಯ ಯೇಽಪಿ ಸ್ಯುಃ ಪಾಪಯೋನಯಃ ।
ಸ್ತ್ರಿಯೋ ವೈಶ್ಯಾಸ್ತಥಾ ಶೂದ್ರಾಸ್ತೇಽಪಿ ಯಾಂತಿ ಪರಾಂ ಗತಿಂ ॥
ಕಿಂ ಪುನರ್ಬ್ರಾಹ್ಮಣಾಃ ಪುಣ್ಯಾ ಭಕ್ತಾ ರಾಜರ್ಷಯಸ್ತಥಾ ।
ಅನಿತ್ಯಮಸುಖಂ ಲೋಕಮಿಮಂ ಪ್ರಾಪ್ಯ ಭಜಸ್ವ ಮಾಂ ॥

(ಭ.ಗೀ.9-32,33)

ನವವಿಧ ಭಕ್ತಿಯ ದ್ರಷ್ಟಾರರಾದ ಪ್ರಹ್ಲಾದ ರಾಜರು ಭಕ್ತಿಯ ಮಹತ್ವವನ್ನು ವಿವರಿಸಿರುವರು. ಶ್ರೀಹರಿಯು ಪ್ರಸನ್ನನಾಗಲು ಬ್ರಾಹ್ಮಣನಾಗಿ ಹುಟ್ಟಬೇಕಿಲ್ಲ. ದೇವತೆಯ ಅಥವಾ ಉತ್ತಮ ಋಷಿಯ ಕುಲದಲ್ಲಿ ಜನಿಸಬೇಕಿಲ್ಲ. ಸಚ್ಚಾರಿತ್ರ್ಯ, ಬಹುಜ್ಞಾನ, ದಾನ, ತಪಸ್ಸು, ಯೋಗ, ಶೌಚಾಚಾರ, ವ್ರತಾನುಷ್ಠಾನಗಳು ಹರಿಪ್ರಸಾದಕ್ಕೆ ಮುಖ್ಯ ಸಾಧನಗಳಲ್ಲ. ಇವೆಲ್ಲ ಭಕ್ತಿಗೆ ಸಾಧನಗಳು. ನಿರ್ಮಲವಾದ ಭಕ್ತಿಯೇ ವಿಷ್ಣುಪ್ರೀತಿ ಸಂಪಾದನೆಗೆ ಅಂತರಂಗ ಸಾಧನ. ಭಕ್ತಿ ಇಲ್ಲದ ಉಳಿದ ಸಾಧನಗಳು ಕೇವಲ ಆಡಂಬರ ಮಾತ್ರ.

ನಾಲಂ ದ್ವಿಜತ್ವಂ ದೇವತ್ವಂ ಋಷಿತ್ವಂ ವಾಽಸುರಾತ್ಮಜಾಃ ।
ಪ್ರೀಣನಾಯ ಮುಕುಂದಸ್ಯ ನ ವೃತ್ತಂ ನ ಬಹುಜ್ಞತಾ ॥

ನ ದಾನಂ ನ ತಪೋ ನೇಜ್ಯಾ ನ ಶೌಚಂ ನ ವ್ರತಾನಿ ಚ ।
ಪ್ರೀಯತೇಽಮಲಯಾ ಭಕ್ತ್ಯಾ ಹರಿರನ್ಯದ್ ವಿಡಂಬನಂ ॥

(ಭಾಗ. 7-7-53,54)

ಶ್ರೀಮಧ್ವಾಚಾರ್ಯರ ಸಿದ್ಧಾಂತಾನುಸಾರ ಭಕ್ತಿಯ ಸ್ವರೂಪ

ಮಹಾತ್ಮ್ಯಜ್ಞಾನಪೂರ್ವಕವಾಗಿ ಶ್ರೀಹರಿಯಲ್ಲಿ ಮಾಡುವ ಸ್ನೇಹವೇ ಭಕ್ತಿ. ಇದು ಬಹಳ ದೃಢವಾಗಿರಬೇಕು. ಎಲ್ಲಾ ವಸ್ತುಗಳಲ್ಲಿ ಮಾಡುವುದಕ್ಕಿಂತ ಹೆಚ್ಚಿನದಾಗಿರಬೇಕು. ಇದರಿಂದಲೇ ಮುಕ್ತಿ- ಇದು ಆಚಾರ್ಯ ಮಧ್ವರು ಭಕ್ತಿಯ ಲಕ್ಷಣವನ್ನು ವಿವರಿಸಿದ ಬಗೆ-

ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ॥

(ಮ.ಭಾ.ತಾ.ನಿ. 1-85)

ಶ್ರೀ ಜಯತೀರ್ಥರು ಆಚಾರ್ಯರ ಈ ಲಕ್ಷಣವನ್ನೆ ಬಹಳ ಸುಂದರ ವಾದ ಪದಗಳಿಂದ ಮನಮುಟ್ಟುವಂತೆ ಸೊಗಸಾಗಿ ಶ್ರೀಮನ್ನ್ಯಾಯಸುಧೆ ಯಲ್ಲಿ ವರ್ಣಿಸಿದ್ದಾರೆ.

'ಪರಮೇಶ್ವರ ಭಕ್ತಿರ್ನಾಮ ನಿರವಧಿಕಾನಂತಾನವದ್ಯಕಲ್ಯಾಣಗುಣತ್ವ-ಜ್ಞಾನಪೂರ್ವಕಃ ಸ್ವಾತ್ಮಾತ್ಮೀಯ ಸಮಸ್ತ ವಸ್ತುಭ್ಯೋಽನಂತ ಗುಣಾಧಿಕಃ ಅಂತರಾಯಸಹಸ್ರೇಣಾಪ್ಯಪ್ರತಿಬದ್ಧೋ ನಿರಂತರಪ್ರೇಮಪ್ರವಾಹಃ (ಶ್ರೀಮನ್ನ್ಯಾಯಸುಧಾ-ಪು.244)

ಭಗವಂತನಲ್ಲಿ ಮಾಡುವ ಸ್ನೇಹವೇ ಭಕ್ತಿ. ಇದು-

1. ನಿತ್ಯ ನಿರಂತರವಾಗಿರಬೇಕು.
2. ಸಾವಿರಾರು ವಿಘ್ನಗಳಿಂದಲೂ ಪ್ರತಿಬದ್ಧವಾಗಬಾರದು.
3. ತನ್ನಲ್ಲಿ, ತನ್ನವರಲ್ಲಿ, ಸಕಲ ವಸ್ತುಗಳಲ್ಲಿ ಮಾಡುವ ಸ್ನೇಹಕ್ಕಿಂತಲೂ ಅನಂತ ಪಟ್ಟು ಹೆಚ್ಚಿನದ್ದಾಗಿರಬೇಕು.
4. ಶ್ರೀಹರಿಯು ಪ್ರತ್ಯೇಕವಾಗಿ ಎಲ್ಲೆ ಇರದ ಅನಂತ ನಿರ್ದುಷ್ಟ ಕಲ್ಯಾಣ ಗುಣಗಳಿಂದ ಪರಿಪೂರ್ಣನಾಗಿದ್ದಾನೆ ಎಂಬ ಮಹಾತ್ಮ್ಯಜ್ಞಾನ ಪೂರ್ವಕವಾಗಿ ಸ್ನೇಹವನ್ನು ಅವನಲ್ಲಿ ಮಾಡಬೇಕು.

ನಿರ್ವ್ಯಾಜವಾದ ಪ್ರೇಮವೇ ಭಕ್ತಿ

ಪ್ರೇಮವಿಲ್ಲದ ಕೇವಲ ಜ್ಞಾನ ಶುಷ್ಕವೆನಿಸುವುದು. ಜ್ಞಾನವಿಲ್ಲದ ಕೇವಲ ಪ್ರೀತಿ ರಸಿಕತೆ ಎನಿಸುವುದು. ಇವೆರಡರ ಸಮನ್ವಯದಿಂದ ಭಕ್ತಿದೇವಿಯು ಬಹಳ ಸುಂದರಿ ಎನಿಸಿರುವಳು. 'ನಿರ್ನಿಮಿತ್ತಕವಾದ ತೈಲಧಾರೆಯಂತೆ ಅವಿಚ್ಛಿನ್ನವಾದ ಸ್ನೇಹಧಾರೆಯೇ ಭಕ್ತಿ. ಇದು ಭಗವನ್ಮಹಿಮೆಯ ತಿಳುವಳಿಕೆಯಿಂದ ಹುಟ್ಟುತ್ತದೆ' ಎಂದು ಶಾಂಡಿಲ್ಯ ಸಂಹಿತೆಯಲ್ಲಿ ಹೇಳಿದೆ.

'ಸರ್ವಾತ್ಮನಾಽನಿಮಿತ್ತೈವ ಸ್ನೇಹಧಾರಾನುಕಾರಿಣೀ ।
ವೃತ್ತಿಃ ಪ್ರೇಮ ಪರಿಷ್ವಕ್ತಾ ಭಕ್ತಿರ್ಮಾಹಾತ್ಮ್ಯಬೋಧಜಾ ॥

(ಶಾ.ಸಂ.1-21)

ಶಾಸ್ತ್ರಜ್ಞಾನದಿಂದ ಭಕ್ತಿ

ಶಾಸ್ತ್ರಗಳಿಂದ ಸಂಪಾದಿಸಿದ ಜ್ಞಾನ ನೇರವಾಗಿ ಮೋಕ್ಷಸಾಧನವಾಗಲಾರದು. ಅದರಿಂದ ಭಕ್ತಿ ಉಂಟಾಗಿ ಭಕ್ತಿಯಿಂದ ಮುಕ್ತಿ ಉಂಟಾಗುತ್ತದೆ.

ಮೋಕ್ಷಕ್ಕೆ ಜ್ಞಾನಮಾರ್ಗ ಬಿಟ್ಟು ಬೇರೆ ಮಾರ್ಗವಿಲ್ಲ. **'ತಮೇವಂ ವಿದ್ವಾನ್ ಅಮೃತ ಇಹ ಭವತಿ ನಾನ್ಯಃ ಪಂಥಾಃ ವಿದ್ಯತೇಽಯನಾಯ'** (ತೈ.ಆ.1-3) ಎಂಬ ಶ್ರುತಿವಾಕ್ಯಕ್ಕೆ ಜ್ಞಾನದಿಂದ ಹುಟ್ಟುವ ಭಕ್ತಿಯಿಂದಲೇ ಮುಕ್ತಿಯಾಗುವುದೆಂರ್ಥ. **'ಯಮೇವೈಷ ವೃಣತೇ ತೇನ ಲಭ್ಯಃ'** (ಕಠ-2-23) ಭಗವಂತ ಯಾರನ್ನು ವರಿಸುತ್ತಾನೋ ಅವನಿಗೆ ಲಭ್ಯನಾಗುತ್ತಾನೆ ಎಂದು ಮೋಕ್ಷಕ್ಕೆ ಭಗವಂತನ ಪ್ರಸಾದ ಕಾರಣ ಎನ್ನುವ ಶ್ರುತಿಗೆ ಜ್ಞಾನದಿಂದ ನಿರ್ವ್ಯಾಜಪ್ರೇಮರೂಪವಾದ ಭಕ್ತಿ ಹುಟ್ಟುತ್ತದೆ, ಭಕ್ತಿಯಿಂದ ಭಗವತ್ಪ್ರಸಾದ ಉಂಟಾಗುತ್ತದೆ ಎಂದರ್ಥ.

'ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್'

(ಮ.ಭಾ.ತಾತ್ಪರ್ಯ ನಿರ್ಣಯ 1-116)

'ಶ್ರೀಹರಿ ಭಕ್ತಿಯಿಂದಲೇ ಸಂತುಷ್ಟನಾಗುತ್ತಾನೆ.'

'ಭಕ್ತ್ಯಾ ತುತೋಷ ಭಗವಾನ್ ನನು ಯೂಥಪಾಯ'

(ಭಾಗವತ-7-9-9)

ಗಜೇಂದ್ರನ ಭಕ್ತಿಗೆ ಶ್ರೀಹರಿ ಮೆಚ್ಚಿ ಅವನಿಗೆ ಮೋಕ್ಷವನ್ನು ಕರುಣಿಸಿದ್ದಾನೆ.

ಈ ಎಲ್ಲ ಪ್ರಮಾಣವಾಕ್ಯಗಳು ಭಕ್ತಿಯಿಂದ ಉಂಟಾಗುವ ಹರಿಪ್ರಸಾದದಿಂದ ಮೋಕ್ಷವನ್ನು ಸಾರಿ ಹೇಳುತ್ತವೆ.

ಭಕ್ತಿ ಉಂಟಾಗುವ ಬಗೆ

ಭಕ್ತಿ ಕೇವಲ ಆಜ್ಞೆಯಿಂದ ಅಥವಾ 'ಭಕ್ತಿ ಮಾಡಬೇಕು' ಎಂಬ ವಿಧಿ ವಾಕ್ಯದಿಂದ ಹುಟ್ಟುವುದಿಲ್ಲ. ವಿಷ್ಣುವಿನ ಗುಣಮಹಾತ್ಮ್ಯ, ಉದಾತ್ತಚರಿತ್ರೆ ಮುಂತಾದವುಗಳನ್ನು ತಿಳಿದಾಗ ಅವನಲ್ಲಿ ತಾನಾಗಿಯೇ ಭಕ್ತಿ ಹುಟ್ಟುತ್ತದೆ. ಈ ವಿಚಾರವನ್ನು ಆಚಾರ್ಯರ ಬ್ರಹ್ಮಸೂತ್ರಭಾಷ್ಯ ದೃಢಪಡಿಸುತ್ತದೆ.

'ಭಕ್ತ್ಯರ್ಥಂ ಭಗವನ್ಮಹಿಮೋಕ್ತಿಃ' (ಬ್ರ.ಸೂ.ಭಾ. 3-2-1)

ಅದ್ವೈತಮತದಲ್ಲಿ ಭಕ್ತಿ ಕೂಡಲಾರದು

ಶಂಕರಾಚಾರ್ಯರ ಮತದಲ್ಲಿ ಭಕ್ತಿಯೇ ಮೋಕ್ಷಸಾಧನ ಸಾಮಗ್ರಿಯಲ್ಲಿ ಪರಮ ಸಾಧನ ಎನಿಸಿದೆ.

'ಮೋಕ್ಷಸಾಧನಸಾಮಗ್ರ್ಯಾಂ ಭಕ್ತಿರೇವ ಗರೀಯಸೀ'

ಅದ್ವೈತಮತದಲ್ಲಿ ಭಕ್ತಿಯೆಂದರೆ ಜೀವಬ್ರಹ್ಮರಿಗೆ ಏಕತೆಯನ್ನು ಚಿಂತಿಸುವುದು-

'ಸ್ವಸ್ವರೂಪಾನುಸಂಧಾನಂ ಭಕ್ತಿರಿತ್ಯಭಿಧೀಯತೇ' ಜೀವನು ತಾನು ಬ್ರಹ್ಮನೆಂದು ತಿಳಿಯುವುದೇ ಭಕ್ತಿ ಎನಿಸುತ್ತದೆ. ಇಂತಹ ಭಕ್ತಿಯು ಅಜ್ಞರಿಗೆ ಎನ್ನಲಾಗಿದೆ.

'ಭಜ ಗೋವಿಂದಂ ಭಜ ಗೋವಿಂದಂ ಗೋವಿಂದ ಭಜ ಮೂಢಮತೇ' - ಮೂಢಮತಿಯೇ ಗೋವಿಂದನನ್ನು ಭಜಿಸು ಎಂದು.

ಆದರೆ ಭಕ್ತಿಯು ಭಜಕ-ಭಜನೀಯ, ಸೇವಕ-ಸೇವ್ಯರ ಮಧ್ಯೆ ಇರುವಂತದ್ದು. ಇದು ಭೇದವಿಲ್ಲದೆ ಇರಲಾರದು. ಹಾಗೂ ಯುಕ್ತವಾಗಲಾರದು.

ಶ್ರೀಕೃಷ್ಣನು ತನ್ನ ಭಕ್ತರ ಬಗ್ಗೆ ಭಗವದ್ಗೀತೆಯಲ್ಲಿ ಹೇಳುತ್ತಾ-

ನಾನು (ಕೃಷ್ಣ) ಸಕಲಕ್ಕೂ ಜನಕ ಹಾಗೂ ನನ್ನಿಂದಲೇ (ಶ್ರೀಕೃಷ್ಣನಿಂದಲೇ) ಎಲ್ಲವೂ ಪ್ರವೃತ್ತಿ ಮಾಡುತ್ತದೆ. ಹೀಗೆ ತಿಳಿದು ಭಕ್ತಿಯಿಂದ ಕೂಡಿದ ಜ್ಞಾನಿಗಳು ನನ್ನನ್ನು (ಶ್ರೀಕೃಷ್ಣನನ್ನು) ಭಜಿಸುತ್ತಾರೆ ಹೊರತು ತಮ್ಮನ್ನೆ ಹಾಗೆಂದು ಬಗೆದಿಲ್ಲ ಎಂದು ಸ್ಪಷ್ಟವಾಗಿ ತನಗೂ ತನ್ನ ಭಕ್ತರಿಗೂ ಭೇದವಿದೆಯೆಂದು ತಿಳಿಸಿದ್ದಾನೆ-

'ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ।
ಇತಿ ಮತ್ವಾ ಭಜಂತೇ ಮಾಂ ಬುಧಾಃ ಭಾವಸಮನ್ವಿತಾಃ॥

(ಭ.ಗೀ.10-8)

ಈ ಶ್ಲೋಕದಲ್ಲಿ ಒಮ್ಮೆ ಕೃಷ್ಣ ನಾನು (ಅಹಂ) ಎಂದು ಹೇಳಿದ ಮೇಲೆ ಮತ್ತೆ ನನ್ನನ್ನು (ಮಾಂ) ಎಂದು ಹೇಳಿ ಜೀವಬ್ರಹ್ಮರಿಗೆ ಐಕ್ಯವಿಲ್ಲವೆಂದು ತಿಳಿಸಿದ್ದಾನೆ.

ಜೀವಬ್ರಹ್ಮರಿಗೆ ಐಕ್ಯವನ್ನು ಪ್ರತಿಪಾದಿಸಿದ ಶಂಕರಾಚಾರ್ಯರಿಗೆ ಅದರ ಬಗ್ಗೆ ಗೊಂದಲವಿತ್ತೆಂದು ಅವರ ಜೀವನದ ಕೊನೆಯಲ್ಲಿ ನಡೆದ ಘಟನೆಯೊಂದು ತಿಳಿಸಿಕೊಡುತ್ತದೆ. ಶಂಕರಾಚಾರ್ಯರು ಜೀವನದ ಮುಸ್ಸಂಜೆಯಲ್ಲಿ ಇರುವಾಗ ಅವರ ಹತ್ತಿರ ಆ ಕಾಲದ ಹಿರಿಯ ಮೀಮಾಂಸಕರಾದ ಮಂಡನಮಿಶ್ರರು ಬಂದರಂತೆ. ಆವಾಗ ಶಂಕರಾಚಾರ್ಯರು ಒಂದು ರೀತಿಯಾಗಿ ಸಪ್ಪೆಮುಖ ಮಾಡಿಕೊಂಡು ಬಸವಳಿದವರಂತಿದ್ದರು. ಮಂಡನಮಿಶ್ರರು ಏನಾದರೂ ರೋಗವು ನಿಮ್ಮನ್ನು ಬಾಧಿಸುತ್ತಿದೆಯೇ? ಎಂದು ಅವರನ್ನು ಪ್ರಶ್ನಿಸಿದರು. ಆಗ ಶಂಕರಾಚಾರ್ಯರು-

'ರೋಗೋ ನ ಬಾಧತೇ ಶ್ರೀಮನ್ ಸಹಯೋಗೋ ಹಿ ಬಾಧತೇ'

ರೋಗವು ನನ್ನನ್ನು ಬಾಧಿಸುತ್ತಿಲ್ಲ. **'ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ'** (ತೈ.ಉ.2-1) ಎಂಬ ಶ್ರುತಿಯಲ್ಲಿ

ಹೇಳಿದ ಸಹಯೋಗವು ಬಾಧಿಸುತ್ತಿದೆ ಎಂದರು. ಈ ಶ್ರುತಿಯು ಬ್ರಹ್ಮಜ್ಞಾನಿಯು ಪರಬ್ರಹ್ಮನನ್ನು ಹೊಂದಿ ಮೋಕ್ಷದಲ್ಲಿ ಅವನ ಜೊತೆಗೆ ಐಕ್ಯವನ್ನು ಹೊಂದುತ್ತಾನೆಂದು ಹೇಳುತ್ತಿಲ್ಲ. ಹೊರತು ಅವನ ಜೊತೆಗೆ ಸೇರಿಕೊಂಡು ಸಕಲಭೋಗವನ್ನು ಅನುಭವಿಸುತ್ತಾನೆಂದು ಹೇಳುತ್ತಿದೆ. ಶ್ರುತಿಯಲ್ಲಿ ಹೇಳಿದ ಈ ಸಹಭೋಗ, ಸಹಯೋಗವು ಜೀವಬ್ರಹ್ಮೈಕ್ಯವನ್ನು ಪ್ರತಿಪಾದಿಸುವ ಅದ್ವೈತಮತದಲ್ಲಿ ಯಾವುದೇ ಕಾರಣಕ್ಕೂ ಸರಿಹೊಂದುವುದಿಲ್ಲ.

ಭಗವಂತನ ಗುಣಮಹಿಮೆಗಳನ್ನು ತಿಳಿದಾಗ ಅವನಲ್ಲಿ ತಾನಾಗಿಯೇ ಭಕ್ತಿ ಹುಟ್ಟುತ್ತದೆ ಎಂದು ನಾರದರ ಭಕ್ತಿಸೂತ್ರ ವಿವರಿಸುತ್ತದೆ.

'ಭಗವದ್ಗುಣಶ್ರವಣ ಕೀರ್ತನಾತ್'

(ನಾರದರ ಭಕ್ತಿಸೂತ್ರ 1-37)

ಒಂದೊಮ್ಮೆ ಅದ್ವೈತಮತದಲ್ಲಿ ಹೇಳುವಂತೆ ಭಗವಂತನು ನಿರ್ಗುಣ-ನಿರಾಕಾರನಾದರೆ ಅವನಲ್ಲಿ ಭಕ್ತಿ ಹೇಗೆ ತಾನೇ ಹುಟ್ಟಲು ಸಾಧ್ಯ? ಏಕೆಂದರೆ ಭಕ್ತಿ ಕೇವಲ ಆದೇಶದಿಂದ ಹುಟ್ಟಲಾರದಷ್ಟೆ.

ದ್ವೇಷಾದಿಗಳಿಂದ ಮುಕ್ತಿಯಿಲ್ಲ. ಭಕ್ತಿಯಿಂದಲೇ ಮುಕ್ತಿ

ದ್ವೇಷದಿಂದಲೂ ಮೋಕ್ಷವಾಗುವುದಾದರೆ ಶಾಸ್ತ್ರಗಳು ಭಗವಂತನ ಗುಣವರ್ಣನೆ ಮಾಡುವಂತೆ ದೋಷಗಳ ವರ್ಣನೆಯನ್ನು ಮಾಡಬೇಕು. ಬ್ರಹ್ಮಮೀಮಾಂಸಾಶಾಸ್ತ್ರದಲ್ಲಿ ಶ್ರೀವೇದವ್ಯಾಸರು ಸಮನ್ವಯಾಧ್ಯಾಯ ದಿಂದ ಭಗವಂತನಲ್ಲಿ ಸರ್ವಶಬ್ದಗಳ ಸಮನ್ವಯ ಮಾಡುವ ಮೂಲಕ ಸಕಲ ಗುಣಪರಿಪೂರ್ಣತ್ವವನ್ನು ಪ್ರತಿಪಾದಿಸಿದಂತೆ ದೋಷಗಳ ಪ್ರತಿಪಾದನೆ ಯನ್ನೂ ಮಾಡಬೇಕಿತ್ತು. ದ್ವೇಷದಿಂದಲೂ ಮುಕ್ತಿಯಾಗುವು ದಾದರೆ ಬ್ರಹ್ಮಮಿಮಾಂಸಾಶಾಸ್ತ್ರದ ಎರಡನೇ ಅವಿರೋಧಾಧ್ಯಾಯವು ಸಾರ್ಥಕತೆಯನ್ನು ಕಳೆದುಕೊಳ್ಳಬೇಕಾಗುತ್ತದೆ.

'ಯದಿ ದ್ವೇಷೇಣ ಮುಕ್ತಿಃ ಸ್ಯಾದ್ ವಕ್ತವ್ಯೋ ದೋಷಸಂಚಯಃ'

(ಅನುವ್ಯಾಖ್ಯಾನ)

ಧರ್ಮರಾಜ ರಾಜಸೂಯಾಶ್ವಮೇಧಯಾಗ ಮಾಡಿದಾಗ ತುಂಬಿದ ಸಭೆಯಲ್ಲಿ ಭೀಷ್ಮರ ಸಲಹೆಯಂತೆ ಶ್ರೀಕೃಷ್ಣನಿಗೆ ಅಗ್ರಪೂಜೆ ಮಾಡಿದ. ಅದನ್ನು ನೋಡಿ ಶಿಶುಪಾಲ ಭಗವಂತನನ್ನು ಹಲವು ಪರಿಯಿಂದ ನಿಂದಿಸಿದ. ಆಗ ಶಿಶುಪಾಲನ ಜೊತೆಗೆ ನಡೆದ ಯುದ್ಧದಲ್ಲಿ ಶ್ರೀಕೃಷ್ಣ ಚಕ್ರಾಯುಧದಿಂದ ಅವನ ತಲೆಯನ್ನು ಕತ್ತರಿಸಿ ಅವನನ್ನು ಸಂಹರಿಸಿದ. ಸುದರ್ಶನ ಚಕ್ರದ ಸ್ಪರ್ಶವಾಗುತ್ತಿರುವಂತೆ ಅದರಿಂದ ಪುನೀತನಾದ ಒಬ್ಬ ಚೇತನ ತೇಜೋರೂಪದಿಂದ ಹೊರಗೆ ಬಂದು ಕೃಷ್ಣನನ್ನು ನಮಿಸಿ ಅವನ ಉದರವನ್ನು ಪ್ರವೇಶಿಸಿದ.

ಈ ಎಲ್ಲಾ ಘಟನೆಗಳನ್ನು ಅಲ್ಲಿ ಸೇರಿದ್ದ ಜನರೆಲ್ಲ ಪ್ರತ್ಯಕ್ಷವಾಗಿ ವೀಕ್ಷಿಸಿದರು. ಇದನ್ನು ನೋಡಿದ ಧರ್ಮರಾಜ ತನ್ನ ಹತ್ತಿರದಲ್ಲಿದ್ದ ನಾರದರನ್ನು ಕೇಳಿದ. 'ನಾರದರೇ! ಇದು ತುಂಬ ಆಶ್ಚರ್ಯ! ಏಕಾಂತ ಭಕ್ತರಾದವರಿಗೂ ಕಷ್ಟಸಾಧ್ಯವಾದ ಭಗವತ್ಪ್ರಾಪ್ತಿರೂಪವಾದ ಮೋಕ್ಷವು ದ್ವೇಷಿಯಾದ ಶಿಶುಪಾಲನಿಗೂ ಆಯಿತಲ್ಲವೆ? ಹಿಂದೆ ಭಗವಂತನನ್ನು ನಿಂದೆ ಮಾಡಿದ್ದಕ್ಕಾಗಿ ವೇನನನ್ನು ಬ್ರಾಹ್ಮಣರು ತಮಸ್ಸಿನಲ್ಲಿ ಬೀಳಿಸಿದರು.

'ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ।

(ಭಾಗವತ 7-1-18)

ಆದರೆ ಪಾಪಿಯಾದ ಈ ಶಿಶುಪಾಲನೂ ಇವನ ತಮ್ಮನಾದ ದಂತವಕ್ರನೂ ಹುಟ್ಟಿನಿಂದ ಆರಂಭಿಸಿ ಶ್ರೀಕೃಷ್ಣನನ್ನು ನಿಂದಿಸುತ್ತಲೇ ಇದ್ದರೂ ಏಕೆ ಅಂಧಂತಮಸ್ಸಿಗೆ ಹೋಗಲಿಲ್ಲ? ಎಲ್ಲರೂ ನೋಡುತ್ತಿರುವಂತೆ ಈ ಶಿಶುಪಾಲ ಭಗವಂತನ ದೇಹವನ್ನು ಪ್ರವೇಶಿಸಲು ಏನು ಕಾರಣ? ಎಂದು ಧರ್ಮರಾಜ ಪ್ರಶ್ನೆ ಮಾಡಿದಾಗ ನಾರದರು ಹೇಳಿದರು-

ಭಕ್ತಿಯ ಜೊತೆಗೆ ಕಾಮದಿಂದ, ಸ್ನೇಹದಿಂದ, ಭಯದಿಂದ ಹಾಗೂ ದ್ವೇಷದಿಂದ ಭಗವಂತನಲ್ಲಿ ಮನಸ್ಸನ್ನು ಇಟ್ಟು ಮುಂದೆ ದ್ವೇಷಾದಿಗಳಿಂದ ಕಲುಷಿತವಲ್ಲದ ಕೇವಲ ಶುದ್ಧಭಕ್ತಿಯಿಂದ, ದ್ವೇಷಾದಿಗಳಿಂದ ಉಂಟಾದ ಪಾಪವನ್ನು ಪರಿಹರಿಸಿಕೊಂಡು ಬಹಳಷ್ಟು ಜನರು ಕೃಷ್ಣನ ಲೋಕವನ್ನು ಹೊಂದಿದರು.

ಕಾಮಾತ್ ಸ್ನೇಹಾದ್ ಭಯಾದ್
ದ್ವೇಷಾದ್ ಯಥಾ ಭಕ್ತ್ಯೇಶ್ವರೇ ಮನಃ।
ಆವಿಶ್ಯ ತದಘಂ ಹಿತ್ವಾ ಬಹವಸ್ತದ್ಗತಿಂ ಗತಾಃ॥

(ಭಾಗವತ-7-1-31)

ನಾರದರು ಮತ್ತೆ ಹೇಳಿದರು-

ಗೋಪ್ಯಃ ಕಾಮಾದ್ ಭಯಾತ್ ಕಂಸೋ
ದ್ವೇಷಾತ್ ಚೈದ್ಯಾದಯೋ ನೃಪಾಃ।
ಸಂಬಂಧಾದ್ ವೃಷ್ಣಯಃ ಸ್ನೇಹಾದ್
ಯೂಯಂ ಭಕ್ತ್ಯಾ ವಯಂ ವಿಭೋ॥

(ಭಾಗವತ-7-1-32)

ಗೋಪಿಕಾಸ್ತ್ರೀಯರಾಗಿದ್ದಾಗ ಭಕ್ತಿ ಹಾಗೂ ಕಾಮದಿಂದ ಶ್ರೀಹರಿಯಲ್ಲಿ ಮನಸ್ಸನ್ನು ನೆಲೆಗೊಳಿಸಿ ಮುಂದೆ ಅಪ್ಸರೆಯರಾದಾಗ ಅದೇ ಗೋಪಿಕಾಸ್ತ್ರೀಯರು ಯಥಾರ್ಥ ಭೂತವಾದ ಪಕ್ವ ಭಕ್ತಿಯಿಂದ, ಜಗತ್ಪತಿಯಾದ ಭಗವಂತನನ್ನು 'ತನ್ನ ಪತಿ' ಎಂಬ ತಿಳುವಳಿಕೆಯಿಂದ ಉಂಟಾದ ಪಾಪವನ್ನು ಪರಿಹರಿಸಿಕೊಂಡು ಮೋಕ್ಷವನ್ನು ಪಡೆದರು.

ಆದ್ದರಿಂದ **ಗೋಪ್ಯಃ ಕಾಮಾತ್** - ಗೋಪಿಕಾಸ್ತ್ರೀಯರು ಕೇವಲ ಕಾಮದಿಂದ ಮುಕ್ತಿ ಪಡೆಯಲಿಲ್ಲವೆಂದು ಸಿದ್ಧವಾಯಿತು. ಹಾಗೆಯೇ-

ಭಯಾತ್ ಕಂಸಃ

ಕಂಸ ಭಯದಿಂದ ಮೋಕ್ಷ ಹೊಂದಿದ ಎಂದಿದೆ. ಇಲ್ಲಿ ಕಂಸ ಅಂದರೆ ಅವನಲ್ಲಿ ಆವಿಷ್ಟನಾದ ಭೃಗುಮಹರ್ಷಿಯು ಪೂರ್ವದಲ್ಲಿ ಕಂಸಾವೇಶವಿದ್ದಾಗ ಭಕ್ತಿಯ ಜೊತೆಗೆ ಭಯದಿಂದ ಭಗವಂತನಲ್ಲಿ ಮನಸ್ಸಿಟ್ಟು ಮುಂದೆ ಕಂಸ ಸಂಹಾರದ ಅನಂತರ ಭಯದಿಂದ ಅಕಲುಷಿತವಾದ ಶುದ್ಧಭಕ್ತಿಯಿಂದ ಹಿಂದೆ ಮಾಡಿದ ಪಾಪವನ್ನು ಕಳೆದುಕೊಂಡು ಭಗವಂತನನ್ನು ಹೊಂದಿದನು.

ಇಲ್ಲಿಯೂ ಕಂಸ ಭಯದಿಂದ ಮೋಕ್ಷಹೊಂದಲಿಲ್ಲ. ಕಂಸನ ಶರೀರ ದಲ್ಲಿ ಶುಭ- ಅಶುಭಗಳೆಂಬ ಎರಡು ಜೀವಗಳಿವೆ. ಅಶುಭ ಜೀವ ಎಂದರೆ ಕಾಲನೇಮಿ ಎಂಬ ದೈತ್ಯ. ಭೃಗು ಋಷಿ ಅದೇ ಶರೀರದಲ್ಲಿ ಸೇರಿರುವ ಶುಭ ಜೀವಿ. ಯಾವಾಗ ಶುಭಜೀವನ ಜ್ಞಾನ ಆ ಶರೀರದಲ್ಲಿ ಕಾಣಿಸಿಕೊಳ್ಳು ತ್ತದೋ ಆವಾಗ ಅವನಿಂದ ಉತ್ತಮ ಮಾತುಗಳು ಬರುತ್ತವೆ. ಅಶುಭ ಜೀವಿಯ ಜ್ಞಾನ ಅಭಿವ್ಯಕ್ತವಾದಾಗ ಕೆಟ್ಟ ಮಾತುಗಳು ಹೊರಬರುತ್ತವೆ. ಕೃಷ್ಣನಿಂದ ಕಂಸ ಹತನಾದಾಗ ಅಶುಭ ಜೀವಿಯಾದ ಕಾಲನೇಮಿ ಅಂಧಂ ತಮಸ್ಸಿಗೆ ಹೋದನು. ಶುಭಜೀವಿಯಾದ ಭೃಗು ಭಗವಂತನಲ್ಲಿ ಶುದ್ಧ ಭಕ್ತಿ ಮಾಡಿ ಕಂಸಾವೇಶದಿಂದ ಉಂಟಾದ ಪಾಪವನ್ನು ಪರಿಹರಿಸಿಕೊಂಡು ಮುಂದೆ ಮೋಕ್ಷಕ್ಕೆ ಹೋಗುತ್ತಾನೆ. ಇದನ್ನೇ ಆಚಾರ್ಯರು ಭಾಗವತ ತಾತ್ಪರ್ಯ ದಲ್ಲಿ ಪ್ರಮಾಣವಚನವನ್ನು ಉದಾಹರಿಸುವ ಮೂಲಕ ವಿವರಿಸಿದ್ದಾರೆ-

'ಕಂಸಪೂತನಿಕಾದ್ಯಾಶ್ಚ ಬಾಂಧವಾದಿಯುತಾ ಯತಃ।
ಜೀವದ್ವಯ ಸಮಾವೇಶಾದ್ ಗತಿದ್ವಯ ಜಿಗೀಷವಃ॥'

(ಭಾಗವತ ತಾತ್ಪರ್ಯ)

ಇದನ್ನೇ ಗರುಡ ಪುರಾಣ ಉಲ್ಲೇಖಿಸಿದೆ-

''ಶುಭಜೀವ ಪ್ರಕಾಶೇನ ಕದಾಚಿತ್ ಶುಭಬುದ್ಧಯಃ ।
ವಿಪರ್ಯಯೇ ಚಾನ್ಯಥಾ ಸ್ಯುಃ ಶುಭಾಸ್ತತ್ರ ಹರಿಂ ಯಯುಃ ॥

ಅಶುಭಾಸ್ತು ತಮೋ ಘೋರಂ ಯದಿ ತತ್ರೈವ ಮಧ್ಯಮಾಃ ।
ಮಧ್ಯಮಾಂ ಗತಿ ಮೇವಾಽಪುಃ ಏಕದೇಹಗತಾ ಅಪಿ ॥''

(ಗರುಡಪುರಾಣ)

ದ್ವೇಷಾತ್ ಚೈದ್ಯಾದಯೋ ನೃಪಾಃ

ಭಗವಂತನಲ್ಲಿ ದ್ವೇಷ ಮಾಡಿ ಶಿಶುಪಾಲ ದಂತವಕ್ರ ಮುಂತಾದ ರಾಜರು ಮೋಕ್ಷ ಹೊಂದಿದರು- ಎಂದು ಈ ವಾಕ್ಯದಿಂದ ಮೇಲ್ನೋಟಕ್ಕೆ ಕಾಣಬರುವ ಅರ್ಥ. ಆದರೆ ದ್ವೇಷದಿಂದ ಮೋಕ್ಷ ಆಗುವುದು ಅಸಾಧ್ಯ. ಭಕ್ತಿಯಿಂದ ಮಾತ್ರ ಮೋಕ್ಷ, ದ್ವೇಷದಿಂದ ತಮಸ್ಸು ಆಗುವುದೆಂದು ನಿಯಮ ಇರುವುದು. ಕೆಲವು ಕಡೆ ಬೇರೆ ಬಗೆಯಾಗಿ ಹೇಳಿದರೂ ಅದು ಮೋಹಕವೆಂದು ತಿಳಿಯಬೇಕು. ಹೀಗೆಂದು ಪ್ರಮಾಣವಚನವಿರುವುದು:

ಸರ್ವಥಾ ಭಕ್ತಿತೋ ಮುಕ್ತಿರ್ದ್ವೇಷಾತ್ ತಮ ಉದೀರಿತಂ ।
ನಿಯಮಸ್ತ್ವನಯೋರ್ನಿತ್ಯಂ ಮೋಹಾಯಾನ್ಯದ್ ವಚೋ ಭವೇತ್॥

ದ್ವೇಷದಿಂದ ಶ್ರೀಹರಿ ಮೋಕ್ಷ ನೀಡುವುದಾದರೆ ಭೂಭಾರಹರಣ ವ್ಯರ್ಥ

ದ್ವೇಷ ಮಾಡುವ ದೈತ್ಯರಿಗೂ ಶ್ರೀಹರಿ ಅನುಗ್ರಹ ಮಾಡುವವನಾದರೆ ಅವನು ಭೂಲೋಕದಲ್ಲಿ ರಾಮಚಂದ್ರಾದಿರೂಪದಿಂದ ಅವತರಿಸಿ ರಾವಣ ಮುಂತಾದ ದೈತ್ಯರನ್ನು ನಿಗ್ರಹಿಸಿ ಅವರ ಐಶ್ವರ್ಯವನ್ನು ತನ್ನ ಭಕ್ತರಾದ ವಿಭೀಷಣಾದಿಗಳಿಗೆ ನೀಡುವುದಾದರೂ ಏತಕ್ಕೆ? ಎಂದು ವಿಚಾರ ಮಾಡಬೇಕು. ಭಗವಂತ ಅಸುರರನ್ನು ಸಂಹರಿಸಿ ಅವರ

ಸಂಪತ್ತನ್ನು ತನ್ನ ಭಕ್ತರಿಗೆ ನೀಡುವುದಕ್ಕೆ ಅವರು ಅವನನ್ನು ದ್ವೇಷಿಸುವುದೇ ಕಾರಣ. ಬೇರೆ ಕಾರಣ, ಏನೂ ಇಲ್ಲ ಎಂದು ಶ್ರೀವಾದಿರಾಜರು ಹೇಳಿರುವರು-

ಯದಿ ಪ್ರಭುರ್ವಿದ್ವಿಷತೋಽಪಿ ಶೌರಿಃ
ಪ್ರಸಾದಕೃತ್ ತರ್ಹಿ ಕುತಃ ಸುರಾರೀನ್ ।
ವಿಜಿತ್ಯ ಭಕ್ತಾಯ ತದೀಯಭಾಗ್ಯಂ
ಪ್ರಯಚ್ಛತಿ ಸ್ವೈರಮಿಹಾವತೀರ್ಯ ॥

(ರುಗ್ಮಿಣೀಶವಿಜಯ-2-42)

ಆದ್ದರಿಂದ '**ದ್ವೇಷಾತ್ ಚೈದ್ಯಾದಯೋ ನೃಪಾಃ**' ಎಂದು ಹೇಳುವ ಶುಕಾಚಾರ್ಯರಿಗೆ ದ್ವೇಷಿಗಳಿಗೆ ಭಗವಂತ ಮೋಕ್ಷ ನೀಡುತ್ತಾನೆ- ಎಂಬ ಅರ್ಥ ಅಭಿಪ್ರೇತವಾಗಿಲ್ಲ. ಹಾಗೆ ಅವರ ಅಭಿಪ್ರಾಯವಾಗಿದ್ದರೆ ತೃಣಾವರ್ತ, ವತ್ಸಾಸುರ, ಕೇಶಿ ಅಸುರ - ಮುಂತಾದ ಭಗವದ್ ದ್ವೇಷಿಗಳ ಮರಣವಾದಾಗ ಅವರೆಲ್ಲರಿಗೆ ಶುಕಾಚಾರ್ಯರು ಮೋಕ್ಷವನ್ನು ಏಕೆ ಹೇಳಲಿಲ್ಲ? ಅವರೆಲ್ಲರೂ ಅಂಧಂತಮಸ್ಸಿಗೆ ಹೋದರೆಂದು ಭಾಗವತದಲ್ಲಿ ಹೇಳಲಾಗಿದೆ. ಇದರಿಂದ ಒಂದು ವಿಷಯ ಸ್ಪಷ್ಟವಾಗುತ್ತದೆ. ಶಿಶುಪಾಲಾದಿಗಳಲ್ಲಿ ಉತ್ತಮ-ಅಧಮ ಎಂಬ ಎರಡು ಜೀವಿಗಳ ಅಸ್ತಿತ್ವ ಇದೆ. ತೃಣಾವರ್ತ ಮುಂತಾದವರಲ್ಲಿ ಹೀಗಿಲ್ಲ ಎಂದು. ಇಲ್ಲದಿದ್ದರೆ ಶ್ರೀಕೃಷ್ಣನು ಸಂಹಾರ ಮಾಡಿದ ಸಮಸ್ತ ದೈತ್ಯವರ್ಗಕ್ಕೂ ಮೋಕ್ಷವನ್ನ ಭಾಗವತದಲ್ಲಿ ಶುಕಾಚಾರ್ಯರು ನಿರೂಪಿಸಬೇಕಾಗಿತ್ತೆಂದು ಶ್ರೀವಾದಿರಾಜತೀರ್ಥರು ಅಭಿಪ್ರಾಯ ಪಡುತ್ತಾರೆ-

'ದ್ವಿಷಾಂ ಹರಿರ್ಯಚ್ಛತಿ ಯರ್ಹಿ ಮೋಕ್ಷಂ
ನ ತರ್ಹಿ ಕಸ್ಮಾದಪವರ್ಗಮಾರ್ಗಃ ।

ಅರಿಷ್ಟವಾತಾಸುರ ವತ್ಸಕೇಶಿ ವಿನಾಶಕಾಲೇ ವಿವೃತಃ ಶುಕೇನ ॥''

(ರುಗ್ಮಿಣೀಶವಿಜಯ 2-43)

ಶ್ರೀಕೃಷ್ಣ ತಾನು ಸಂಹರಿಸಿದ ದ್ವೇಷಿಗಳಿಗೆ ಮೋಕ್ಷವನ್ನೇ ನೀಡುವುದಾದರೆ ಭಾಗವತದಲ್ಲಿ ವೃಷಭಾಸುರನನ್ನು ಕೃಷ್ಣ ಸಂಹರಿಸಿದಾಗ ಅವನು ಸುಖರಹಿತವಾದ ಲೋಕಕ್ಕೆ ಹೋದ ಎಂಬ ಮಾತು ಅಸಂಗತವಾದೀತು-

'ಜಗಾಮ ಕೃಚ್ಛ್ರಂ ನಿರ್ಋತೇರಥ ಕ್ಷಯಂ
ಪುಷ್ಪೈಃ ಕಿರಂತೋ ಹರಿಮೀಡಿರೇ ಸುರಾಃ'

(ಭಾಗವತ 10-36-14)

ಭಗವದ್ ದ್ವೇಷವನ್ನು ದಾಟಲು ಅಸಾಧ್ಯ

ಶುಕಾಚಾರ್ಯರು ದ್ವೇಷದಿಂದ ಮೋಕ್ಷ - ಎಂಬ ಮತವನ್ನು ನಿರಾಕರಿಸಿದ್ದಾರೆ. ಭಾಗವತದಲ್ಲಿ ಬರುವ ಹಿರಣ್ಯಕಶಿಪುವಿನ ಪ್ರಕರಣದಲ್ಲಿ ನರಸಿಂಹದೇವರು ಅವನನ್ನು ಸಂಹರಿಸಿದ ಮೇಲೆ ಪ್ರಹ್ಲಾದರಾಜರು ನರಸಿಂಹದೇವರಲ್ಲಿ ವರ ಬೇಡಿದರು- ನನ್ನ ತಂದೆ ನಿನ್ನನ್ನು ಬಹಳಷ್ಟು ನಿಂದೆ ಮಾಡಿದ್ದಲ್ಲದೆ ನಿನ್ನ ಭಕ್ತನಾದ ನನ್ನಲ್ಲಿ ದ್ವೇಷ ಮಾಡುವ ಮೂಲಕ ಪಾಪಕರ್ಮವನ್ನಾಚರಿಸಿದನು. ಇದರಿಂದ ಅವನು ದಾಟಲು ಅಸಾಧ್ಯವಾದ ಪಾಪವನ್ನು ಮಾಡಿದ್ದಾನೆ. ಆದ್ದರಿಂದ ಅವನು ಪವಿತ್ರಗೊಳ್ಳಲಿ-

'ಯದನಿಂದತ್ ಪಿತಾ ಮಹ್ಯಂ ತ್ವದ್ಭಕ್ತೇ ಮಯಿ ಚಾಘವಾನ್।
ತಸ್ಮಾತ್ ಪಿತಾ ಮೇ ಪೂಯೇತ ದುರಂತಾದ್ ದುಸ್ತರಾದಘಾತ್ ॥'

(ಭಾಗವತ 7-10-18)

ಪ್ರಹ್ಲಾದನ ಈ ಮಾತಿನಿಂದ ಭಗವಂತ ಹಾಗೂ ಅವನ ಭಕ್ತರಲ್ಲಿ ಮಾಡುವ ದ್ವೇಷವನ್ನು ದಾಟಲು ಸಾಧ್ಯವಿಲ್ಲವೆಂದು ತಿಳಿಯುವುದು. ಹೊರತು ಆ ದ್ವೇಷವು ಸುಖಕ್ಕೆ ಕಾರಣವಾಗುವುದಿಲ್ಲ.

ಭಗವದ್ ದ್ವೇಷ ಅಂಧಂತಮಸ್ಸಿಗೆ ದಾರಿ

ಭಗವಂತನಲ್ಲಿ ಮಾಡಿದ ದ್ವೇಷದಿಂದ ಮೋಕ್ಷವಾಗುತ್ತದೆ- ಎಂಬ ಮತ ಭಾಗವತಾಚಾರ್ಯರ ಅಭಿಪ್ರಾಯಕ್ಕೆ ವಿರುದ್ಧವಾದುದು. ಏಕೆಂದರೆ ಶ್ರೀಹರಿಯ ನಿಂದೆಯಿಂದ ವೇನನು ತಮಸ್ಸಿನಲ್ಲಿ ಬಿದ್ದನು ಎಂದು ಭಾಗವತ ಹೇಳುತ್ತಿದೆ.

'ಭಗವನ್ನಿಂದಯಾ ವೇನೋ ದ್ವಿಜೈಸ್ತಮಸಿ ಪಾತಿತಃ'

(ಭಾಗವತ-14-22-47)

ಹಿರಣ್ಯಕಶಿಪುವೂ ಭಗವಂತನನ್ನು ನಿಂದಿಸಿರುವುದರಿಂದ ಅಂಧಂತಮಸ್ಸನ್ನು ಪ್ರವೇಶಿಸುವವನಿದ್ದು ತನ್ನ ಮಗನಾದ ಪ್ರಹ್ಲಾದನ ಭಕ್ತಿ ಹಾಗೂ ಸಾಮರ್ಥ್ಯದಿಂದ ಅದನ್ನು ದಾಟಿ ಸದ್ಗತಿಯನ್ನು ಪಡೆದನು.

'ಹಿರಣ್ಯಕಶಿಪುಶ್ಚಾಪಿ ಭಗವನ್ನಿಂದಯಾ ತಮಃ ।
ವಿವಿಕ್ಷುರತ್ಯಗಾತ್ ಸೂನೋಃ ಪ್ರಹ್ಲಾದಸ್ಯಾನುಭಾವತಃ॥'

(ಭಾಗವತ-4-21-46)

ಹೀಗೆ ಭಗವಂತನ ದ್ವೇಷವನ್ನು ಅಂಧಂತಮಸ್ಸಿನ ಪ್ರಾಪ್ತಿಗೆ ಕಾರಣವನ್ನಾಗಿ ಭಾಗವತದಲ್ಲಿ ಹೇಳಲಾಗಿದೆ.

ಭಗವಂತನ ದ್ವೇಷ ಭಗವಂತನ ಸಮೀಪಕ್ಕೆ ಹೋಗಲು ಅಡ್ಡಿಯಾಗಿದೆ

ಭಗವದ್‌ಗೀತೆಯಲ್ಲಿ ಕೃಷ್ಣ ತನ್ನ ದ್ವೇಷಿಗಳು ತನ್ನ ಸಮೀಪಕ್ಕೂ ಸುಳಿಯಲಾರರೆಂದು ಹೇಳಿದ್ದಾನೆ. 'ಸಂಸಾರದಲ್ಲಿ ನನ್ನನ್ನು ದ್ವೇಷಮಾಡತಕ್ಕ ಕ್ರೂರರಾದ ಮನುಷ್ಯಾಧಮರನ್ನು ನಾನು ಕೆಟ್ಟ ಅಸುರ ಜಾತಿಯಲ್ಲಿ ಹುಟ್ಟುವಂತೆ ಮಾಡುತ್ತೇನೆ. ಪ್ರತಿ ಜನ್ಮದಲ್ಲೂ ಅಸುರ ಜನ್ಮ ತಳೆದ

ಮೂರ್ಖರಾದ ನನ್ನ ದ್ವೇಷಿಗಳು ನನ್ನ ಹತ್ತಿರ ಬರದೇ ನೀಚಗತಿಯನ್ನು ಹೊಂದುತ್ತಾರೆ'

'ತಾನಹಂ ದ್ವಿಷತಃ ಕ್ರೂರಾನ್ ಸಂಸಾರೇಷು ನರಾಧಮಾನ್ ।
ಕ್ಷಿಪಾಮ್ಯಜಸ್ರಮಶುಭಾನ್ ಆಸುರೀಷ್ವೇವ ಯೋನಿಷು ॥

ಆಸುರೀಂ ಯೋನಿಮಾಪನ್ನಾ ಮೂಢಾ ಜನ್ಮನಿ ಜನ್ಮನಿ ।
ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂ ಗತಿಂ ॥''

(ಭ.ಗೀ. 16-19,20)

ಈ ವಚನಗಳಿಂದ ಭಗವಂತನ ಹತ್ತಿರ ಹೋಗುವುದಕ್ಕೆ ಅವನ ದ್ವೇಷ ಅಡ್ಡಿಯಾಗಿದೆ ಎಂದು ತಿಳಿಯುತ್ತದೆ.

ಶ್ರೀಹರಿಯ ನಿಂದೆಯ ಶ್ರವಣವೂ ಅಂಧಂತಮಸ್ಸಿಗೆ ಕಾರಣ

ಮೋಕ್ಷದಾತನಾದ ಶ್ರೀಹರಿಯ ನಿಂದೆಯನ್ನು ಒಮ್ಮೆ ಕೇಳಿದರೂ ಅಂಧಂತಮಸ್ಸಾಗುತ್ತದೆ. ಇನ್ನು ನಿಂದಿಸುವವನಿಗೆ ತಮಃಪ್ರಾಪ್ತಿಯಾಗುತ್ತದೆ ಎಂದು ಬೇರೆ ಹೇಳಬೇಕೇನು? ಭಗವಂತ ಹಾಗೂ ಅವನ ಭಕ್ತರ ನಿಂದೆ ಎಲ್ಲಿಯಾದರೂ ನಡೆಯುತ್ತಿದ್ದರೆ ಆ ಸ್ಥಳವನ್ನು ತೊರೆದು ಬೇರೆ ಕಡೆಗೆ ಹೋಗಬೇಕು. ಇಲ್ಲದಿದ್ದರೆ ಆ ವ್ಯಕ್ತಿಯ ಪುಣ್ಯಹ್ರಾಸವಾಗುವುದೆಂದು ಭಾಗವತದ ಪ್ರಮಾಣ ವಚನವಿರುವುದು.

'ನಿಂದಾಂ ಭಗವತಃ ಶೃಣ್ವನ್ ತತ್ಪರಸ್ಯ ಜನಸ್ಯ ವಾ ।
ತತೋ ನಾಪೈತಿ ಯಃ ಸೋಽಪಿ ಯಾತ್ಯಧಃ ಸುಕೃತಾಚ್ಚ್ಯುತಃ ॥'

(ಭಾಗವತ-10-74-40)

ದ್ವೇಷಿಗಳಿಗೆ ಮೋಕ್ಷ ಹೇಳುವ ಮಾತುಗಳಿಗೆ ಬೇರೆ ಅರ್ಥ

ವೇದದಲ್ಲಿ **'ಆಪೋಽಬ್ರುವನ್'** - ನೀರು ಮಾತನಾಡಿತು. **'ಮೃದಬ್ರವೀತ್'** - ಮಣ್ಣು ಮಾತನಾಡಿತು ಎಂದು ಹೇಳುವ ವಾಕ್ಯಗಳು ಸಿಗುತ್ತವೆ. ಈ ವಾಕ್ಯಗಳಿಗೆ ಮೇಲೆ ಹೇಳಿದಂತೆ ಮೇಲ್ನೋಟಕ್ಕೆ ತೋರುವ ಅರ್ಥವನ್ನೇ ಇಟ್ಟುಕೊಂಡರೆ ಪ್ರತ್ಯಕ್ಷ ಅನುಮಾನಗಳೆಂಬ ಪ್ರಬಲ ಪ್ರಮಾಣಗಳಿಂದ ವಿರೋಧ ಬರುತ್ತದೆ. ಆದುದರಿಂದ **'ಅಭಿಮಾನಿವ್ಯಪದೇಶಸ್ತು ವಿಶೇಷಾನುಗತಿಭ್ಯಾಂ'** (ಬ್ರ.ಸೂ.2-1-6) ಎಂಬ ಬ್ರಹ್ಮಸೂತ್ರದಲ್ಲಿ ನಿರ್ಣಯಿಸಿದಂತೆ ಹಿಂದೆ ಹೇಳಿದ ವೇದವಾಕ್ಯಗಳಲ್ಲಿ ಮಣ್ಣು ನೀರು ಎಂದರೆ ಅಚೇತನ ಜಡ ಪದಾರ್ಥಗಳಲ್ಲ. ಅವುಗಳಲ್ಲಿ ನೆಲೆಸಿರುವ ಅಭಿಮಾನಿದೇವತೆಗಳು ಅಲ್ಲಿ ವಿವಕ್ಷಿತರಾಗಿದ್ದಾರೆ. ಅವರು ವೇದದ್ರಷ್ಟಾರರಾದ ಮುನಿಗಳ ಅಪರೋಕ್ಷ ದೃಷ್ಟಿಗೆ ಗೋಚರರಾಗಿರುವುದ ರಿಂದ ಆಯಾಯ ವೇದವಾಕ್ಯಗಳಿಂದ ವಾಚ್ಯರಾಗಿದ್ದಾರೆ. ಆದುದರಿಂದ ಪ್ರತ್ಯಕ್ಷ ಮುಂತಾದ ಪ್ರಮಾಣಗಳಿಂದ ವಿರೋಧವಿಲ್ಲ ಎಂದು ವೇದವ್ಯಾಸರು ಅಲ್ಲಿ ನಿರ್ಣಯಿಸಿದ್ದಾರೆ. ಹಾಗೆಯೇ **'ದ್ವೇಷಾದ್ ಚೈದ್ಯಾದಯೋ ನೃಪಾಃ'** ಎಂಬಲ್ಲಿಯೂ ದ್ವೇಷದಿಂದ ಶಿಶುಪಾಲಾದಿಗಳಿಗೆ ಮೋಕ್ಷ ಹೇಳಲು ಪ್ರಬಲ ಸ್ಮೃತಿ ಮುಂತಾದ ಪ್ರಮಾಣಗಳಿಂದ ವಿರೋಧವಿರುವುದರಿಂದ ಅವರಲ್ಲಿ ಶುಭ ಅಶುಭ - ಎಂಬ ಇಬ್ಬರು ಜೀವರ ಸಮಾವೇಶವಾಗಿದೆ ಎಂದು ಒಪ್ಪಿಕೊಳ್ಳಲಾಗುವುದು.

ಶಿಶುಪಾಲ ದಂತವಕ್ರರು ಸ್ವರೂಪದಿಂದ ಜಯ-ವಿಜಯರೆಂಬ ಶುಭ ಜೀವರಾಗಿರುವರು. ಅವರಲ್ಲಿ ಆದಿ ಹಿರಣ್ಯಕಶಿಪು-ಆದಿಹಿರಣ್ಯಾಕ್ಷ ರೆಂಬ ಅಸುರರ ಆವೇಶವಿರುವುದು. ಜಯವಿಜಯರಲ್ಲಿ ಅಸುರಾವೇಶ ವಿರುವಾಗ ಭಕ್ತಿಯ ಜೊತೆಗೆ ಅವರು ದ್ವೇಷದಿಂದ ಭಗವಂತನಲ್ಲಿ ಮನಸ್ಸಿಟ್ಟು ಮುಂದೆ ದ್ವೇಷದಿಂದ ಅಕಲುಷಿತವಾದ ಶುದ್ಧಭಕ್ತಿಯಿಂದಲೇ, ದ್ವೇಷದಿಂದ ಉಂಟಾದ ಪಾಪವನ್ನು ಪರಿಹರಿಸಿಕೊಂಡಿದ್ದರಿಂದ

ಭಗವಂತನನ್ನು ಪ್ರವೇಶಿಸಲು ಅವರಿಗೆ ಸಾಧ್ಯವಾಯಿತು. ಹೀಗೆ ಬ್ರಹ್ಮಾಂಡ ಪುರಾಣದ ವಚನವಿರುವುದು-

'ಅತೋ ಯದ್ಯಸುರಾವೇಶಾತ್ ಕೃತಮೇತೇನ ದುಷ್ಕೃತಂ।
ಅನಾದಿಭಕ್ತೋ ಯಸ್ಮಾನ್ಮೇ ಮೋಚಯಿಷ್ಯೇ ತತಸ್ತ್ವಹಂ।
ಇತಿ ಮತ್ವಾ ಮೋಚಯತಿ ಚೈದ್ಯಾದೀನಪಿ ಕೇಶವಃ'

(ಬ್ರಹ್ಮಾಂಡ ಪುರಾಣ)

ಆದ್ದರಿಂದ ಅವರಿಗೆ ಮೋಕ್ಷವಾಗಿರುವುದು ಭಕ್ತಿಯಿಂದಲೇ ಹೊರತು ದ್ವೇಷದಿಂದಲ್ಲ.

ಭಕ್ತಿಯಿಂದ ಮಾತ್ರ ಭಗವಂತನ ಪ್ರಾಪ್ತಿರೂಪವಾದ ಮೋಕ್ಷ ಆಗಲು ಸಾಧ್ಯ ಎಂದು ಶ್ರೀಕೃಷ್ಣ ಗೀತೆಯಲ್ಲಿ ನುಡಿದಿದ್ದಾನೆ-

'ಭಕ್ತ್ಯಾ ತ್ವನನ್ಯಯಾ ಶಕ್ಯ ಅಹಂ ಏವಂವಿಧೋಽರ್ಜುನ।
ಜ್ಞಾತುಂ ದ್ರಷ್ಟುಂ ಚ ತತ್ತ್ವೇನ ಪ್ರವೇಷ್ಟುಂ ಚ ಪರಂತಪ॥''

(ಭ.ಗೀ. 11-54)

'ಅರ್ಜುನ! ಅನಿತರ ಸಾಧಾರಣವಾದ ಭಕ್ತಿಯಿಂದಲೇ ನನ್ನನ್ನು ಯಥಾರ್ಥವಾಗಿ ತಿಳಿಯಲು, ನೋಡಲು, ನನ್ನಲ್ಲಿ ಪ್ರವೇಶ ಪಡೆಯಲು ಜೀವನಿಗೆ ಸಾಧ್ಯವಾಗುತ್ತದೆ.'

ಶಿಶುಪಾಲ ಮುಂತಾದವರಲ್ಲಿ ಎರಡು ಜೀವರ ಸಮಾವೇಶ

ಶಿಶುಪಾಲಾದಿಗಳನ್ನು ಅಸುರರೆಂದು ಕರೆದಿರುವುದರಿಂದ ಅವರಲ್ಲಿ ಎರಡು ಚೇತನಗಳ ಸಮಾವೇಶವನ್ನು ನಾವು ಊಹಿಸಬಹುದಾಗಿದೆ. ಶಿಶುಪಾಲಾದಿಗಳು ಸ್ವಭಾವದಿಂದ ಸನಕಾದಿಗಳ ಶಾಪದಿಂದ ಭೂಮಿಯಲ್ಲಿ ಹುಟ್ಟಿದ ವೈಕುಂಠಲೋಕದ ದ್ವಾರಪಾಲಕರು. ಆದ್ದರಿಂದ ಸ್ವರೂಪದಿಂದ ಅವರು ಅಸುರರಲ್ಲ, ವಿಷ್ಣುಪಾರ್ಷದರಾಗಿರುವರಷ್ಟೆ. ಹೀಗೆ

ಸ್ವರೂಪದಿಂದ ಅಸುರರಾಗಿದ್ದಾರೆಂಬ ಕಾರಣದಿಂದ ಅವರನ್ನು ಅಸುರರೆಂದು ಕರೆಯಲು ಸಾಧ್ಯವಿಲ್ಲ. ಜಾತಿಯಿಂದಲೂ ಅಸುರರಾಗಿಲ್ಲ. ಅವರು ಕ್ಷತ್ರಿಯ ಜಾತಿಯಲ್ಲಿ ಹುಟ್ಟಿದ್ದಾರೆ. ಹೀಗೂ ಅವರನ್ನು ಅಸುರರೆಂದು ಕರೆಯಲಾಗದು. ಅಸುರರಂತೆ ದ್ವೇಷಮಾಡಿದ್ದರಿಂದ ಅವರನ್ನು ಅಸುರ ಶಬ್ದದಿಂದ ಪುರಾಣಾದಿಗಳಲ್ಲಿ ಕರೆಯಲಾಗಿದೆ- ಎಂದರೆ ಈ ಮಾತೂ ಯುಕ್ತವಾಗಲಾರದು. ಏಕೆಂದರೆ ನಿರಂತರವಾಗಿ ಅವರು ಭಗವಂತನನ್ನು ದ್ವೇಷಮಾಡಲಿಲ್ಲ. ಒಮ್ಮೊಮ್ಮೆ ದ್ವೇಷ ಮಾಡಿದರೂ ಅಷ್ಟಕ್ಕೆ ಅವರನ್ನು ಅಸುರರೆನ್ನಲಾಗದು. ಅರ್ಜುನ-ಇಂದ್ರ ಮುಂತಾದ ದೇವತೆಗಳೂ ಹರಿಭಕ್ತರಾಗಿದ್ದರೂ ಒಮ್ಮೊಮ್ಮೆ ಭಗವಂತನ ದ್ವೇಷಮಾಡಿದ್ದಾರೆ. ಅವರನ್ನು ಎಲ್ಲಿಯೂ ಅಸುರರೆಂದು ಹೇಳಲಾಗಲಿಲ್ಲ. ಆದ್ದರಿಂದ ಶಿಶುಪಾಲಾದಿಗಳ ದೇಹದಲ್ಲಿ ಸೇರಿರುವ ಹಿರಣ್ಯಕಶಿಪು-ಹಿರಣ್ಯಾಕ್ಷರೆಂಬ ಅಸುರರನ್ನು ಉದ್ದೇಶಿಸಿಯೇ ಅವರಲ್ಲಿ ಅಸುರ ಶಬ್ದವನ್ನು ಪ್ರಯೋಗಿಸಿದ್ದೆಂದು ತೀರ್ಮಾನಿಸಬೇಕಾಗುತ್ತದೆ.

ಜಯ-ವಿಜಯರಿಗೆ ಸನಕಾದಿಗಳ ಶಾಪದಿಂದ ಅಸುರ ಜಾತಿ ಬರಬಹುದಲ್ಲವೇ? ಎಂದರೆ ಅದೂ ಸಾಧ್ಯವಿಲ್ಲ. ಉಗ್ರಶಾಪದಿಂದಲೂ ಒಬ್ಬ ವ್ಯಕ್ತಿಯ ಸ್ವರೂಪಭೂತವಾದ ಸ್ವಭಾವವನ್ನು ಬದಲಿಸಲು ಸಾಧ್ಯವಿಲ್ಲ. ಶಿಶುಪಾಲಾದಿಗಳಿಗೆ ಸನಕಾದಿ ಮುನಿಗಳು ಅಸುರರಾಗಿ - ಎಂದು ಶಾಪ ನೀಡಿದರೂ ಅವರು ಸ್ವಭಾವದಿಂದ ಅಸುರರಾಗಲು ಆ ಶಾಪ ಕಾರಣವಾಗುವುದಿಲ್ಲ. ಅವರಿಗೆ ಅಸುರತ್ವ ಬರಲಿಕ್ಕೆ ಅವರಲ್ಲಿ ದುಷ್ಟರಾದ ಆದಿಹಿರಣ್ಯಕಶಿಪು-ಹಿರಣ್ಯಾಕ್ಷರ ಆವೇಶ ಅವಶ್ಯವಾಗಿ ಬೇಕಾಗುತ್ತದೆ. ಹಿಂದೆ ವಸಿಷ್ಠ ಋಷಿಗಳು ಕಲ್ಮಾಷಪಾದ ರಾಜನಿಗೆ ರಾಕ್ಷಸನಾಗೆಂದು ಶಾಪ ನೀಡಿದರು. ಆದರೂ ಆ ಶಾಪ ಮಾತ್ರದಿಂದಲೇ ರಾಜನಿಗೆ ರಾಕ್ಷಸತ್ವ ಬರಲಿಲ್ಲ. ವಸಿಷ್ಠ ಋಷಿಗಳ ಶಾಪವನ್ನು ಸತ್ಯಮಾಡಲು ವಿಶ್ವಾಮಿತ್ರರು ಕಿಂಕರ ಎಂಬ ರಾಕ್ಷಸನಿಗೆ ರಾಜನಲ್ಲಿ ಪ್ರವೇಶ ಮಾಡಲು ಆಜ್ಞೆಮಾಡಿದರು.

ರಾಜನಲ್ಲಿ ಆ ರಾಕ್ಷಸನ ಆವೇಶದಿಂದ ರಾಕ್ಷಸ ಜಾತಿಯು ಬಂದಿತು ಎಂದು ಮಹಾಭಾರತದಲ್ಲಿ ಉಲ್ಲೇಖಬಂದಿದೆ.

'ಸ ಶಾಪಾತ್ ತಸ್ಯ ವಿಪ್ರರ್ಷೇಃ ವಿಶ್ವಾಮಿತ್ರಸ್ಯ ಚಾಽಜ್ಞಯಾ ।
ವಿವೇಶ ಕಿಂಕರೋ ನಾಮ ನೃಪತಿಂ ರಾಕ್ಷಸಸ್ತದಾ ॥''

(ಮಹಾಭಾರತ)

ಪಿಶಾಚಾವಿಷ್ಟವಾದ ಶರೀರದಲ್ಲಿ ಹೇಗೆ ಎರಡು ಚೇತನಗಳು ನೆಲೆಸಿರುತ್ತವೆಯೋ ಹಾಗೆ ಶಿಶುಪಾಲಾದಿ ದೇಹದಲ್ಲಿ ಶುಭ ಹಾಗೂ ಅಶುಭರೆಂಬ ಎರಡು ಜೀವರು ಇದ್ದು ಶುಭಾಶುಭ ಕರ್ಮಗಳನ್ನು ಮಾಡುತ್ತಾ ಅದರಿಂದ ಉಂಟಾದ ಸುಖ-ದುಃಖಗಳನ್ನು ಅನುಭವಿಸುವರು. (ವಾದಿರಾಜರು-ರುಗ್ಮಿಣೀಶವಿಜಯ - 2-83)

ಆದ್ದರಿಂದ ಶಿಶುಪಾಲನ ದೇಹದಲ್ಲಿ ಸೇರಿಕೊಂಡಿರುವ ಹಿರಣ್ಯಕಶಿಪು ಎಂಬ ಅಸುರನಿಗೆ ಅಂಧಂತಮಸ್ಸೆ ಪ್ರಾಪ್ತವಾಯಿತು. ಅದೇ ಶರೀರದಲ್ಲಿ ಆವಿಷ್ಟನಾದ ಜಯ ಎಂಬ ಸಜ್ಜೀವನಿಗಷ್ಟೆ ಭಗವತ್ಪ್ರಾಪ್ತಿ ರೂಪವಾದ ಮೋಕ್ಷ ಲಭಿಸಿತೆಂದು ಶ್ರೀಮದಾಚಾರ್ಯರು ತಮ್ಮ ತಾತ್ಪರ್ಯ ನಿರ್ಣಯ ಮುಂತಾದ ಗ್ರಂಥಗಳಲ್ಲಿ ನಿರ್ಣಯಿಸಿದ್ದಾರೆ.

'ನಿಕೃತ್ಯಮಾನಕಂಧರಃ ಸ ಭಕ್ತಿಮಾನ್ ಅಭೂದ್ಧರೌ ।
ತಮಾಶ್ರಿತಶ್ಚ ಯೋಽಸುರೋ ಮಹಾತಮಃ ಪ್ರಪೇದಿವಾನ್ ॥'

(ಮ.ಭಾ.ತಾ.ನಿ. 21-264)

ಜ್ಞಾನದಿಂದಲೇ ಮೋಕ್ಷ

'ದ್ವೇಷದಿಂದ ಮೋಕ್ಷವಾಗುತ್ತದೆ' ಎಂಬ ಮತ ಯಾವ ಸಿದ್ಧಾಂತಿಗಳಿಗೂ ಸಮ್ಮತವಾಗಿಲ್ಲ. ಅದ್ವೈತಮತದವರು, ತಾರ್ಕಿಕರು

ಮುಂತಾದ ಸಕಲ ಸಿದ್ಧಾಂತಿಗಳೂ ಜ್ಞಾನದ ಹೊರತಾಗಿ ಸಂಸಾರ ಬಂಧದಿಂದ ಬಿಡುಗಡೆ ಇಲ್ಲ ಎಂದೇ ಸಿದ್ಧಾಂತ ಮಾಡಿದ್ದಾರೆ.

ಜ್ಞಾನದಿಂದಲೇ ಮೋಕ್ಷವೆಂದು ಶ್ರುತಿಯು ಸ್ಪಷ್ಟವಾಗಿ ಹೇಳುತ್ತಿದೆ.

'ತಮೇವಂ ವಿದ್ವಾನ್ ಅಮೃತ ಇಹ
ಭವತಿ ನಾನ್ಯಃ ಪಂಥಾ ಅಯನಾಯ ವಿದ್ಯತೇ'

(ತೈ. ಆರಣ್ಯಕ 3-1-3)

ಭಗವಂತನನ್ನು ಗುಣಪೂರ್ಣನೆಂದು ತಿಳಿದವನು ಮಾತ್ರ ಈ ಲೋಕದಲ್ಲಿ ಮುಕ್ತನಾಗುತ್ತಾನೆ. ಮೋಕ್ಷಕ್ಕೆ ಜ್ಞಾನ ಮಾರ್ಗಕ್ಕಿಂತ ಬೇರೆ ಮಾರ್ಗವಿಲ್ಲ ಎಂದು ಶ್ರುತಿಯು ಉದ್ಘೋಷಿಸುತ್ತಿದೆ.

ಭಗವಂತನ ಪ್ರಸಾದದಿಂದಲೇ ಮುಕ್ತಿ

'ಯಮೇವೈಷ ವೃಣತೇ ತೇನ ಲಭ್ಯಃ'

(ಕಾಠಕ ಉಪನಿಷತ್ತು)

ಈ ಭಗವಂತ ಯಾರನ್ನು ಪ್ರಸನ್ನನಾಗಿ ವರಿಸುತ್ತಾನೋ ಅವರಿಗಷ್ಟೆ ಅವನು ಲಭ್ಯನಾಗುತ್ತಾನೆ ಎಂದು ಉಪನಿಷತ್ತು ಭಗವತ್ಪ್ರಾಪ್ತಿ ರೂಪವಾದ ಮೋಕ್ಷವಾಗಬೇಕಾದರೆ ಅವನ ಪ್ರಸಾದ ಕಾರಣ ಎಂದು ಹೇಳುತ್ತಿದೆ. ಆದ್ದರಿಂದ ಮೋಕ್ಷಕ್ಕೆ ಭಗವತ್ಪ್ರಸಾದ ನೇರವಾಗಿ ಕಾರಣ. ಭಗವಂತ ತನ್ನನ್ನು ದ್ವೇಷಮಾಡುವವರ ಮೇಲೆ ಪ್ರಸನ್ನನಾಗುವುದಿಲ್ಲ. ಯಾರು ಅವನನ್ನು ಸರಿಯಾಗಿ ತಿಳಿಯುತ್ತಾರೋ ಅವರಿಗೆ ಮಾತ್ರ ಅವನು ಪ್ರಸನ್ನನಾಗುತ್ತಾನೆ. ಇದನ್ನು ಕೃಷ್ಣ ಗೀತೆಯಲ್ಲಿ ಹೇಳಿದ್ದಾನೆ.

'ನಾನು ಜ್ಞಾನಿಗೆ ಬಹಳ ಪ್ರಿಯನಾಗಿದ್ದೇನೆ. ಜ್ಞಾನಿಯೂ ನನಗೆ ಪ್ರಿಯನಾಗಿದ್ದಾನೆ'

'ಪ್ರಿಯೋ ಹಿ ಜ್ಞಾನಿನೋऽತ್ಯರ್ಥಂ ಅಹಂ ಸ ಚ ಮಮ ಪ್ರಿಯಃ'

(ಭ.ಗೀ. 7-17)

ಆದ್ದರಿಂದ ಜ್ಞಾನದಿಂದ ಭಗವಂತನ ಪ್ರಸಾದವಾಗುವ ಮೂಲಕ ಮೋಕ್ಷವಾಗುತ್ತದೆ - ಎಂಬ ಸಿದ್ಧಾಂತವೇ ಸಕಲ ಶ್ರುತಿಸ್ಮೃತಿಗಳಿಗೆ ಅಭಿಪ್ರೇತವಾಗಿದೆ.

ದ್ವೇಷದಿಂದಲೂ ಮೋಕ್ಷವಾಗುತ್ತದೆ ಎಂಬ ವಿಷಯ ನಿಜವಾಗಿದ್ದರೆ 'ಬ್ರಹ್ಮಮೀಮಾಂಸಾ ಶಾಸ್ತ್ರ' ರಚಿಸಿದ ವೇದವ್ಯಾಸರು ಯಾಕೆ ತಮ್ಮ ಬ್ರಹ್ಮ ಸೂತ್ರಗಳಲ್ಲಿ ಈ ವಿಷಯವನ್ನು ಸ್ಫುಟವಾಗಿ ಹೇಳಿಲ್ಲ. ಹೀಗೂ ಒಂದು ಸುಲಭಸಾಧ್ಯವಾದ ಮೋಕ್ಷ ಮಾರ್ಗ ಇದ್ದಿದ್ದರೆ ತಪಸ್ಸು-ಉಪವಾಸಾದಿ ಗಳಿಂದ ದೇಹದಂಡನೆ ಮಾಡತಕ್ಕ ಅಪರೋಕ್ಷದರ್ಶಿಗಳಾದ ಋಷಿ-ಮುನಿಗಳಿಗೆ ಈ ಮಾರ್ಗ ಏಕೆ ಹೊಳೆಯಲಿಲ್ಲ? ಇದನ್ನು ತಮ್ಮ ಅಪರೋಕ್ಷಜ್ಞಾನದಿಂದ ತಿಳಿದು ಯಾಕೆ ಅವರು ಆಚರಣೆಗೆ ತರಲಿಲ್ಲ?

'ಕಿಮೇಷ ಮಾರ್ಗಃ ಸುಲಭೋ ನ ದೃಷ್ಟಃ
ಕಿಂ ವಾ ತಪಸ್ಯಾ ವ್ರತಕರ್ಶಿತಾಂಗೈಃ'

(ರುಗ್ಮಿಣೀಶ ವಿಜಯ 2-49)

ತ್ರಿವಿಧ ಜೀವಿಗಳಿಗೆ ತ್ರಿವಿಧಗತಿ

ಯಾರು ಜ್ಞಾನ-ಭಕ್ತಿ ಮುಂತಾದ ಸಾತ್ವಿಕ ಮಾರ್ಗವನ್ನು ಆಶ್ರಯಿಸಿರು ತ್ತಾರೋ ಅವರು ವೈಕುಂಠ ಮುಂತಾದ ಊರ್ಧ್ವಲೋಕಕ್ಕೆ ಹೋಗುತ್ತಾರೆ. ಯಾರು ರಾಜಸರೋ ಅವರು ನಿತ್ಯಸಂಸಾರಿಗಳಾಗಿ ಸ್ವರ್ಗ-ನರಕ-ಭೂಲೋಕಗಳಲ್ಲಿ ಸಂಚಾರ ಮಾಡುತ್ತಾ ನಿತ್ಯ ಸಂಸಾರದಲ್ಲೇ ಇರುತ್ತಾರೆ. ಯಾರು ಶ್ರೀಹರಿಯನ್ನು ದ್ವೇಷಿಸುವ ತಾಮಸಪ್ರವೃತ್ತಿ ಉಳ್ಳವರೋ ಅವರು ಅಂಧಂತಮಸ್ಸು ಮುಂತಾದ ಹೀನ ಲೋಕಗಳಿಗೆ ಹೋಗುತ್ತಾರೆಂದು

ಶ್ರೀಕೃಷ್ಣ ಭಗವದ್ಗೀತೆಯಲ್ಲಿ ನುಡಿದಿದ್ದಾನೆ.

''ಊರ್ಧ್ವಂ ಗಚ್ಛಂತಿ ಸತ್ವಸ್ಥಾಃ ಮಧ್ಯೇ ತಿಷ್ಠಂತಿ ರಾಜಸಾಃ।
ಜಘನ್ಯ ಗುಣವೃತ್ತಿಸ್ಥಾಃ ಅಧೋ ಗಚ್ಛಂತಿ ತಾಮಸಾಃ॥''

(ಭ.ಗೀತೆ-14-18)

ಸಂಬಂಧಾದ್ ವೃಷ್ಣಯಃ - ಯಾದವರು ಸಂಬಂಧದಿಂದ

ಯಾದವರು ಕೃಷ್ಣನ ಸಂಬಂಧಿಗಳಾಗಿ ಹುಟ್ಟಿ ಮೋಕ್ಷಪಡೆದರು ಎಂದು ಈ ವಾಕ್ಯದಿಂದ ಮೇಲ್ನೋಟಕ್ಕೆ ತೋರತಕ್ಕ ಅರ್ಥ. ಆದರೆ ಶ್ರೀಮದಾಚಾರ್ಯರು ಭಾಗವತತಾತ್ಪರ್ಯದಲ್ಲಿ ಈ ಮಾತಿನ ಸ್ಪಷ್ಟ ಅಭಿಪ್ರಾಯವನ್ನು ಬ್ರಹ್ಮತರ್ಕದ ಪ್ರಮಾಣ ವಚನದಿಂದ ವಿವರಿಸಿರುವರು- 'ವೃಷ್ಣಯೋ ಬಂಧುತಾಯುತಾಃ ಭಕ್ತಾಃ' ಯಾದವರು ಕೃಷ್ಣನಲ್ಲಿ ಭಕ್ತಿ ಹಾಗೂ ಬಂಧುತ್ವ ಎರಡೂ ಇರುವ ಭಕ್ತರು. ಕೇವಲ ಶ್ರೀಕೃಷ್ಣನ ಬಂಧುಗಳಾಗಿರುವುದರಿಂದ ಅವರಿಗೆ ಮುಕ್ತಿ ಸಿಕ್ಕಿರುವುದಿಲ್ಲ. ಅವರು ಭಕ್ತಿಯ ಜೊತೆಗೆ ಬಂಧುತಾಬುದ್ಧಿಯಿಂದ ಕೃಷ್ಣನಲ್ಲಿ ಮನಸ್ಸನ್ನು ನೆಲೆಗೊಳಿಸಿ ಮುಂದೆ ದೇವತೆಗಳಾದ ಮೇಲೆ ಯಥಾರ್ಥವಾದ ಭಕ್ತಿಯನ್ನೇ ಭಗವಂತನಲ್ಲಿ ಮಾಡಿ ಮೋಕ್ಷವನ್ನು ಪಡೆದರು.

ಸ್ನೇಹಾದ್ ಯೂಯಂ- ಸ್ನೇಹದಿಂದ ಪಾಂಡವರಾದ ನೀವು

ಭಗವಂತನಲ್ಲಿ ಸ್ನೇಹ ಮಾಡಿ ಪಾಂಡವರು ಮೋಕ್ಷವನ್ನು ಪಡೆದರು. ಅಂದರೆ ಅರ್ಜುನಾದಿ ಅವತಾರಗಳಲ್ಲಿ ಸ್ನೇಹಪ್ರಧಾನವಾದ ಭಕ್ತಿಯಿಂದ ಮುಕ್ತಿ ಪಡೆದರು ಎಂದರ್ಥ. ಭಕ್ತಿಯಲ್ಲಿ ಮಾಹಾತ್ಮ್ಯಜ್ಞಾನ ಹಾಗೂ ಸ್ನೇಹ - ಎಂಬ ಎರಡು ಅಂಶಗಳಿವೆ.

ಭಗವಂತನಲ್ಲಿ ಮಾಡುವ ಮಾಹಾತ್ಮ್ಯಜ್ಞಾನ ಮತ್ತು ಸ್ನೇಹ - ನಾರದಾದಿ ಋಷಿಗಳಲ್ಲಿ ಹಾಗೂ ಇಂದ್ರಾದಿದೇವತೆಗಳಲ್ಲಿ ಮತ್ತು ದೇವತೆಗಳ ಅವತಾರರಾದ ಅರ್ಜುನಾದಿಗಳಲ್ಲಿ ಹೆಚ್ಚು ಕಡಿಮೆ ಸಾಮ್ಯದಿಂದಾಗಿ ಭಕ್ತಿ ಮೂರು ವಿಧವಾಗುತ್ತದೆ.

1. ಇಂದ್ರಾದಿದೇವತೆಗಳಿಗೆ ಅರ್ಜುನಾದಿ ಅವತಾರಗಳಲ್ಲಿ ಮಾಹಾತ್ಮ್ಯ ಜ್ಞಾನಕ್ಕಿಂತಲೂ ಸ್ನೇಹ ಹೆಚ್ಚಾಗಿರುತ್ತದೆ.
2. ನಾರದಾದಿ ಮುನಿಗಳಿಗೆ ಭಗವಂತನಲ್ಲಿ ಸ್ನೇಹಕ್ಕಿಂತಲೂ ಮಾಹಾತ್ಮ್ಯಜ್ಞಾನ ಹೆಚ್ಚಾಗಿರುತ್ತದೆ.
3. ದೇವತೆಗಳು ಇಂದ್ರಾದಿ ಮೂಲರೂಪದಲ್ಲಿರುವಾಗ ಅವರಿಗೆ ಭಗವಂತನಲ್ಲಿ ಸ್ನೇಹ ಹಾಗೂ ಮಾಹಾತ್ಮ್ಯಜ್ಞಾನ ಎರಡೂ ಹೆಚ್ಚು.

ಇದನ್ನೇ ಆಚಾರ್ಯರು ಭಾಗವತತಾತ್ಪರ್ಯದಲ್ಲಿ ಬ್ರಹ್ಮತರ್ಕದ ಪ್ರಮಾಣವಚನವನ್ನು ಉದಾಹರಿಸುವ ಮೂಲಕ ತಿಳಿಸಿದ್ದಾರೆ-

'ಬಹುಮಾನಸ್ನೇಹ ಸಾಮ್ಯಾದ್ ದೇವಾ ಭಕ್ತಾಃ ಪ್ರಕೀರ್ತಿತಾಃ ।
ಸ್ನೇಹೋಪಸರ್ಜನಾದೇವ ಬಹುಮಾನಾನ್ಮುನೀಶ್ವರಾಃ ।
ಬಹುಮಾನೋಽಪಿ ದೇವಾನಾಮೃಷಿಭ್ಯೋಽಭ್ಯಧಿಕೋ ಮತಃ ॥'

(ಭಾಗವತ ತಾತ್ಪರ್ಯ ನಿರ್ಣಯ - 7-1-31)

ಆದ್ದರಿಂದ 'ಸ್ನೇಹಾದ್ ಯೂಯಂ' ಅಂದರೆ ದೇವತೆಗಳು ಅರ್ಜುನಾದಿ ರೂಪದಿಂದ ಅವತಾರ ಮಾಡಿದಾಗ ಸ್ನೇಹ ಪ್ರಧಾನವಾದ ಮಾಹಾತ್ಮ್ಯಜ್ಞಾನ ರೂಪಭಕ್ತಿಯಿಂದ ಮೋಕ್ಷ ಹೊಂದಿದರು ಎಂದು ಅಭಿಪ್ರಾಯವಾಗುವುದು. ಅರ್ಜುನಾದಿಗಳನ್ನು ದೇವತೆಗಳೆಂದು ತಿಳಿದಾಗ ಸ್ನೇಹವೆಂದರೆ ಮಾಹಾತ್ಮ್ಯಜ್ಞಾನದಷ್ಟೇ ಪ್ರಧಾನವಾದ ಸ್ನೇಹರೂಪವಾದ ಭಕ್ತಿಯಿಂದ ಮುಕ್ತರಾದರೆಂದು ತಾತ್ಪರ್ಯವಾಗುವುದು.

'ವಯಂ ಭಕ್ತ್ಯಾ' - ನಾರದರು ಹೇಳುತ್ತಾರೆ- ಋಷಿಗಳಾದ ನಾವು ಸ್ನೇಹಕ್ಕಿಂತಲೂ ಹೆಚ್ಚಿನದ್ದಾದ ಮಾಹಾತ್ಮ್ಯಜ್ಞಾನರೂಪ ಭಕ್ತಿಯಿಂದ ಮುಕ್ತರಾಗುತ್ತೇವೆ ಎಂದು.

ಸ್ನೇಹಬುದ್ಧಿ ಕಾಮಬುದ್ಧಿಯಿಂದಲೂ ಪಾಪವಿದೆಯೇ?

ಭಗವಂತನಲ್ಲಿ ದ್ವೇಷ ಮಾಡುವುದರಿಂದ ಪಾಪ ಉಂಟಾಗುತ್ತದೆ ಎಂಬ ವಿಷಯದಲ್ಲಿ ಎರಡು ಮಾತಿಲ್ಲ. ಆದರೆ ಶ್ರೀಹರಿಯಲ್ಲಿ ಗೋಪಿಕಾಸ್ತ್ರೀಯರು 'ಶ್ರೀಹರಿ ತನ್ನ ಪತಿ' ಎಂದು ಯಥಾರ್ಥವಾಗಿ ತಿಳಿದಿದ್ದರಿಂದ ಹೇಗೆ ಪಾಪ ಹೊಂದಿದರು? ಅರ್ಜುನ ಶ್ರೀಕೃಷ್ಣನನ್ನು ಸ್ನೇಹಿತ - ಎಂದು ತಿಳಿದಿದ್ದರಿಂದ ಪಾಪ ಹೊಂದಿದ ಎಂದು ಗೀತೆ ಹೇಳುತ್ತಿದೆ.

'ಸಖೇತಿ ಮತ್ವಾ ಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ ।
ಅಜಾನತಾ ಮಹಿಮಾನಂ ತವೇದಂ
ಮಯಾ ಪ್ರಮಾದಾತ್ ಪ್ರಣಯೇನ ವಾಽಪಿ ॥'

(ಭ.ಗೀತೆ- **11-41**)

ಇದು ಹೇಗೆ? ಅಂದರೆ ಜಗತ್ಪತಿಯಾದ ಭಗವಂತನನ್ನು ಗೋಪಿಕಾಸ್ತ್ರೀಯರು ನನಗೆ ಮಾತ್ರ ಪತಿ ಎಂದು ತಿಳಿದು ಕಾಮಬುದ್ಧಿ ಮಾಡಿದರು. ಹಾಗೆ **'ಸಮಃ ಪ್ರಿಯಃ ಸುಹೃದ್ ಬ್ರಹ್ಮನ್'** (ಭಾ.7-1-1) ಎಂದು ಸಮಸ್ತ ಜಗತ್ತಿಗೆ ಮಿತ್ರನೆನಿಸಿದ ಭಗವಂತನನ್ನು ತನಗೆ ಮಾತ್ರ ಸ್ನೇಹಿತ ಎಂದು ಅರ್ಜುನಾದಿಗಳು ಭಾವಿಸಿದ್ದರಿಂದ ಅವರಿಗೆ ಶ್ರೀಹರಿಯ ಬಗೆಗೆ ಇದ್ದ ಮಾಹಾತ್ಮ್ಯಜ್ಞಾನದಲ್ಲಿ ಸ್ವಲ್ಪ ಕೊರತೆ ಉಂಟಾಯಿತು. ಇದರಿಂದಾಗಿ ಪಾಪ ಬರುವುದು. ನರಕಾದಿ ದರ್ಶನ ರೂಪವಾದ

ಅನರ್ಥವೂ ಉಂಟಾಗಬಹುದು. ಆದ್ದರಿಂದಲೇ ಶ್ರೀಕೃಷ್ಣ ಹೇಳಿದರೂ ಯುಧಿಷ್ಠಿರ ಕೃಷ್ಣನ ಮೇಲಿನ ಸ್ನೇಹದಿಂದ ಜರಾಸಂಧನ ವಧೆಯಲ್ಲಿ ಸಂಶಯವನ್ನು ತಾಳಿದನು. ಆ ವಿಷಯದಲ್ಲಿ ಕೃಷ್ಣನ ಬಗ್ಗೆ ಅನ್ಯಥಾಜ್ಞಾನ ಪಡೆದನು. ಗೋಪಿಯಾದ ಯಶೋದೆಯು ಕೃಷ್ಣನನ್ನು ಮಗನೆಂದು ಭಾವಿಸಿ ಅವನ ಸರ್ವಶಕ್ತಿಯನ್ನು ತಿಳಿಯದೇ ಮರದ ಒರಳಿಗೆ ಹಗ್ಗದಿಂದ ಕಟ್ಟಿ ಹಾಕಿದಳು. ಹೀಗೆ ಉಂಟಾದ ಪಾಪವನ್ನು ಅವರು ದೇವತೆಗಳಾಗಿದ್ದಾಗ ಭಗವಂತನಲ್ಲಿ ಶುದ್ಧಭಕ್ತಿ ಮಾಡಿ ಪರಿಹರಿಸಿಕೊಂಡು ಮುಂದೆ ಮೋಕ್ಷವನ್ನು ಪಡೆಯುವರು.

ಆದ್ದರಿಂದ ದ್ವೇಷದಿಂದ ಮೋಕ್ಷವಾಗುವುದಿಲ್ಲ. ದ್ವೇಷ ಮಾಡಿದ್ದರಿಂದ ಶಿಶುಪಾಲನಲ್ಲಿ ಅವಿಷ್ಟನಾದ ಅಸುರನಿಗೆ ಅಂಧಂತಮಸ್ಸೇ ಉಂಟಾಯಿತು.

ಪೂತನಿಯ ವಿಷಯದಲ್ಲಿ ಹೇಗೆ ತಿಳಿಯಬೇಕು ?

ಭಾಗವತದಲ್ಲಿ ಲೋಕದ ಮಕ್ಕಳನ್ನು ಸಾಯಿಸಿದ ಪೂತನೆಯು ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ಸ್ತನ್ಯಪಾನ ಮಾಡಿಸಿದರೂ ಸ್ವರ್ಗಕ್ಕೆ ಹೋದಳೆಂದು ಹೇಳಿದೆ.

'ಪೂತನಾ ಲೋಕ ಬಾಲಘ್ನೀ ರಾಕ್ಷಸೀ ರುಧಿರಾಸವಾ ।
ಜಿಘಾಂಸಯಾऽಪಿ ಹರಯೇ ಸ್ತನಂ ದತ್ವಾऽಪ ಸದ್ಗತಿಂ ॥'

(ಭಾಗವತ-10-7-36)

ಪೂತನಿ ರಾಕ್ಷಸಿಯಾದರೂ ಕೃಷ್ಣನಿಗೆ ಸ್ತನ್ಯಪಾನ ಮಾಡಿಸಿದ್ದರಿಂದ ತಾಯಿಗೆ ಸಿಗಬೇಕಾದ ಸ್ವರ್ಗಸ್ಥಾನವನ್ನು ಹೊಂದಿದಳು-

ಯಾತುಧಾನ್ಯಪಿ ಸಾ ಸ್ವರ್ಗಂ ಅವಾಪ ಜನನೀಗತಿಂ ॥

(ಭಾ. 10-7-39)

ಆದರೆ ಪೂತನಿ ಕೃಷ್ಣಭಕ್ತಳಲ್ಲ. ಕೃಷ್ಣನನ್ನು ದ್ವೇಷಮಾಡಿ ಅವನನ್ನು ಸಾಯಿಸಲು ಬಂದವಳು. ಅವಳಿಗೆ ಉತ್ತಮ ಲೋಕಪ್ರಾಪ್ತಿ ಹೇಗೆ ಆಯಿತು? ಎಂದು ಪ್ರಶ್ನೆ ಬಂದಾಗ ಆಚಾರ್ಯರು ತಮ್ಮ ಮಹಾಭಾರತ ತಾತ್ಪರ್ಯನಿರ್ಣಯದಲ್ಲಿ ಈ ಪ್ರಶ್ನೆಗೆ ಉತ್ತರ ನೀಡಿದ್ದಾರೆ- ಪೂತನಿಯಲ್ಲಿ ತಾಟಕೆ- ಊರ್ವಶಿ ಎಂಬ ಎರಡು ಜೀವಿಗಳ ಸಮಾವೇಶವಿದೆ.

ಸ್ವರ್ಗದ ನಾರಿಯಾದ ಊರ್ವಶಿಯು ಕುಬೇರನ ಪತ್ನಿ. ಅವನ ಅನುಮತಿ ಇಲ್ಲದೆ ತುಂಬುರು ಎಂಬ ಗಂಧರ್ವನ ಸಂಗ ಮಾಡಿದಳು. ಕುಬೇರ ಅವಳಿಗೆ ರಾಕ್ಷಸಿಯಾಗೆಂದು ಶಾಪವನಿತ್ತ. ದೇವತೆಗಳು ರಾಕ್ಷಸ ಜನ್ಮ ಪಡೆಯ ಬೇಕಾದರೆ ರಾಕ್ಷಸರ ಜೊತೆಗೆ ಅವರ ಶರೀರದಲ್ಲಿ ಸೇರಿಕೊಳ್ಳಬೇಕಾಗು ತ್ತದೆ. ಆದ್ದರಿಂದ ತ್ರೇತಾಯುಗದಲ್ಲಿ ಶ್ರೀರಾಮನಿಂದ ಹತಳಾದ ತಾಟಕೆಯೆಂಬ ರಾಕ್ಷಸಿಯ ಜೊತೆಗೆ ಊರ್ವಶಿ- ಪೂತನಾಶರೀರದಲ್ಲಿ ವಾಸ ಮಾಡಿದಳು. ಪೂತನೆಯ ದೇಹದಲ್ಲಿದ್ದ ತಾಟಕೆ ಕೃಷ್ಣನನ್ನು ಕೊಲ್ಲುವ ಉದ್ದೇಶದಿಂದ ದ್ವೇಷದಿಂದಲೇ ಎದೆ ಹಾಲನ್ನು ಉಣಿಸಿದಳು. ಆದರಿಂದಾಗಿ ಅವಳು ಸದ್ಗತಿ ಎಂದರೆ ತಮಸ್ಸನ್ನು ಪಡೆದಳೆಂದೇ ಅರ್ಥ. 'ಸದ್' ಧಾತುವಿಗೆ ಅವಸಾದನ ಅಂದರೆ ನಾಶ - ಎಂಬ ಅರ್ಥವಿದೆ. ಪ್ರಕೃತದಲ್ಲಿನಾಶವೆಂದರೆ ದುರ್ಗತಿ - ಅಂಧಂತಮಸ್ಸು. ಆದರೆ ಪೂತನೆಯ ಶರೀರದಲ್ಲಿ ಇದ್ದ ಊರ್ವಶಿ ತನ್ನ ಎದೆಹಾಲನ್ನು ಕೃಷ್ಣ ಪಾನ ಮಾಡುವುದರಿಂದ ತಾನು ಪವಿತ್ರಳಾಗುವೆನೆಂದು ತಿಳಿದು ಭಕ್ತಿಯಿಂದಲೇ ಸ್ತನ್ಯಪಾನ ಮಾಡಿಸಿದ್ದಳು. ಇಂಥ ಶುದ್ಧ ಭಾವವನ್ನು ತಾಳಿದ ಅವಳು ಸದ್ಗತಿಯನ್ನು ಅಂದರೆ ಸ್ವರ್ಗವನ್ನು ಹೊಂದಿದಳೆಂದು ಈ ಭಾಗವತ ಶ್ಲೋಕದ ತಾತ್ಪರ್ಯವೆಂದು ಶ್ರೀಮದಾಚಾರ್ಯರು ತಮ್ಮ ತಾತ್ಪರ್ಯನಿರ್ಣಯ ದಲ್ಲಿ ಸ್ಪಷ್ಟಪಡಿಸಿರುವರು.

'ಸಾ ತಾಟಕಾ ಚೋರ್ವಶೀ ಸಂಪ್ರವಿಷ್ಟಾ
ಕೃಷ್ಣಾವಧ್ಯಾನಾನ್ನಿರಯಂ ಸಂಜಗಾಮ ।

ಸಾ ತ್ವೂರ್ವಶೀ ಕೃಷ್ಣಭುಕ್ತಸ್ತನೇನ ಪೂತಾ
ಸ್ವರ್ಗಂ ಪ್ರಯಯೌ ತತ್ಕ್ಷಣೇನ ॥'

(ಮ.ಭಾ.ತಾ.ನಿ. 12-88)

ಆದ್ದರಿಂದ ಪೂತನೆಯೂ ಕೃಷ್ಣನಲ್ಲಿ ದ್ವೇಷ ಮಾಡಿ ಅಂಧಂತಮಸ್ಸನ್ನೇ ಪಡೆದಳು.

ಭಾಗವತದಲ್ಲಿ-

ಯಾತುಧಾನ್ಯಪಿ ಸಾ ಸ್ವರ್ಗಂ ಅವಾಪ ಜನನೀಗತಿಂ।
ಕೃಷ್ಣಭುಕ್ತಸ್ತನಕ್ಷೀರಾಃ ಕಿಮು ಗಾವೋ ನು ಮಾತರಃ ॥

(ಭಾ.10-7-39)

ಎಂಬ ಶ್ಲೋಕಕ್ಕೆ ಈ ರೀತಿ ಅರ್ಥವನ್ನು ಹೇಳಬೇಕು.

'ಊರ್ವಶಿಯು ಕೃಷ್ಣದ್ವೇಷ ಮಾಡಿದ ತಾಟಕೆಯ ಸಂಗ ಮಾಡಿದರೂ ಅವಳು ಸ್ವಭಾವದಿಂದ ಕೃಷ್ಣಭಕ್ತಳಾದ್ದರಿಂದ ಆ ಸಂಗದಿಂದ ಉಂಟಾದ ಅವಳ ಪಾಪವನ್ನು ಕೃಷ್ಣ ಪರಿಹರಿಸಿ ಅವಳಿಗೆ ಮೋಕ್ಷ ನೀಡಿದ್ದಾನೆ. ಇನ್ನು ದುಷ್ಟಸಂಗ ಮಾಡದ ಕೃಷ್ಣನಿಗೆ ಹಾಲುಣಿಸಿದ ಗೋವುಗಳು, ತಾಯಂದಿರಿಗೆ ಮೋಕ್ಷ ಕೊಡುತ್ತಾನೆಂದು ಹೇಳಬೇಕೇನು?'

ಪುರಾಣಗಳಲ್ಲಿ ಏಕೆ ಇಂಥಹ ಅಸ್ಪಷ್ಟತೆ?

ದ್ವೇಷದಿಂದ ಮುಕ್ತಿ ಹೇಗೆ ಆಗಲು ಸಾಧ್ಯ? ಸತ್ಪಾತ್ರರಿಗೆ ಮಾಡಿದ ದಾನ, ತೀರ್ಥಕ್ಷೇತ್ರಯಾತ್ರೆ, ಶಾಸ್ತ್ರಾಭ್ಯಾಸ-ಧ್ಯಾನಾದಿರೂಪ ತಪಸ್ಸು, ಅಗ್ನಿಯಲ್ಲಿ ಭಗವಂತನ ಉದ್ದೇಶದಿಂದ ನೀಡುವ ಆಹುತಿ ರೂಪವಾದ ಯಜ್ಞ-ಇವೇ ಮುಂತಾದ ಸತ್ಕರ್ಮಗಳಿಂದಲೂ ನೇರವಾಗಿ ಮೋಕ್ಷವಾಗಲು ಸಾಧ್ಯವಿಲ್ಲ. ಇವುಗಳಿಂದ ಅಂತಃಕರಣ ಶುದ್ಧಿ ಉಂಟಾಗಿ ಭಗವಂತನಲ್ಲಿ ಭಕ್ತಿ ಹುಟ್ಟುವುದು. ಭಕ್ತಿಯಿಂದಲೇ ಮುಕ್ತಿ. ಮುಕ್ತಿಗೆ ಬೇರೆ

ಮಾರ್ಗವಿಲ್ಲ. ಇದು ಸಕಲ ಶಾಸ್ತ್ರಗಳ ಮಥಿತಾರ್ಥವೆಂದು ಪ್ರಮಾಣವಿದೆ-

'ದಾನತೀರ್ಥ ತಪೋಯಜ್ಞಪೂರ್ವಾಃ ಸರ್ವೇಽಪಿ ಸರ್ವದಾ ।
ಅಂಗಾನಿ ಹರಿಸೇವಾಯಾಂ ಭಕ್ತಿಸ್ತ್ವೇಕಾ ವಿಮುಕ್ತಯೇ ॥'

(ಮ.ಭಾ.ತಾ.ನಿ 1-99)

ಭಕ್ತಿಯಿಂದಲೇ ಮುಕ್ತಿಯಾಗುವುದಾದರೆ ವ್ಯಾಸರು ಏಕೆ ಈ ವಿಷಯವನ್ನು ನೇರವಾಗಿ ಹೇಳಲಿಲ್ಲ? 'ದ್ವೇಷಾತ್ ಚೈದ್ಯಾದಯೋ ನೃಪಾಃ' ಎಂದು ಸಂದೇಹ ಬರುವಂತೆ ಯಾಕೆ ಹೇಳಿದರು? ಎಂಬ ಪ್ರಶ್ನೆಗೆ ರುಗ್ಮಿಣೀಶ ವಿಜಯದಲ್ಲಿ (2-59) ಶ್ರೀವಾದಿರಾಜತೀರ್ಥರು ಉತ್ತರ ನೀಡಿರುವರು. ಸಂದಿಗ್ಧವಾಗಿ ಹೇಳಿದರೆ ಭಗವಂತನಲ್ಲಿ ದ್ವೇಷಮಾಡುವ ಅಸುರರು 'ದ್ವೇಷ ಮಾಡಿದರೆ ನಮಗೂ ಮೋಕ್ಷವಾಗುತ್ತದೆ' ಎಂದು ಭಾವಿಸಿ ಅವನಲ್ಲಿ ತಮ್ಮ ಸ್ವಭಾವಾನುಗುಣವಾಗಿ ಇನ್ನೂ ಹೆಚ್ಚು ದ್ವೇಷಮಾಡುವರು. ದ್ವೇಷದಿಂದ ತಮಸ್ಸು, ಭಕ್ತಿಯಿಂದ ಮುಕ್ತಿ ಎಂದು ಸ್ಪಷ್ಟವಾಗಿಯೇ ಎಲ್ಲಾ ಸಂದರ್ಭದಲ್ಲೂ ಹೇಳಿದರೆ ಅಸುರರೂ, ದೈತ್ಯರೂ ಅವನನ್ನು ದ್ವೇಷ ಮಾಡಲಾರರು. ತಮಗೆ ಯೋಗ್ಯವಾದ ತಮಸ್ಸಿಗೂ ಹೋಗಲಾರರು.

ಜ್ಞಾನ-ಭಕ್ತಿಗಳ ಸಮನ್ವಯ

ಜ್ಞಾನವು ಭಕ್ತಿಯ ಒಂದು ಭಾಗ. ಭಕ್ತಿಯಲ್ಲಿ ಮಾಹಾತ್ಮ್ಯಜ್ಞಾನವು ಸೇರಿಕೊಂಡಿದೆ. ಇವೆರಡು ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಆದುದರಿಂದ ಎರಡರಿಂದಲೂ ಮೋಕ್ಷವನ್ನು ಹೇಳುವ ಮಾತುಗಳು ಪರಸ್ಪರ ವಿರುದ್ಧವಾದುವುಗಳಲ್ಲ. ಅನ್ಯೋನ್ಯವಾಗಿ ಪೂರಕಗಳೇ. ಇತರ ಮತಗಳಲ್ಲಿ ಜ್ಞಾನಭಕ್ತಿಗಳು ಬೇರೆ ಬೇರೆಯಾದರೂ ಆಚಾರ್ಯ ಮಧ್ವರು ಮಾತ್ರ ಅವುಗಳು ಒಂದನ್ನು ಇನ್ನೊಂದು ಬೆಸೆದುಕೊಂಡಿವೆ ಎಂದು

ಪ್ರತಿಪಾದಿಸಿದರು. ಜ್ಞಾನವಿಲ್ಲದ ಭಕ್ತಿಯು ಕೇವಲ ಭಾವುಕತೆಯಲ್ಲಿ ಕೊನೆಗೊಳ್ಳುವುದು. ಭಕ್ತಿಯಿಲ್ಲದ ಜ್ಞಾನ ಕೇವಲ ಗೋಧಿಹಿಟ್ಟಿನಂತೆ ಶುಷ್ಕವೆನಿಸುವುದು-

ಜ್ಞಾನಸ್ಯ ಭಕ್ತಿಭಾಗತ್ವಾದ್ ಭಕ್ತಿರ್ಜ್ಞಾನಮಿತೀರ್ಯತೇ ।
ಜ್ಞಾನಸ್ಯೈವ ವಿಶೇಷೋ ಯದ್ ಭಕ್ತಿರಿತ್ಯಭಿಧೀಯತೇ ।

(ಅನುವ್ಯಾಖ್ಯಾನ 3-4-199)

'ನಾನ್ಯಃ ಪಂಥಾಃ ಅಯನಾಯ ವಿದ್ಯತೇ'

(ತೈ.ಆ.3.1-3)

ಎಂಬ ಶ್ರುತಿಯು ಮೋಕ್ಷಕ್ಕೆ ಜ್ಞಾನಮಾರ್ಗ ಬಿಟ್ಟು ಬೇರೆ ಮಾರ್ಗವಿಲ್ಲವೆಂದು ಸ್ಪಷ್ಟಪಡಿಸಿದೆ.

'ಭಕ್ತ್ಯಾ ತ್ವನನ್ಯಯಾ ಶಕ್ಯಃ' ಎಂಬ ಗೀತಾವಾಕ್ಯವು ಭಕ್ತಿಯಿಂದಲೇ ಮುಕ್ತಿ ಎನ್ನುತ್ತಿದೆ. ಆದರೂ ಈ ವಾಕ್ಯಗಳಿಗೆ ವಿರೋಧವಿಲ್ಲ. ಜ್ಞಾನ ಮತ್ತು ಭಕ್ತಿ ಇವೆರಡರಲ್ಲಿ ಒಂದು ಇರುವಾಗ ಇನ್ನೊಂದು ಅವಶ್ಯವಾಗಿ ಇರುವುದರಿಂದ ಒಂದರಿಂದಲೇ ಮುಕ್ತಿಯಾಗುತ್ತದೆ ಎಂಬ ವಚನಗಳು ಯುಕ್ತವಾಗುತ್ತವೆ. ಎರಡಿಲ್ಲದೇ ಒಂದರಿಂದಲೇ ಮುಕ್ತಿಯಿಲ್ಲ ಎಂದೇ ಆಚಾರ್ಯರು ನಿರ್ಣಯಿಸಿದ್ದಾರೆ.

ಜ್ಞಾನಭಕ್ತೀ ವಿನಾ ನೈವ ಮುಕ್ತಿಃ ಕಸ್ಯಾಪಿ ವಿದ್ಯತೇ ।
ತಯೋರೇಕತರೇಣೈವ ವಿಷ್ಣೋರ್ಗೇನೋಭಯಂ ವಿನಾ ॥

ಏವಮಪ್ಯೇತಯೋರೇಕಭಾವೇಽನ್ಯನಿಯತೇರ್ಧ್ರುವಂ ।
ಏಕೇನಾಪಿ ಭವೇನ್ಮುಕ್ತಿಸ್ತದರ್ಥಂ ತ್ವನ್ಯಸಾಧನಂ ॥

(ಅನುವ್ಯಾಖ್ಯಾನ)

ಮಾಹಾತ್ಮ್ಯಜ್ಞಾನ

ಭಕ್ತಿಯಲ್ಲಿ ಸೇರಿದ ಮಾಹಾತ್ಮ್ಯಜ್ಞಾನದ ಸ್ವರೂಪವನ್ನು ಶ್ರೀಮದಾಚಾರ್ಯರು ಗೀತಾತಾತ್ಪರ್ಯದಲ್ಲಿ ಹೀಗೆ ನಿರೂಪಿಸಿದ್ದಾರೆ.

'ಬ್ರಹ್ಮರುದ್ರರಮಾದಿಭ್ಯೋಽಪ್ಯುತ್ತಮತ್ವಂ ಸ್ವತಂತ್ರತಾಂ ।
ಸರ್ವಸ್ಯ ತದಧೀನತ್ವಂ ಸರ್ವಸದ್ಗುಣ ಪೂರ್ಣತಾಂ ॥
ನಿರ್ದೋಷತ್ವಂ ಚ ವಿಜ್ಞಾಯ ವಿಷ್ಣೋಸ್ತತ್ರಾಖಿಲಾಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಃ.........॥ (ಗೀತಾತಾತ್ಪರ್ಯ)

1. ಬ್ರಹ್ಮ, ರುದ್ರ, ರಮಾದೇವಿಯರು ಮುಂತಾದ ಕ್ಷರಾಕ್ಷರರಿಂದ ಹಾಗೂ ಜಡಗಳಿಂದ ಶ್ರೀಹರಿಯು ಉತ್ತಮ ಎಂದು ತಿಳಿಯುವುದು.
2. ಶ್ರೀಹರಿಯು ಸ್ವತಂತ್ರ ಎಂಬ ಜ್ಞಾನ.
3. ಜಗತ್ತೆಲ್ಲ ಅವನ ಅಧೀನ ಎಂಬ ತಿಳಿವು.
4. ವಿಷ್ಣು ಸಕಲ ಸದ್ಗುಣಪೂರ್ಣ ಎಂದು ಬಗೆಯುವುದು.
5. ಅವನು ನಿರ್ದುಷ್ಟ ಎಂದು ತಿಳಿದು ಉಳಿದೆಲ್ಲ ಪದಾರ್ಥಗಳಿಗಿಂತ ಹೆಚ್ಚು ಅವನಲ್ಲಿ ಸ್ನೇಹ ಮಾಡುವುದೇ ಭಕ್ತಿ.

ಶ್ರೀಹರಿಯಲ್ಲಿ ಭಕ್ತಿಮಾಡುವಾಗ ನಿಷಿದ್ಧವಾದ ಪದಾರ್ಥದಲ್ಲಿ ಇಚ್ಛೆಯನ್ನು ತೊರೆಯಬೇಕು. ನವವಿಧ ದ್ವೇಷಗಳನ್ನು ನಿವಾರಿಸಿಕೊಳ್ಳ ಬೇಕು. ಭಗವಂತನ ಎಲ್ಲಾ ರೂಪಗಳು ನಿರ್ದೋಷತ್ವ, ಗುಣಪೂರ್ಣತ್ವಾದಿಗಳಿಂದ ಸಮವಾಗಿವೆ ಎಂಬ ಅರಿವಿರಬೇಕು. ಇಂತಹ ಭಕ್ತಿರೂಪ ಉಪಾಯದಿಂದಲೇ ಭಗವಂತನ ಪ್ರಾಪ್ತಿಯಾಗುತ್ತದೆ.

ಇಚ್ಛಾದ್ವೇಷ ವಿಹೀನೇನ ಸರ್ವತ್ರ ಸಮಚೇತಸಾ ।
ಭಗವದ್ಭಕ್ತಿಯೋಗೇನ ಪ್ರಾಪ್ತೋ ಭಾಗವತೀಂ ಗತಿಂ ॥

(ಭಾಗ. 3-26-48)

ನವವಿಧ ದ್ವೇಷಗಳು

ವಿಷ್ಣುವಿನಲ್ಲಿ ಮಾಡುವ ಭಕ್ತಿಯು ನವವಿಧ ದ್ವೇಷ ರಹಿತವಾಗಬೇಕೆಂದು ಹೇಳಲಾಗಿದೆ. ನವವಿಧ ದ್ವೇಷಗಳನ್ನು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಶ್ರೀಮದಾಚಾರ್ಯರು ಹೀಗೆ ನಿರೂಪಿಸಿದ್ದಾರೆ-

ಜೀವಾಭೇದೋ ನಿರ್ಗುಣತ್ವಂ ಅಪೂರ್ಣಗುಣತಾ ತಥಾ ।
ಸಾಮ್ಯಾಧಿಕ್ಯೇ ತದನ್ಯೇಷಾಂ ಭೇದಸ್ತದ್ಗತ ಏವ ಚ ॥

ಪ್ರಾದುರ್ಭಾವ ವಿಪರ್ಯಾಸಃ ತದ್ಭಕ್ತದ್ವೇಷ ಏವ ಚ ।
ತತ್ಪ್ರಮಾಣಸ್ಯ ನಿಂದಾ ಚ ದ್ವೇಷಾ ಏತೇಽಖಿಲಾ ಮತಾಃ ।
ಏತೈರ್ವಿಹೀನಾ ಯಾ ಭಕ್ತಿಃ ಸಾ ಭಕ್ತಿರಿತಿ ನಿಶ್ಚಿತಾ ॥

(ಮ.ಭಾ.ತಾ.ನಿರ್ಣಯ 1-110, 111, 112, 113)

1. ಶ್ರೀಹರಿಗೆ ಜೀವನಿಂದ ಅಭೇದವನ್ನು ತಿಳಿಯುವುದು.
2. ಭಗವಂತನು ಜ್ಞಾನ ಆನಂದ ಮೊದಲಾದ ಅಪ್ರಾಕೃತ ಗುಣಗಳಿಂದ ರಹಿತನು ಎಂದು ಬಗೆಯುವುದು. ಅಂದರೆ ಅವನು ನಿರ್ಗುಣ ಎಂದು ತಿಳಿಯುವುದು.
3. ಅವನು ಗುಣಪರಿಪೂರ್ಣನಲ್ಲ ಎಂದು ತಿಳಿಯುವುದು. ಹಾಗೂ ಅವನಲ್ಲಿರುವ ಒಂದೊಂದು ಗುಣಗಳೂ ಅಪರಿ ಪೂರ್ಣ ಎಂದು ಬಗೆಯುವುದು. ಅಥವಾ ಅವನಲ್ಲಿ ಎಲ್ಲಾ ಗುಣಗಳು ಇಲ್ಲ, ಕೆಲವಷ್ಟೇ ಗುಣಗಳು ಇವೆ ಎಂದು ತಿಳಿಯುವುದು.
4. ಅವನಿಗೆ ಬ್ರಹ್ಮರುದ್ರರಮಾದಿಗಳಿಂದ ಸಾಮ್ಯವನ್ನಾಗಲಿ
5. ಆಧಿಕ್ಯವನ್ನಾಗಲಿ ಚಿಂತಿಸುವುದು.

6. ಶ್ರೀಹರಿಯ ರೂಪಗಳಿಗೆ, ಅವಯವಗಳಿಗೆ, ಗುಣಗಳಿಗೆ ಕ್ರಿಯೆ ಮುಂತಾದವುಗಳಿಗೆ ಭೇದದ ಚಿಂತನೆ.
7. ಅವತಾರಾದಿಗಳಲ್ಲಿ ವಿಪರೀತ ಜ್ಞಾನವನ್ನು ಪಡೆಯುವುದು. ಅಂದರೆ ಭಗವಂತನ ಮೂಲರೂಪದಷ್ಟು ಅವತಾರ ರೂಪಗಳಿಗೆ ಸಾಮರ್ಥ್ಯವಿಲ್ಲ. ಶ್ರೀಕೃಷ್ಣ ಪೂರ್ಣಾವತಾರ, ಶ್ರೀರಾಮನು ಅರ್ಧಾವತಾರ, ಶ್ರೀರಾಮನಿಗೆ ಇರುವ ಶಕ್ತಿ ಪರಶುರಾಮದೇವರಿಗೆ ಇಲ್ಲ - ಇತ್ಯಾದಿಯಾಗಿ ತಿಳಿಯುವುದು. ಮತ್ತು ಭಗವಂತನ ಅವತಾರವಲ್ಲದ ಬಲರಾಮಾದಿಗಳನ್ನು ಭಗವಂತನ ಅವತಾರ ಎಂದು ಬಗೆಯುವುದು, ವೇದವ್ಯಾಸ ಮುಂತಾದ ಅವತಾರಗಳನ್ನು ಭಗವಂತನ ಅವತಾರವಲ್ಲವೆಂದು ತಿಳಿಯುವುದು.
8. ವಿಷ್ಣುಭಕ್ತ ಎಂಬ ಕಾರಣದಿಂದ ದ್ವೇಷ ಮಾಡುವುದು.
9. ಭಗವಂತನನ್ನು ಪ್ರತಿಪಾದಿಸುವ ಸಚ್ಛಾಸ್ತ್ರಗಳ ನಿಂದೆ.

ಈ ನವವಿಧ ದ್ವೇಷರಹಿತವಾದ ಭಕ್ತಿಯೇ ಉತ್ತಮ ಭಕ್ತಿ ಎನಿಸುವುದು.

'ದ್ವೇಷೋಜ್ಝಿತಾ ಚ ಯಾ ಭಕ್ತಿಃ ಸಾ ಮೋಕ್ಷಂ ನಿಯಮಾದ್ ವ್ರಜೇತ್'
(ಬೃಹದ್ಭಾಷ್ಯ)

ಇನ್ನೂ ಹಲವಾರು ದ್ವೇಷಗಳನ್ನು ಬೃಹದ್ಭಾಷ್ಯದಲ್ಲಿ ಹೇಳಲಾಗಿದೆ.

'ಸ್ವಾತ್ಮೋತ್ತಮೇಷು ವಿದ್ವೇಷಾತ್ ತಮೋ ನಿಯಮತೋ ವ್ರಜೇತ್ ।
ಗುಣಾನಾಮಲ್ಪತೋ ಜ್ಞಾನಂ ತತ್‌ಸ್ತ್ರೀರಾಗಸ್ತಥೈವ ಚ ।
ತತ್ಪ್ರತೀಪೇ ಚ ಯಾ ಬುದ್ಧಿಸ್ತ್ರಿವಿಧೋ ದ್ವೇಷ ಉಚ್ಯತೇ ।
(ಬೃ.ಭಾ.)

ತನಗಿಂತ ಉತ್ತಮರಲ್ಲಿ ದ್ವೇಷ ಮಾಡುವವನು ತಪ್ಪದೆ

ಅಂಧಂತಮಸ್ಸನ್ನು ಹೊಂದುವನು. ಉತ್ತಮರಲ್ಲಿ ಇರುವ ಗುಣಗಳಲ್ಲಿ ಅಲ್ಪತಾಬುದ್ಧಿ, ಸ್ವೋತ್ತಮರ ಸ್ತ್ರೀಯರಲ್ಲಿ ಅನುರಾಗ ಅಥವಾ ಸಂಗ, ಸ್ವೋತ್ತಮರ ದ್ವೇಷಿಗಳಲ್ಲಿ ಅನುರಾಗ ಅಥವಾ ಸಂಗ ಮಾಡುವುದು - ಇವು ಮೂರು ಅಂಧಂತಮಸ್ಸಿಗೆ ಕಾರಣವಾಗುವುದು. ಆದುದರಿಂದ ದ್ವೇಷರಹಿತವಾದ ಸದ್ಭಕ್ತಿಯೇ ಮೋಕ್ಷಕ್ಕೆ ಕಾರಣವೆಂದು ತಿಳಿಯಬೇಕು.

ಶ್ರೇಷ್ಠಭಕ್ತಿಯ ಸ್ವರೂಪ

ಫಲಾಪೇಕ್ಷೆಯಿಲ್ಲದೆ ನಿರ್ನಿಮಿತ್ತಕವಾಗಿ ಶ್ರೀಹರಿಯಲ್ಲಿ ಮಾಡುವ ಭಕ್ತಿಯೇ 'ಶ್ರೇಷ್ಠಭಕ್ತಿ' ಎನಿಸುತ್ತದೆ.

'ಅನಿಮಿತ್ತಾ ಭಗವತಿ ಭಕ್ತಿಃ ಸಿದ್ಧೇಃ ಗರೀಯಸೀ'

(ಭಾಗ. 3-26-32)

ದೇವತೆಗಳಿಗೆ ಭಗವಂತನಲ್ಲಿ ಸ್ವಾಭಾವಿಕ ಭಕ್ತಿ ಇರುತ್ತದೆ. ವೇದೋಕ್ತ ಕರ್ಮಾನುಷ್ಠಾನ ಮಾಡುವ ದೇವತೆಗಳ ಸ್ವಾಭಾವಿಕ ಭಕ್ತಿಯನ್ನು ಅವರ ಜ್ಞಾನಾದಿಕಾರ್ಯ ರೂಪ ಧರ್ಮಗಳಿಂದ ಊಹಿಸಬಹುದಾಗಿದೆ. ಗುಣಪರಿಪೂರ್ಣನಾದ ಶ್ರೀಹರಿಯಲ್ಲಿ ಮನಸ್ಸನ್ನು ಇಟ್ಟಿದ್ದರಿಂದ ಅವರಿಗೆ ಶ್ರೀಹರಿಯಲ್ಲಿ ಭಕ್ತಿ ಉಂಟಾಗುತ್ತದೆ ಎಂದು ಭಾಗವತ ಹೇಳುತ್ತದೆ.

'ದೇವಾನಾಂ ಗುಣಲಿಂಗಾನಾಂ ಆನುಶ್ರವಿಕ ಕರ್ಮಣಾಂ ।
ಸತ್ತ್ವ ಏವೈಕಮನಸೋ ವೃತ್ತಿಃ ಸ್ವಾಭಾವಿಕೀ ತು ಯಾ ॥

(ಭಾಗವತ)

ಭಕ್ತಿಯ ಚಿಹ್ನೆಗಳು

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಂ ಆತ್ಮನಿವೇದನಂ ॥

ಇತಿ ಪುಂಸಾऽರ್ಪಿತಾ ನಿತ್ಯಂ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇऽಧೀತಮುತ್ತಮಂ ॥
(ಭಾಗವತ ಸ್ಕಂದ - 7)

ಹಿರಣ್ಯಕಶಿಪುವು ಬಾಲಕ ಪ್ರಹ್ಲಾದನನ್ನು ಶುಕ್ರಾಚಾರ್ಯರ ಮಕ್ಕಳಾದ ಶಂಡಾಮರ್ಕರ ಪಾಠಶಾಲೆಗೆ ಕಳುಹಿಸಿ ಓದಿಸುತ್ತಿದ್ದಾನಷ್ಟೆ. ಅಲ್ಲಿ ಶಂಡಾಮರ್ಕರು ಬೋಧಿಸುತ್ತಿದ್ದ ಅದ್ವೈತಪಾಠವನ್ನು ಪ್ರಹ್ಲಾದನು ಕೇಳುತ್ತಿದ್ದನು. ಆದರೆ ಅದನ್ನು ಸರಿಯೆಂದು ಭಾವಿಸಿರಲಿಲ್ಲ. ಪಾಠಶಾಲೆಯಿಂದ ಮನೆಗೆ ಹಿಂತಿರುಗಿದ ಬಾಲಕನನ್ನು ತಂದೆ ತೊಡೆಯಮೇಲೆ ಕೂಡಿಸಿಕೊಂಡು ಮುಖವನ್ನು ಅರಳಿಸಿಕೊಂಡು. ಮಗುವೇ ಇಷ್ಟು ದಿವಸ ನೀನು ಗುರುಗಳ ಹತ್ತಿರ ಓದಿದ ವಿಷಯಗಳಲ್ಲಿ ಉತ್ತಮವಾದ ಒಂದು ವಿಷಯವನ್ನು ಹೇಳು ಎಂದು ಕೇಳಿದಾಗ ಪ್ರಹ್ಲಾದರಾಯರು ಭಕ್ತಿಯ ನವವಿಧ ಬಾಹ್ಯಚಿಹ್ನೆಯನ್ನೆ ಓದಿದುದರಲ್ಲಿ ಶ್ರೇಷ್ಠವಾದುದೆಂದು ಹೇಳುವರು. ಆ ಭಕ್ತಿಯ ಒಂಬತ್ತು ಚಿಹ್ನೆಗಳು ಹೀಗಿವೆ.

1. ಶ್ರೀಹರಿಯ ಕಥೆಗಳನ್ನು ಆಲಿಸುವುದು.
2. ಅವನ ಸ್ತೋತ್ರ ಮಾಡುವುದು.
3. ಸ್ಮರಣೆ ಮಾಡುವುದು.
4. ಪಾದಸೇವೆ ಮಾಡುವುದು.
5. ಪೂಜೆಯನ್ನು ಮಾಡುವುದು.
6. ಭಗವಂತನಿಗೆ ನಮಸ್ಕರಿಸುವುದು.
7. 'ದಾಸೋऽಹಂ ಕೌಸಲೇಂದ್ರಸ್ಯ' - ಎಂದು ಅವನ ದಾಸನೆಂದು ಭಾವಿಸುವುದು.
8. ಅವನಲ್ಲಿ ಸ್ನೇಹವನ್ನು ಮಾಡುವುದು.

9. ಮೋಕ್ಷದಲ್ಲಿಯೂ ಭಗವಂತನು ಅಂತರ್ಯಾಮಿಯಾಗಿ ಸ್ವಾಮಿಯಾಗಿರುವನೆಂದು ತಿಳಿಯುವುದು.

ಇವು ಭಕ್ತಿಯ ಸ್ವರೂಪಗಳಲ್ಲ. 'ನವಲಕ್ಷಣಾ' ಎಂದು ಭಕ್ತಿಯ ಒಂಬತ್ತು ಬಾಹ್ಯಚಿಹ್ನೆಗಳೆಂದು ಪ್ರಹ್ಲಾದರಾಯರು ಪ್ರತಿಪಾದಿಸಿದ್ದಾರೆ. ಇಲ್ಲಿ ಹೇಳಿದ ಲಕ್ಷಣವು ಅಸಾಧಾರಣ ಧರ್ಮ ರೂಪವಾದುದಲ್ಲ. ಸ್ನೇಹವು ಅಂತಃಕರಣ ಧರ್ಮವಾಗಿದೆ. ಇದು ಬೇರೊಬ್ಬರಿಗೆ ಕಾಣಸಿಗದ ಕಾರಣ ಹಿಂದೆ ಹೇಳಿದ ಒಂಬತ್ತು ಚಿಹ್ನೆಗಳಿಂದ ಅದನ್ನು ಊಹಿಸಿ ತಿಳಿಯ-ಬಹುದಾಗಿದೆ. ಅಂದರೆ ಯಾರಾದರೂ ಭಗವತ್ಕಥಾ ಶ್ರವಣಾದಿಗಳನ್ನು ಮಾಡುತ್ತಿದ್ದರೆ ಇವನು ಭಗವದ್ಭಕ್ತನೆಂದೂ ಊಹಿಸ ಬಹುದು. ಹೀಗೆ ಒಬ್ಬರಲ್ಲಿ ಇರುವ ಭಗವದ್ಭಕ್ತಿಯನ್ನು ಊಹಿಸಲು ಈ ಒಂಬತ್ತು ಚಿಹ್ನೆಗಳು ಸಹಕಾರಿಗಳಾಗಿವೆ.

ವಿಷ್ಣೋಸ್ತು ಶ್ರವಣೇ ಪರೀಕ್ಷಿದಭವದ್
ವೈಯಾಸಕಿಃ ಕೀರ್ತನೇ,
ಪ್ರಹ್ಲಾದಃ ಸ್ಮರಣೇ ತದಂಘ್ರಿಭಜನೇ ಲಕ್ಷ್ಮೀಃ
ಪೃಥುಃ ಪೂಜನೇ ।

ಅಕ್ರೂರಸ್ತ್ವಭಿವಂದನೇ ಚ ಹನುಮಾನ್ ದಾಸ್ಯೇ ಚ,
ಸಖ್ಯೇಽರ್ಜುನಃ ಸರ್ವಸ್ವಾತ್ಮನಿವೇದನೇ ಬಲಿರಭೂತ್
ಕೈವಲ್ಯಮೇಷಾಂ ಸಮಃ ॥

ಭಕ್ತಿಯ ಈ ಒಂಬತ್ತು ಚಿಹ್ನೆಗಳಲ್ಲಿ ಒಂದೊಂದು ಚಿಹ್ನೆಗಳನ್ನು ಪೂರ್ಣವಾಗಿ ಅಳವಡಿಸಿ ಶ್ರೀಹರಿಯಲ್ಲಿ ಭಕ್ತಿಮಾಡಿ ಮೋಕ್ಷ ಪಡೆದವರನ್ನು ಮೇಲಿನ ಶ್ಲೋಕವು ಪಟ್ಟಿ ಮಾಡಿದೆ.

ಭಗವಂತನ ಅಪಾರ ಮಹಿಮೆಯನ್ನು ಸಮಾಧಿ ಭಾಷೆಯ ಮೂಲಕ ಪ್ರತಿಪಾದಿಸುವ ಶ್ರೀ ಮದ್ಭಾಗವತವನ್ನು ಕೀರ್ತನೆ ಮಾಡಿದ ಶುಕಾಚಾರ್ಯರು,

ಹಾಗು ಶ್ರವಣ ಮಾಡಿ ಪರೀಕ್ಷಿದ್ ರಾಜನು - **'ಭೇಜೇ ಖಗೇಂದ್ರ ಧ್ವಜಪಾದಮೂಲಂ'** (ಭಾಗವತ) ಎಂದು ಭಾಗವತ ಹೇಳುವಂತೆ ಶ್ರೀಹರಿಯ ಪಾದಮೂಲವೆನಿಸಿದ ವೈಕುಂಠಧಾಮವನ್ನು ಪಡೆದರು.

ಹಿರಣ್ಯಕಶಿಪುವು ಪ್ರಹ್ಲಾದರಾಯರಿಗೆ ನೀಡದ ಶಿಕ್ಷೆಯಿಲ್ಲ. ಸಾಯಿಸಲು ಮಾಡದ ಉಪಾಯಗಳಿಲ್ಲ. ಈ ಎಲ್ಲ ಸಂದರ್ಭದಲ್ಲಿ ಪ್ರಹ್ಲಾದರಾಯರು ಭಗವಂತನ ಸ್ಮರಣೆಯಲ್ಲಿ ನಿರತರಾಗುತ್ತಿದ್ದರು. ಹೀಗೆ ಶ್ರೀಹರಿಯ ಸ್ಮರಣೆಯಿಂದ ಸಕಲವಿಧ ಆಪತ್ತುಗಳಿಂದ ಪಾರಾಗಿ ಭಗವಂತನ ಸ್ಮರಣೆಯ ಮೂಲಕ ಅವನ ಭಕ್ತಿಯನ್ನು ಲೋಕದಲ್ಲಿ ಮೆರೆಸಿದವರು ಪ್ರಹ್ಲಾದರಾಯರು.

ಸದಾ ಶ್ರೀಹರಿಯ ಪಾದಸೇವೆಯನ್ನು ಮಾಡುತ್ತಿರುವ ಮಹಾಲಕ್ಷ್ಮಿಯು ಭಗವಂತನಲ್ಲಿ ಅವ್ಯಾಹತವಾದ ಭಕ್ತಿ ಮಾಡುತ್ತಿರುವಳು. ಪೃಥು ಮಹಾರಾಜನು ಪೂಜೆಗೆ ಹೆಸರಾದವನು. ಅಭಿವಂದನ ಅಂದರೆ ನಮಸ್ಕಾರ ಮಾಡಿ ಭಗವಂತನ ವಿಶ್ವರೂಪದ ಸಾಕ್ಷಾತ್ಕಾರ ಪಡೆದವನು ಅಕ್ರೂರ.

'ದಾಸೋಽಹಂ ಕೋಸಲೇಂದ್ರಸ್ಯ ರಾಮಸ್ಯಾದ್ಭುತ ಕರ್ಮಣಃ' (ರಾಮಾಯಣ-ಸುಂದರಕಾಂಡ) ಎಂದು ಲಂಕೆಯಲ್ಲಿ ರಾವಣನ ಎದುರು ಶ್ರೀರಾಮನ ದಾಸನೆಂದು ಉದ್ಘೋಷಿಸಿಕೊಂಡ ಹನುಮಂತನು ದಾಸ್ಯಕ್ಕೆ ಹೆಸರುವಾಸಿಯಾದವನು.

ಶ್ರೀಕೃಷ್ಣನಲ್ಲಿ ಅಸಾಧಾರಣ ಸ್ನೇಹವನ್ನು ಮಾಡಿ ಸಖ್ಯದಿಂದ ಮೆರೆದ ಅರ್ಜುನನು ಸಖ್ಯಕ್ಕೆ ಪ್ರಸಿದ್ಧನಾದವನು.

ಮೂರು ಹೆಜ್ಜೆಯ ಮೂಲಕ ಸಮಸ್ತ ಭೂಮಂಡಲವನ್ನು ಅಳೆದು ವಾಮನರೂಪಿ ಶ್ರೀಹರಿಗೆ ಸಕಲವನ್ನು ಹಾಗು ತನ್ನನ್ನು ಸಮರ್ಪಿಸಿದ ಬಲಿ ಚಕ್ರವರ್ತಿ ಆತ್ಮನಿವೇದನೆಗೆ ನಿದರ್ಶನಭೂತನಾಗಿದ್ದಾನೆ. ಹೀಗೆ ಭಕ್ತಿಯ ಈ ಒಂಬತ್ತು ಚಿಹ್ನೆಗಳಲ್ಲಿ ಒಂದೊಂದು ಚಿಹ್ನೆಯು ಫಲಕಾರಿಯಾದುದು.

ಭಕ್ತಿಯ ಆಂತರಿಕ ಚಿಹ್ನೆಗಳು

ಹಿಂದೆ ಹೇಳಿದ ಒಂಬತ್ತು ಚಿಹ್ನೆಗಳು ಭಕ್ತಿ ಸೂಚಕವಾದ ಬಾಹ್ಯಚಿಹ್ನೆಗಳಾದರೆ, ಭಕ್ತಿಯ ಸ್ವರೂಪಭೂತಗಳಾದ ಆಂತರಿಕ ಚಿಹ್ನೆಗಳನ್ನು ಶ್ರೀಮದಾಚಾರ್ಯರು ತಿಳಿಸಿದ್ದಾರೆ.

'ಚಿತ್ತದ್ರವಸ್ತಥಾ ಸ್ಥೈರ್ಯಂ ಪ್ರಸಾದೋ ಭಕ್ತಿಲಕ್ಷಣಂ ।
ಆಧಿಕ್ಯೇನ ತು ತತ್ರಾಪಿ ಸ್ಥೈರ್ಯಮೇವ ವಿಶೇಷತಃ ॥

ಡಂಬಸ್ಯ ಚಲಭಕ್ತೇಶ್ಚ ಯಸ್ಮಾದಶ್ರ್ವಾದಿಕಂ ಭವೇತ್ ।
ಡಂಬಾದಿ ಪರಿಹಾರಾರ್ಥಂ ನಿಗೃಹ್ಣೀಯಾಚ್ಚ ಧೀರಧೀಃ ॥

(ಶ್ರೀಭಾಗವತತಾತ್ಪರ್ಯ 11-14-24)

ಮನಸ್ಸು ಕರಗುವುದು, ಸ್ಥಿರತೆ, ಮನಃಪ್ರಸನ್ನತೆ ಇವು ಭಕ್ತಿಯ ಆಂತರಿಕ ಲಕ್ಷಣಗಳು. ಈ ಎಲ್ಲ ಲಕ್ಷಣಗಳಲ್ಲಿ ವಿಶೇಷವಾಗಿ ಸ್ಥಿರತೆಯೇ ಹೆಚ್ಚಾಗಿ ಭಕ್ತಿಯ ಲಕ್ಷಣವೆನಿಸಿದೆ. ಭಕ್ತಿಯಿಲ್ಲದಿದ್ದರೂ ಆದರ ಪ್ರದರ್ಶನ ಡಂಬವೆನಿಸುತ್ತದೆ. ಕಣ್ಣೀರು ಅಳು ಮುಂತಾದವು ಡಂಬದ ಸಂದರ್ಭದಲ್ಲಿ ಚಲಭಕ್ತಿಯಿಂದ ಉಂಟಾಗುತ್ತದೆ. ಆದ್ದರಿಂದ ಜ್ಞಾನಿಯಾದವನು ಅವುಗಳನ್ನು ನಿಗ್ರಹಿಸಬೇಕು.

ಮುಕ್ತರಿಗೂ ಭಕ್ತಿಯಿದೆ

ಮುಕ್ತಿಗಿಂತ ಮೊದಲು ಮಾಡಿದ ಭಕ್ತಿಯು ಮುಕ್ತಿಗೆ ಕಾರಣ ವಾಗುತ್ತದೆ. ಮುಕ್ತರಿಗೂ ನಿತ್ಯವಾದ ಆನಂದಸ್ವರೂಪವಾದ ಭಕ್ತಿಯಿದೆ.

'ಮುಕ್ತಾನಾಮಪಿ ಭಕ್ತಿರ್ಹಿ ನಿತ್ಯಾನಂದ ಸ್ವರೂಪಿಣೀ'

(ಮ.ಭಾ.ತಾತ್ಪರ್ಯನಿರ್ಣಯ 1-113)

ಮುಕ್ತಿಯಾಗುವವರೆಗೆ ಭಕ್ತಿಯ ವಿಧಾನ ಸಂಧ್ಯಾವಂದನಾದಿಗಳಂತೆ

ನಿತ್ಯವಿಧಿಯಾಗಿದೆ. ಮೋಕ್ಷದಲ್ಲಿ ವಿಧಿಯಿಲ್ಲದಿದ್ದರೂ ಸ್ವಾಭಾವಿಕವಾಗಿ ಭಕ್ತಿಯು ಇರುತ್ತದೆ.

'ಆ ವಿಮುಕ್ತೇರ್ವಿಧಿರ್ನಿತ್ಯಂ ಸ್ವತ ಏವ ತತಃ ಪರಂ।'

(ಸೂತ್ರಭಾಷ್ಯ -ಉದಾಹೃತ-ಬ್ರಹ್ಮಾಂಡ ಪುರಾಣ 4-1-12)

ಸಕಲಕ್ಕೂ ಭಕ್ತಿಯೇ ಮುಖ್ಯ

ಹರಿಭಕ್ತರು ಮಾಡಿದ ಧರ್ಮಾತಿರಿಕ್ತವಾದ ವ್ಯವಹಾರವೂ ಧರ್ಮವಾಗಬಲ್ಲದು. ಭಕ್ತರಲ್ಲದ ದುರ್ಜನರು ಆಚರಿಸಿದ ಧರ್ಮವೂ ಪಾಪವೆನಿಸಬಹುದು.

'ಧರ್ಮೋ ಭವತ್ಯಧರ್ಮೋಽಪಿ ಕೃತೋ ಭಕ್ತೈಸ್ತವಾಚ್ಯುತ।
ಪಾಪಂ ಭವತಿ ಧರ್ಮೋಽಪಿ ಯೋ ನಭಕ್ತೈಃ ಕೃತೋ ಹರೇ॥'

(ಸದಾಚಾರಸ್ಮೃತಿ - 27)

ತುಲಾಧಾರನಂತವರು ಮಾಡಿದ ವ್ಯಾಪಾರವೂ ಧರ್ಮವಾಗಿದ್ದರೆ ದುರ್ಯೋಧನನಂತಹವರು ಮಾಡಿದ ಪುಂಡರೀಕ ಯಾಗವೂ ಅಧರ್ಮವಾಗುತ್ತದೆ. ರಾವಣ-ಕುಂಭಕರ್ಣಾದಿಗಳು ಮಾಡಿದ ತಪಸ್ಸು ಅಧರ್ಮವೆನಿಸಿದೆ. ಇವೆಲ್ಲಕ್ಕೆ ಕಾರಣ ಭಕ್ತಿಯಿಲ್ಲದಿರುವುದೇ ಆಗಿದೆ. ನಾವು ಮಾಡಿದ ಸಕಲ ಕ್ರಿಯೆಗಳು ಫಲನೀಡಬೇಕಾದರೆ ಹರಿಭಕ್ತಿ ಗುರುಭಕ್ತಿ ಸದಾಚಾರಗಳು ಮುಖ್ಯ ಕಾರಣಗಳಾಗಿವೆ. ಗುರುಭಕ್ತಿಯಿಂದ ಹರಿಭಕ್ತಿಯು ಹುಟ್ಟುತ್ತದೆ.

'ಮುಕುಂದಭಕ್ತೈ ಗುರುಭಕ್ತಿಜಾಯೈ'

(ಶ್ರೀಮಧ್ವವಿಜಯ-1-5)

'ಸರ್ವಾಃ ಕ್ರಿಯಾಃ ಹರೌ ಭಕ್ತೇ ಹರಿಭಕ್ತ್ಯೈಃ ಸ್ವನುಷ್ಠಿತಾಃ ।
ಗುರುಭಕ್ತ್ಯೈಃ ಸದಾಚಾರ್ಯೈಃ ಫಲಂತ್ಯದ್ಧಾ ನ ಚಾನ್ಯಥಾ ॥'

(ತಂತ್ರಸಾರ 4-104)

ಇತರ ದೇವತೆಗಳಲ್ಲಿ ಭಕ್ತಿಯು ಹೇಗಿರಬೇಕು ?

ಮೋಕ್ಷಕ್ಕೆ ಇತರ ದೇವತೆಗಳಲ್ಲಿ ಭಕ್ತಿಯೂ ಆವಶ್ಯಕವಾಗಿದೆ. ಇತರ ದೇವತೆಗಳನ್ನು ಹರಿ ಪರಿವಾರದವರೆಂದು ಬಗೆದು ತಾರತಮ್ಯಾನುಗುಣವಾಗಿ ಅವರಲ್ಲಿ ಭಕ್ತಿ ಮಾಡಬೇಕು. ಜೊತೆಗೆ ಹರಿಸರ್ವೋತ್ತಮತ್ವ ಜ್ಞಾನವೂ ಇರಬೇಕು. ವಿಷ್ಣುಸರ್ವೋತ್ತಮತ್ವವನ್ನು ತಿಳಿಯದೆ ಬ್ರಹ್ಮ-ರುದ್ರಾದಿ ದೇವತೆಗಳಲ್ಲಿ ಭಕ್ತಿ ಮಾಡಿದರೆ ತಮಃ ಪ್ರಾಪ್ತಿಯಾಗುವುದು.

'ಭಕ್ತಿಂ ಕೃತ್ವಾನ್ಯದೇವೇಷು ಬ್ರಹ್ಮರುದ್ರಾದಿಕೇಷ್ವಪಿ
ಸರ್ವೋತ್ತಮಮವಿಜ್ಞಾಯ ವಿಷ್ಣೋರ್ಯಾಂತಿ ತಮೋ ಧ್ರುವಂ ॥'

(ತಂತ್ರಸಾರ 1-69)

ಹರಿಭಕ್ತನಾದವನು ಇತರ ದೇವತೆಗಳನ್ನು ಉಪೇಕ್ಷೆ ಮಾಡಬಾರದು. ಹಾಗೆ ಮಾಡಿದರೆ ಶ್ರೀಹರಿಯೇ ಭಕ್ತಿನಾಶವನ್ನು ಮಾಡುತ್ತಾನೆ. ಭಕ್ತಿಯ ನಾಶವಾದ ಮೇಲೆ ಅಲ್ಲಿಂದ ಭ್ರಷ್ಟನಾಗಿ ಮತ್ತೆ ಸಂಸಾರದ ಚಕ್ರದಲ್ಲಿ ಸಿಲುಕಿ ದುಃಖಪಡುತ್ತಾನೆ. ಅಥವಾ ಹರಿ-ಗುರುದ್ವೇಷದಿಂದ ನರಕಾದಿ ಅಧೋಲೋಕಗಳಿಗೆ ಹೋಗುತ್ತಾನೆ. ಆದುದರಿಂದ ಇತರ ದೇವತೆಗಳನ್ನು ಹರಿಪರಿವಾರದವರೆಂದು ಅವಶ್ಯವಾಗಿ ಪೂಜಿಸಬೇಕು.

ಉಪೇಕ್ಷಕೇಷು ದೇವಾನಾಂ ಭಕ್ತಿನಾಶಂ ಕರೋತ್ಯಲಂ ।
ಕರೋತಿ ತೇನ ವಿಭ್ರಷ್ಟಾಃ ಸಂಸರಂತಿ ಪುನಃ ಪುನಃ ।
ಅಧೋ ವಾ ಯಾಂತಿ ವಿದ್ವೇಷಾತ್ ಪೂಜ್ಯಾ ದೇವಾಸ್ತತಃ ಸದಾ ॥

(ಭಾ.ತಾ. 11-3-34)

ಇತರ ದೇವತೆಗಳ ಪೂಜೆ ಮಾಡುವಾಗ ಹರಿವಿಸ್ಮರಣೆ ಸಲ್ಲದು. ಅನ್ಯದೇವತೆಗಳ ಪೂಜೆಯನ್ನು ಮಾಡಿ ಅದನ್ನು ಶ್ರೀಹರಿಗೆ ಸಮರ್ಪಿಸಿದರೆ ಮಾತ್ರ ವಿಹಿತವಾದ ಫಲ ದೊರಕುತ್ತದೆ. ಹರಿಗೆ ಅರ್ಪಿಸದ ಇತರ ದೇವತೆಗಳ ಪೂಜೆಯು ವಿಫಲವಾಗುತ್ತದೆ.

ಅನ್ಯದೈವತಪೂಜಾಽಪಿ ಯಸ್ಮಿನ್ನಂತೇ ಸಮರ್ಪಿತಾ ।
ಸ್ವರ್ಗಾದಿ ಫಲಹೇತುಃ ಸ್ಯಾತ್ ನಾನ್ಯಥಾ ತಂ ಭಜೇದ್ಧರಿಂ ॥

(ಗೀತಾತಾತ್ಪರ್ಯ **4-11**)

ದೇವತಾತಾರತಮ್ಯವನ್ನು ಸ್ಮರಣೆ ಮಾಡುವ ಮೂಲಕ ಇತರ ದೇವತೆಗಳಲ್ಲಿ ಭಕ್ತಿಮಾಡಬೇಕು. ಸದಾ ವಿಷ್ಣು ಸರ್ವೋತ್ಕರ್ಷಜ್ಞಾನವನ್ನು ಪಡೆದಿರು. ಇದು ಶ್ರೀಮದಾಚಾರ್ಯರು ತಿಳಿಸಿದ ಸನ್ಯಾಸ ಸ್ವೀಕರಿಸಿದ ಸಾಧುಗಳಿಗೆ ಮಾಡಬೇಕಾದ ಉಪದೇಶ-

ಭಕ್ತಿಮಾಂಶ್ಚಾನ್ಯದೇವೇಷು ತಾರತಮ್ಯಂ ಚ ಸಂಸ್ಮರ ।
ಸರ್ವೋತ್ಕರ್ಷಂ ಸ್ಮರನ್ ವಿಷ್ಣೋಃ ಭೂಯಾಶ್ಚೈವ ಸದಾ ಸುಖೀ ॥

(ಯತಿಪ್ರಣವಕಲ್ಪ-21)

ಗುರುದೇವತಾ ಅವಮಾನ ಮಾಡುವವನಿಗೆ ಯಾವ ಸಿದ್ಧಿಯೂ ಇಲ್ಲ. ಮಂತ್ರಕ್ಕೆ ಅವಮಾನ ಮಾಡುವವನು ಘೋರವಾದ ಅಂಧಂ ತಮಸ್ಸಿಗೆ ಹೋಗುವನು-

'ಅವಜ್ಞಾತಾ ಗುರೂಣಾಂ ಚ ದೇವತಾನಾಂ ನ ಸಿಧ್ಯತಿ ।
ಪ್ರಯಾತಿ ಚ ತಮೋಘೋರಂ ಮಂತ್ರಾವಜ್ಞಾಕೃದೇವ ಚ ॥'

(ತಂತ್ರಸಾರ - **3-11**)

ಭಕ್ತರಲ್ಲಿ ವೈವಿಧ್ಯತೆ

ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ನಾಲ್ಕು ವಿಧ ಭಕ್ತರನ್ನು ತಿಳಿಸಿದ್ದಾನೆ.

1. ತಮ್ಮ ದುಃಖ ದುಮ್ಮಾನಗಳ ನಿವಾರಣೆಗಾಗಿ ಪರಮಾತ್ಮನಲ್ಲಿ ಶರಣಾಗತರಾಗುವವರು ಆರ್ತ ಭಕ್ತರೆನಿಸುವರು.
2. ಸುಖ ಸಂಪತ್ತು, ವೈಭವಗಳಿಗಾಗಿ ಅವನನ್ನು ಪ್ರಾರ್ಥಿಸುವವರು ಅರ್ಥಾರ್ಥಿಗಳೆನಿಸುವರು. ಇವರಿಬ್ಬರು ಸಾಧಾರಣ ಭಕ್ತರಾದರೂ ಶ್ರೇಷ್ಠರೆ. ಲೌಕಿಕ ಫಲಕಾಮನೆಗಾಗಿ ಅವ್ಯವಹಾರ, ಭ್ರಷ್ಟಾಚಾರ, ಮೋಸ ವಂಚನೆಗಳಲ್ಲಿ ತೊಡಗುವುದಕ್ಕಿಂತ ಇವರು ತಮ್ಮ ಮನೋಭಿಲಾಷೆ ಪೂರ್ತಿಗಾಗಿ ಭಗವಂತನನ್ನೆ ಬೇಡುತ್ತಿರುವರು. ತಮ್ಮ ಮನೋಭೀಷ್ಟ ಸಿದ್ಧಿಗಾಗಿ ನೀಚಜನರನ್ನು ಬೇಡುತ್ತಾ ದೈನ್ಯದಿಂದ ಜೀವನ ನಡೆಸುವುದನ್ನು ಬಿಟ್ಟು ತಮ್ಮ ಲೌಕಿಕ ಫಲಗಳನ್ನು ಪಡೆಯಲು **'ಮಾ ಗೃಧಃ ಕಸ್ಯಸ್ವಿದ್ ಧನಂ'** (ಈಶೋಪನಿತ್-1) ಎಂಬ ಉಪನಿಷತ್ತಿನ ಸಂದೇಶಕ್ಕನುಸಾರವಾಗಿ ಶ್ರೀಹರಿಯನ್ನೆ ಯಾಚಿಸುವರು ಇವರು. ಆದುದರಿಂದ ಸಕಾಮರಾದರೂ ಕೃಷ್ಣನ ಪ್ರಕಾರ ಇವರು ಶ್ರೇಷ್ಠರೆ.
3. ಇನ್ನು ಯಾವ ಲೌಕಿಕ ಪ್ರಯೋಜನವನ್ನು ಬಯಸದೇ ಭಗವಂತನ ಜ್ಞಾನ, ಸಾಕ್ಷಾತ್ಕಾರಗಳಿಗಾಗಿ ಅವನನ್ನು ಪೂಜಿಸುವ ಜಿಜ್ಞಾಸುಗಳು ಹಿಂದೆ ಹೇಳಿದ ಎರಡು ಬಗೆಯ ಭಕ್ತರಿಗಿಂತಲೂ ಉತ್ತಮ ಶ್ರೇಣಿಯ ಭಕ್ತರು.
4. ಈ ಮೂವರು ಭಕ್ತರಿಗಿಂತ ಉತ್ತಮನಾದವನೊಬ್ಬ ಭಗವದ್ಭಕ್ತನಿದ್ದಾನೆ. ಭಗವಂತನ ಸಾಕ್ಷಾತ್ಕಾರ ಪಡೆದು ಅವನಲ್ಲಿ ಉತ್ಕಟವಾದ ಪ್ರೇಮಭಾವವನ್ನು ಪಡೆದ ಜ್ಞಾನಿಯೇ ಪರಿಪೂರ್ಣ ಭಕ್ತನೆನಿಸಿದ್ದಾನೆ. ಇವನು ಭಗವಂತನನ್ನು

ಪ್ರತ್ಯಕ್ಷವಾಗಿ ನೋಡಿದವನಾದುದರಿಂದ ಸಹಜವಾಗಿಯೇ ಇವನಿಗೆ ಭಗವಂತನಲ್ಲಿ ಹೆಚ್ಚು ಪ್ರೀತಿ ಉಂಟಾಗುತ್ತದೆ. ಸಕಾಮ ಭಕ್ತರಿಗೆ ಹಾಗು ಜಿಜ್ಞಾಸು ಭಕ್ತರಿಗೆ ಶಾಸ್ತ್ರಜ್ಞಾನವಷ್ಟೆ ಇದೆ, ಹೊರತು ಭಗವತ್ಸಾಕ್ಷಾತ್ಕಾರವಾಗಿರುವುದಿಲ್ಲ. ಆದುದರಿಂದ ಅವರ ಭಕ್ತಿಗೂ ಅಪರೋಕ್ಷಜ್ಞಾನಿಯ ಭಕ್ತಿಗೂ ಅಜಗಜಾಂತರ ವ್ಯತ್ಯಾಸವಿದೆ. ಆದ್ದರಿಂದಲೇ ಶ್ರೀಕೃಷ್ಣ ಜ್ಞಾನಿಗೆ ನಾನು ಅತ್ಯಂತ ಪ್ರಿಯ, ಜ್ಞಾನಿಗೂ ನಾನು ಅತ್ಯಂತ ಪ್ರಿಯನೆನ್ನುತ್ತಾನೆ. ಜ್ಞಾನಿಯೂ ಕೃಷ್ಣನಿಗೆ ಅವನ ಸ್ವರೂಪಕ್ಕೆ ಸಮಾನನೆನಿಸಿದ್ದಾನೆ.

'ಚತುರ್ವಿಧಾಃ ಭಜಂತೇ ಮಾಂ ಜನಾಃ ಸುಕೃತಿನೋಽರ್ಜುನ ।
ಆರ್ತೋ ಜಿಜ್ಞಾಸುರರ್ಥಾರ್ಥೀ ಜ್ಞಾನೀ ಚ ಭರತರ್ಷಭ ॥
ತೇಷಾಂ ಜ್ಞಾನೀ ನಿತ್ಯಯುಕ್ತ ಏಕಭಕ್ತಿರ್ವಿಶಿಷ್ಯತೇ ।
ಪ್ರಿಯೋ ಹಿ ಜ್ಞಾನಿನೋಽತ್ಯರ್ಥಮಹಂ ಸ ಚ ಮಮ ಪ್ರಿಯಃ ॥
ಉದಾರಾಃ ಸರ್ವ ಏವೈತೇ ಜ್ಞಾನಿ ತ್ವಾತ್ಮೈವ ಮೇ ಮತಂ ॥

(ಭ.ಗೀ. 7-16,17,18)

ಭಕ್ತಿಯಲ್ಲಿ ವೈವಿಧ್ಯತೆ

ಭಕ್ತಿಯಿಂದ ಸಾಧ್ಯವಾದ ಪ್ರಯೋಜನಗಳು ಹಲವಾರು. ಭಕ್ತಿಯಿಂದಲೇ ಭಗವತ್ಪ್ರಸಾದ, ಪರೋಕ್ಷಜ್ಞಾನ, ಅಪರೋಕ್ಷಜ್ಞಾನ, ಮುಕ್ತಿ ಮುಂತಾದವು ಆಗುತ್ತವೆ. ಇವುಗಳಿಗೆ ಸಾಧನವಾದ ಭಕ್ತಿಯು ಸಾಧ್ಯವಾದ ಫಲಕ್ಕೆ ಅನುಸಾರವಾಗಿ ಅಪಕ್ವ, ಪಕ್ವ, ಪರಿಪಕ್ವ, ಅತಿಪರಿಪಕ್ವ ಎಂಬ ಭೇದದಿಂದ ಅನೇಕ ಪ್ರಭೇದವನ್ನು ಪಡೆದಿದೆ. ಈ ವಿಚಾರದಲ್ಲಿ ಶ್ರೀಮದಾಚಾರ್ಯರು ಗೀತಾತಾತ್ಪರ್ಯದಲ್ಲಿ ಪ್ರಮಾಣವನ್ನು ಉದಾಹರಿಸಿದ್ದಾರೆ.

'ಭಕ್ತ್ಯಾ ಪ್ರಸನ್ನಃ ಪರಮೋ ದದ್ಯಾದ್ ಜ್ಞಾನಮನಾಕುಲಂ ।
ಭಕ್ತಿಂ ಚ ಭೂಯಸೀಂ ತಾಭ್ಯಾಂ ಪ್ರಸನ್ನೋ ದರ್ಶನಂ ವ್ರಜೇತ್ ॥
ತತೋಽಪಿ ಭೂಯಸೀಂ ಭಕ್ತಿಂ ದದ್ಯಾತ್ ತನ್ನಾನ್ಯಥಾ ಭವೇತ್ ।
ಮುಕ್ತೋಽಪಿ ತದ್ವಶೋ ನಿತ್ಯಂ ಭೂಯೋ ಭಕ್ತಿಸಮನ್ವಿತಃ ॥
ಸಾಧ್ಯಾನಂದ ಸ್ವರೂಪೈವ ಭಕ್ತಿರ್ನೈವಾತ್ರ ಸಾಧನಂ ॥

(ಗೀತಾತಾತ್ಪರ್ಯ)

ಭಕ್ತಿಯಿಂದ ಪ್ರಸನ್ನನಾದ ವಿಷ್ಣುವು ಸ್ಥಿರವಾದ (ಸಂಶಯ-ವಿಪರೀತ ಜ್ಞಾನಕ್ಕಿಂತ ಭಿನ್ನ) ಜ್ಞಾನವನ್ನು ಭಕ್ತನಿಗೆ ನೀಡುತ್ತಾನೆ. ಮತ್ತೆ ಸ್ಥಿರವಾದ ಜ್ಞಾನ ಮತ್ತು ಭಕ್ತಿಗಳಿಂದ ಅಭಿವೃದ್ಧವಾದ ಭಕ್ತಿಯನ್ನು ನೀಡುವನು. ಅಭಿವೃದ್ಧವಾದ ಭಕ್ತಿಯಿಂದ ಪ್ರಸನ್ನನಾಗಿ ಭಕ್ತನಿಗೆ ಪ್ರತ್ಯಕ್ಷನಾಗುವನು. ಅಪರೋಕ್ಷ ದರ್ಶನವಾದ ಮೇಲೆ ಅತಿಪರಿಪಕ್ವ ಭಕ್ತಿಯನ್ನು ನೀಡಿ ಅಂತಹ ಜ್ಞಾನಭಕ್ತಿಗಳಿಂದ ಮುಕ್ತಿಯನ್ನು ನೀಡುತ್ತಾನೆ. ಮುಕ್ತನೂ ಸಹ ನಿತ್ಯವೂ ಹೆಚ್ಚು ಭಕ್ತಿಯಿಂದ ಯುಕ್ತನಾಗಿ ಭಗವಂತನ ಅಧೀನನೇ ಆಗಿರುವನು. ಮೋಕ್ಷದಲ್ಲಿ ಮಾಡುವ ಭಕ್ತಿಯು ಸಾಧನರೂಪವಾದ ಭಕ್ತಿಯಲ್ಲ. ಹೊರತು ಫಲರೂಪವಾಗಿ ಆನಂದರೂಪವಾಗಿಯೇ ಮುಕ್ತಿಯಲ್ಲಿ ಭಕ್ತಿಯು ಮುಂದುವರಿಯುವುದು.

ಇಲ್ಲಿ ಸಾಧಾರಣ ಭಕ್ತಿಯಿಂದ ಜ್ಞಾನಸ್ಥಿರವಾಗುತ್ತದೆ. ಮುಂದಿನ ಹಂತದಲ್ಲಿ ಭಕ್ತಿಯು ಪಕ್ವವಾಗಿ ಅದರಿಂದ ಅಪರೋಕ್ಷಜ್ಞಾನಸಾಧನವಾದ ಪರಿಪಕ್ವಭಕ್ತಿಯು ಉಂಟಾಗುತ್ತದೆ. ಅಪರೋಕ್ಷಜ್ಞಾನವಾದ ಮೇಲೆ ಭಗವತ್ಪ್ರಸಾದ, ಮೋಕ್ಷಕ್ಕೆ ಕಾರಣವಾದ ಭಕ್ತಿಯೇ 'ಅತಿಪರಿಪಕ್ವಭಕ್ತಿ' ಎನಿಸುವುದು.

ಸಾಧಕನಾದ ಅಧಿಕಾರಿಯು ಹಂತಹಂತವಾಗಿ ಮುಕ್ತಿಯ ಮೆಟ್ಟಿಲನ್ನು ಏರಬಲ್ಲವನಾಗುತ್ತಾನೆ. ಪ್ರಪ್ರಥಮವಾಗಿ ಸಾಧಾರಣ ಭಗವದ್ಭಕ್ತಿ

ಪೂರ್ವಕವಾಗಿ ಶಾಸ್ತ್ರಜ್ಞಾನ, ವೈರಾಗ್ಯಗಳನ್ನು ಸಂಪಾದಿಸಿಕೊಂಡು ಸತ್ಕರ್ಮಾಚರಣೆಯನ್ನು ಮಾಡಬೇಕು. ಶ್ರೀಮದಾಚಾರ್ಯರು ಬ್ರಹ್ಮಸೂತ್ರ ಭಾಷ್ಯದಲ್ಲಿ ಅಧಿಕಾರವನ್ನು ನಿರೂಪಿಸುವ ಸಂದರ್ಭದಲ್ಲಿ-

'ಭಕ್ತಿಮಾನ್ ಪರಮೇ ವಿಷ್ಣೌ ಯಸ್ತ್ವಧ್ಯಯನವಾನ್ ನರಃ'

ಎಂದು ಸಾಧಾರಣ ಭಕ್ತಿಯನ್ನು ಹೇಳಿದ್ದಾರೆ. ಸಾಧಾರಣ ಹರಿಭಕ್ತಿಪೂರ್ವಕವಾದ ಶಾಸ್ತ್ರಾಧ್ಯಯನದಿಂದ ಪರೋಕ್ಷಜ್ಞಾನವು ಉಂಟಾಗುವುದು. ಸಾಧಾರಣ ಭಕ್ತಿ, ವಿಷಯವೈರಾಗ್ಯ, ಸತ್ಕರ್ಮಾಚರಣೆ, ಅಧ್ಯಯನ, ಶ್ರವಣ ಮುಂತಾದವುಗಳಿಂದ ಪಕ್ವಭಕ್ತಿಯೂ, ಅದರಿಂದ ತತ್ವಜ್ಞಾನವು, ಅದರಿಂದ ಧ್ಯಾನವು ಉಂಟಾಗುವುದು. ಮುಂದೆ ಜ್ಞಾನಪೂರ್ವಕ ಧ್ಯಾನದಿಂದ ಪರಿಪಕ್ವಭಕ್ತಿಯು ಹುಟ್ಟುವುದು.

ಈ ಅರ್ಥದಲ್ಲಿ ಕೆಳಗಿನ ಭಾಗವತ ಶ್ಲೋಕವು ಹೊರಟಿದೆ-

ನೈಷ್ಕರ್ಮ್ಯಮಪ್ಯಚ್ಯುತ ಭಾವವರ್ಜಿತಂ
ನ ಶೋಭತೇ ಜ್ಞಾನಮಲಂ ನಿರಂಜನಂ ॥

ಕುತಃ ಪುನಃ ಶಶ್ವದಭದ್ರಮೀಶ್ವರೇ
ನ ಚಾರ್ಪಿತಂ ಕರ್ಮ ಯದಪ್ಯಕಾರಣಂ ॥

(ಶ್ರೀಮದ್ಭಾಗವತಂ 1-5-12)

ಫಲಾಪೇಕ್ಷೆ ಇಲ್ಲದೆ ಕರ್ಮ ಮಾಡಿದರೂ ಭಗವಂತನಲ್ಲಿ ಭಕ್ತಿಯಿಲ್ಲದೆ ಮಾಡಿದ ನಿಷ್ಕಾಮಕರ್ಮವು ಮೋಕ್ಷಜನಕವಾಗುವುದಿಲ್ಲ. ಅದು ವ್ಯರ್ಥವೆಂದೇ ಅರ್ಥ. ಹಾಗೆಯೇ ಭಗವದ್ಭಕ್ತಿಯಿಲ್ಲದ ಪರೋಕ್ಷ ಜ್ಞಾನವು ನಿರ್ದುಷ್ಟವಾದರೂ ಭಕ್ತಿ ಮುಂತಾದ ಸತ್ಫಲಜನಕವಾಗಲಾರದು. ಅಂಥಹ ಜ್ಞಾನವೂ ವ್ಯರ್ಥ. ಇನ್ನು ರಾಗಾದಿ ದೋಷಗಳಿಗೆ ಆಸ್ಪದವಾದ ಕರ್ಮವನ್ನು ಮಾಡಿ ಭಕ್ತಿಯಿಂದ ಭಗವಂತನಿಗೆ ಅರ್ಪಿಸದಿದ್ದರೆ ಅದೂ ಫಲಜನಕವಾಗಲಾರದೆಂದು ಹೇಳಬೇಕೇನು ?

ಹಾಗೆಯೇ ಸಕಲ ವಿಧ ಕರ್ಮಾಚರಣೆಯು ಭಕ್ತಿಪೂರ್ವಕವಾಗಿಲ್ಲದಿದ್ದರೆ ಅದು ವ್ಯರ್ಥವೆಂದು ಈ ಪ್ರಮಾಣವಚನದಿಂದ ತಿಳಿಯುವುದು.

'ಯದೇವ ವಿದ್ಯಯಾ ಕರೋತಿ ಶ್ರದ್ಧಯೋಪನಿಷದಾ
ತದೇವ ವೀರ್ಯವತ್ತರಂ ಭವತಿ' (ಛಾ.1-1-10)

ಯಾವುದನ್ನು ಶ್ರದ್ಧಾಭಕ್ತಿಜ್ಞಾನಪೂರ್ವಕವಾಗಿ ಭಗವತ್ಪ್ರೀತ್ಯರ್ಥವಾಗಿ ಶಾಸ್ತ್ರೋಕ್ತರೀತಿಯಿಂದ ಆಚರಿಸುತ್ತಾನೋ ಅದೇ ಭಗವತ್ಪ್ರಸಾದದ ಮೂಲಕ ಮೋಕ್ಷರೂಪ ಮಹಾಫಲ ಜನಕವಾಗುತ್ತದೆ.

ಜ್ಞಾನಭಕ್ತಿಗಳಿಗೆ ವೈರಾಗ್ಯವು ಸಾಧನ

ನಿಷ್ಕಾಮಕರ್ಮಾನುಷ್ಠಾನದಿಂದ ಮನಸ್ಸು ನಿರ್ಮಲಗೊಂಡು ವಿಷಯ ವೈರಾಗ್ಯ ಉಂಟಾಗುತ್ತದೆ.

'ಕರ್ಮಭಿಃ ಶುದ್ಧ ಸತ್ವಸ್ಯ ವೈರಾಗ್ಯಂ ಜಾಯತೇ ಹೃದಿ' (ಭಾಗವತ)

ಹೀಗೆ ವಿರಕ್ತರಾದವರಿಗೆ ಜ್ಞಾನ-ಭಕ್ತಿಗಳು ಉಂಟಾಗುತ್ತವೆ.

ನ ತಸ್ಯ ತತ್ವಗ್ರಹಣಾಯ ಸಾಕ್ಷಾತ್
ಗರೀಯಸೀರಪಿ ವಾಚಃ ಸಮಾಸನ್ ।
ಸ್ವಪ್ನೇ ನಿರುಕ್ತ್ಯಾ ಗೃಹಮೇಧಿ ಸೌಖ್ಯಂ
ನ ಯಸ್ಯ ಹೇಯಾನುಮಿತಂ ಸ್ವಯಂ ಸ್ಯಾತ್ ॥

(ಭಾಗ-5-11-3)

ಈ ಹೇಯವಾದ ಸಂಸಾರಸುಖವು ಸ್ವಪ್ನದಂತೆ ಅನಿತ್ಯವಾದುದು ಎಂದು ತಿಳಿದು ವೈರಾಗ್ಯ ಹೊಂದಿದವರಿಗೆ ಮಾತ್ರ ಶ್ರೇಷ್ಠವಾದ ವೇದವಾಕ್ಯಗಳು ತತ್ವನಿಶ್ಚಯವನ್ನು ಉಂಟುಮಾಡಿ ಅವನನ್ನು ಮೋಕ್ಷದೆಡೆಗೆ ಕೊಂಡೊಯ್ಯಬಲ್ಲವು.

ಭಕ್ತಿಯೇ ಪರಮಸಾಧನ

ಸ್ವಾಧ್ಯಾಯಸ್ತತ್ವವಿಜ್ಞಾನಂ ವಿಷ್ಣುಭಕ್ತಿರ್ವಿರಾಗತಾ ।
ನಿಷಿದ್ಧಕರ್ಮಣಾಂ ತ್ಯಾಗೋ ವಿಹಿತಸ್ಯ ಸದಾ ಕ್ರಿಯಾ ॥
ಸದಾ ವಿಷ್ಣುಸ್ಮೃತಿಶ್ಚೈವ ಕೇವಲಂ ಮೋಕ್ಷಸಾಧನಂ ।
ಏತೈರ್ವಿನಾ ನ ಮೋಕ್ಷಃ ಸ್ಯಾದ್ ಭವೇದೇತೈರಪಿ ಧ್ರುವಂ ॥

(ಋಗ್ಭಾಷ್ಯ)

ಗುರುಗಳ ಉಚ್ಚಾರಣೆಯನ್ನು ಅನುಸರಿಸಿ ಉಚ್ಚರಿಸಿ ಮಾಡಿದ ವೇದಾಧ್ಯಯನ, ತತ್ವಜ್ಞಾನ, ವಿಷ್ಣುಭಕ್ತಿ, ವೈರಾಗ್ಯ, ನಿಷಿದ್ಧಕರ್ಮತ್ಯಾಗ, ಶಾಸ್ತ್ರೋಕ್ತಗಳಾದ ವರ್ಣಾಶ್ರಮ ಧರ್ಮಗಳನ್ನು ಹಾಗು ಆಚರಣೆಗಳನ್ನು ಯಾವಾಗಲು ಯುಕ್ತವಾದ ಕಾಲದಲ್ಲಿ ಆಚರಿಸುವುದು, ನಿತ್ಯವಾಗಿ ಹರಿನಾಮಸ್ಮರಣೆ, ಇವೇ ಮೊದಲಾದವುಗಳು ಮೋಕ್ಷಸಾಧನಗಳು, ಇವುಗಳಿಲ್ಲದೆ ಮೋಕ್ಷವಿಲ್ಲ. ಇವುಗಳಿದ್ದರೆ ತಪ್ಪದೆ ಮೋಕ್ಷವಾಗುವುದು- ಎಂಬ ಪ್ರಮಾಣಾನುಸಾರವಾಗಿ ವಿಷ್ಣುಭಕ್ತಿಯು ಉಳಿದ ಸಾಧನಗಳಂತೆ ಸಮಾನವಾಗಿ ಮೋಕ್ಷಕ್ಕೆ ಸಾಧನವೆಂದು ತಿಳಿಯುವುದು. ಹಾಗಾದರೆ ಮೋಕ್ಷಕ್ಕೆ ವಿಷ್ಣುಭಕ್ತಿಯು ಪರಮಸಾಧನವೆಂದು ಸಿದ್ಧಿಸುವುದಿಲ್ಲ ಎಂದು ಆಕ್ಷೇಪ ಬಂದರೆ ಇಲ್ಲಿ ಸಾಧನಗಳನ್ನೆಲ್ಲ ಒಟ್ಟಿಗೆ ಸೇರಿಸಿ ಹೇಳಿದ್ದಾರೆಯೆ ವಿನಹ ಭಕ್ತಿಗೆ ಇರುವ ಪರಮಸಾಧನತ್ವವನ್ನು ಅಲ್ಲಗೆಳೆಯಲಿಲ್ಲ. ಸಾಧನ ತಾರತಮ್ಯವನ್ನು ಶ್ರೀಮದಾಚಾರ್ಯರು ಗೀತಾಭಾಷ್ಯದ 8ನೇ ಅಧ್ಯಾಯದಲ್ಲಿ ನಾರದೀಯ ಪುರಾಣ ವಚನವನ್ನು ಉದಾಹರಿಸುವ ಮೂಲಕ ಪ್ರತಿಪಾದಿಸಿದ್ದಾರೆ-

'ಅಜ್ಞಾತ್ವಾ ಧ್ಯಾಯತೋ ಧ್ಯಾನಾದ್ ಜ್ಞಾನಮೇವ ವಿಶಿಷ್ಯತೇ ।
ಜ್ಞಾತ್ವಾ ಧ್ಯಾನಂ ಜ್ಞಾನಮಾತ್ರಾದ್ ಧ್ಯಾನಾದಪಿ ತು ದರ್ಶನಂ ।

ದರ್ಶನಾಚ್ಚೈವ ಭಕ್ತಿಶ್ಚ ನ ಕಿಂಚಿತ್ ಸಾಧನಾಧಿಕಂ ॥

(ಗೀತಾಭಾಷ್ಯ)

ಜ್ಞಾನರಹಿತವಾಗಿ ಧ್ಯಾನ ಮಾಡುವುದಕ್ಕಿಂತ ಜ್ಞಾನವು ಉತ್ತಮವೆನಿಸುತ್ತದೆ. ಕೇವಲ ಜ್ಞಾನಕ್ಕಿಂತ ಜ್ಞಾನಪೂರ್ವಕವಾಗಿ ಮಾಡುವ ಧ್ಯಾನವು ಶ್ರೇಷ್ಠವಾದುದು. ಅಂತಹ ಧ್ಯಾನಕ್ಕಿಂತ ಭಗವದ್ದರ್ಶನವು ಉತ್ತಮವಾದುದು. ಅಂತಹ ಭಗವದ್ದರ್ಶನದಿಂದ ಉಂಟಾದ ಜ್ಞಾನಕ್ಕಿಂತ ಮೋಕ್ಷಸಾಧನವಾದ ಅತಿಪರಿಪಕ್ವ ಭಕ್ತಿಯು ಶ್ರೇಷ್ಠವಾದುದು ಎಂದು ಭಗವದ್ಭಕ್ತಿಗೆ ಪರಮಸಾಧನತ್ವವನ್ನು ಹೇಳಲಾಗಿದೆ.

'ಸಾಧನೇಭ್ಯೋಽಧಿಕಾ ಭಕ್ತಿರ್ನೈವಾನ್ಯತ್ ತಾದೃಶಂ ಕ್ವಚಿತ್ ।
ಭಕ್ತಿಶ್ಚೈವ ಹರಾವೇವ ಮುಖ್ಯಾಽನ್ಯತ್ರ ಯಥಾಕ್ರಮಂ ॥
ಸ್ವಾಧಿಕತ್ವೇನ ಸರ್ವತ್ರ ಸ್ವೋತ್ತಮೇಷು ಕ್ರಮೇಣ ಚ ।
ಅನುವರ್ತತೇ ಚ ಸಾ ಭಕ್ತಿರ್ಮುಕ್ತಾವಾನಂದರೂಪಿಣೀ ।
ತತ್ಪೂರ್ವಕೋಪಾಸನೈವ ಕರ್ತವ್ಯಾ ಮುಕ್ತಯೇ ಗುಣೈಃ ॥

(ಅನುವ್ಯಾಖ್ಯಾನ 3-3)

ವೈರಾಗ್ಯ, ಜ್ಞಾನ ಮುಂತಾದ ಸಕಲ ಸಾಧನಗಳಿಂದಲೂ ಭಕ್ತಿಯು ಮುಖ್ಯ ಸಾಧನವಾಗಿದೆ. ಭಕ್ತಿಯಂತಹ ಸಾಧನವು ಮತ್ತೊಂದಿಲ್ಲ, ಶ್ರೀಹರಿಯಲ್ಲಿ ಉತ್ಕೃಷ್ಟವಾದ ಭಕ್ತಿಯನ್ನು, ರಮಾ ಬ್ರಹ್ಮಾದಿಗಳಲ್ಲಿ ತಾರತಮ್ಯಾನುಸಾರವಾಗಿ ಕಡಿಮೆಯಾಗಿಯೂ, ತನ್ನಕ್ಕಿಂತ ಉತ್ತಮರಾದ ಗುರು-ದೇವತೆಗಳು ಮುಂತಾದ ಹಿರಿಯರಲ್ಲಿ ಕ್ರಮದಿಂದ ಅವರವರ ಯೋಗ್ಯತಾನುಸಾರವಾಗಿ ಭಕ್ತಿಯನ್ನು ಮಾಡಬೇಕು. ಅದರಿಂದ ಮುಕ್ತಿಯನ್ನು ಪಡೆಯಬಹುದು. ಮುಕ್ತಿಯಲ್ಲಿಯೂ ಆನಂದರೂಪವಾದ ಭಕ್ತಿಯು ಅನುವೃತ್ತವಾಗುತ್ತದೆ. ಮುಕ್ತಿಗಾಗಿ ಭಕ್ತಿಪೂರ್ವಕವಾದ ಉಪಾಸನೆಯನ್ನು ಮಾಡಬೇಕು.

ಭಕ್ತಿಯೇ ಪರಮಸಾಧನವೆಂದು ಆಚಾರ್ಯರು ತಂತ್ರಸಾರದಲ್ಲಿ ಪ್ರತಿಪಾದಿಸಿದ್ದಾರೆ.

'ಮುಖ್ಯಮೇವೈಷ ನಾನ್ಯತ್ ಸ್ಯಾತ್ ಸರ್ವಂ ವ್ಯರ್ಥಂ ತಯಾ ವಿನಾ ।
ಸೈಕಾಽಪ್ಯಭೀಷ್ಟಫಲದಾ ಮೋಕ್ಷೋ ದರ್ಶನಯುಕ್ತಯಾ ॥'

(ತಂತ್ರಸಾರ ಸಂಗ್ರಹ 4-173)

ಭಕ್ತಿಯೊಂದೇ ಮುಖ್ಯವಾದುದು. ಭಕ್ತಿಯಿಲ್ಲದೆ ಮಾಡಿದ ದಾನ-ತೀರ್ಥಯಾತ್ರೆ ಮುಂತಾದವು ವ್ಯರ್ಥ ಹಾಗು ನಿಷ್ಫಲಗಳಾಗುತ್ತವೆ. ಭಕ್ತಿಯೊಂದೆ ಸಕಲಾಭೀಷ್ಟಗಳನ್ನು ಕೊಡಬಲ್ಲದು. ಅಪರೋಕ್ಷಜ್ಞಾನ ಸಹಿತವಾದ ಭಕ್ತಿಯಿಂದಲೇ ಮೋಕ್ಷವಾಗುತ್ತದೆ.

ಈ ವಿಷಯವನ್ನು ಬೃಹದ್ಭಾಷ್ಯದಲ್ಲಿ ಹೇಳಿದ್ದಾರೆ.

'ಧ್ಯಾನಂ ಚ ಗುರುಶುಶ್ರೂಷಾ ನಿತ್ಯನೈಮಿತ್ತಿಕಾಃ ಕ್ರಿಯಾಃ ।
ತೀರ್ಥದಾನ ತಪಾದ್ಯಾಶ್ಚ ಸ್ವಾಧ್ಯಾಯೋ ಹರಿಕೀರ್ತನಂ ॥

ದ್ವಾದಶ್ಯಾದಿ ವ್ರತಂ ಚೈವ ತುಲಸ್ಯಾದೇರಥಾರ್ಚನಂ ।
ಸರ್ವಂ ಭಕ್ತ್ಯರ್ಥಮುದ್ದಿಷ್ಟಂ ನಿಷ್ಫಲಂ ತತ್ತಯಾ ವಿನಾ ।
ವಿಷ್ಣುಭಕ್ತಿಯುತೋ ಮುಕ್ತಿಂ ಯಾತಿ ನಾನ್ಯಃ ಕಥಂಚನ ॥

(ಬೃಹದ್ಭಾಷ್ಯ)

ಧ್ಯಾನ, ಗುರುಸೇವೆ, ನಿತ್ಯನೈಮಿತ್ತಿಕ ಕರ್ಮಾಚರಣೆಗಳು, ತೀರ್ಥಕ್ಷೇತ್ರಯಾತ್ರೆ, ತೀರ್ಥಸ್ನಾನ, ದಾನ, ತಪಸ್ಸು ಮುಂತಾದವು ಹಾಗು ವೇದಾಧ್ಯಯನ, ಶಾಸ್ತ್ರಾಭ್ಯಾಸ, ಹರಿನಾಮಕೀರ್ತನೆ, ದ್ವಾದಶಿ-ವಿಷ್ಣು ಪಂಚಕ, ಭೀಷ್ಮಪಂಚಕ ಮುಂತಾದ ವ್ರತಗಳನ್ನು ಆಚರಿಸುವುದು, ತುಳಸಿ, ಗೋವು, ಅಶ್ವತ್ಥ ಶಮೀ ಮುಂತಾದವುಗಳ ಅರ್ಚನೆ, ಸಕಲ ಸತ್ಕರ್ಮಾನುಷ್ಠಾನಗಳು ಭಕ್ತಿಗಾಗಿ ಹೇಳಲ್ಪಟ್ಟಿವೆ. ಭಕ್ತಿಯಿಲ್ಲದಿದ್ದರೆ ಈ

ವಿಧವಾದ ಸತ್ಕರ್ಮಾಚರಣೆಗಳೆಲ್ಲವೂ ವ್ಯರ್ಥವಾಗುವುವು. ವಿಷ್ಣುಭಕ್ತಿಯುಕ್ತನಾದವನು ಮೋಕ್ಷವನ್ನು ಪಡೆಯುತ್ತಾನೆ. ಅಭಕ್ತನು ಬೇರೆ ಯಾವ ರೀತಿಯಿಂದಲೂ ಮುಕ್ತಿಗೆ ಹೋಗಲಾರನು.

ಅಪರೋಕ್ಷಜ್ಞಾನ-ಭಕ್ತಿ ಇವೆರಡಕ್ಕೆ ಸಾಮ್ಯವಿಲ್ಲ

ಭಕ್ತಿಯಿಂದ ಮೋಕ್ಷವಾಗುವಾಗ ಅಪರೋಕ್ಷಜ್ಞಾನವು ಭಕ್ತಿಯ ಜೊತೆಗೆ ಇರಲೇಬೇಕು. **'ಮೋಕ್ಷೋ ದರ್ಶನಯುಕ್ತಯಾ'** ಎಂಬ ತಂತ್ರಸಾರದಲ್ಲಿ ಹೇಳಿದ ಪ್ರಮಾಣವಚನಾನುಸಾರವಾಗಿ ಅಪರೋಕ್ಷಜ್ಞಾನ ದಿಂದ ಸಹಿತವಾದ ಭಕ್ತಿಯಿಂದಲೇ ಮೋಕ್ಷವೆಂದರ್ಥವೇ ಹೊರತು, ಕೇವಲ ಅಪರೋಕ್ಷ ದರ್ಶನದಿಂದಾಗಲೀ ಕೇವಲ ಭಕ್ತಿಯಿಂದಾಗಲೀ ಮೋಕ್ಷವಿಲ್ಲವೆಂದೇ ಅರ್ಥ. ಭಕ್ತಿಯಿಂದ ರಹಿತವಾದ ಅಪರೋಕ್ಷ ದರ್ಶನವು ಅವತಾರ ದರ್ಶನದಂತೆ ವ್ಯರ್ಥವಾಗುವುದು. ಇನ್ನು ಸ್ವಯೋಗ್ಯವಾದ ಅಪರೋಕ್ಷ ದರ್ಶನವಂತು ಭಕ್ತಿಯಿಲ್ಲದಿದ್ದರೆ ಉಂಟಾಗುವುದೇ ಇಲ್ಲ.

'ದರ್ಶನಂ ಚ ತಯಾ ಹೀನಂ ವ್ಯರ್ಥಮನ್ಯತ್ ಕಿಮುಚ್ಯತೇ ।
ಯೋಗ್ಯಂ ತು ದರ್ಶನಂ ನೈವ ತಯಾ ಹೀನಂ ಭವಿಷ್ಯತಿ ॥

(ತಂತ್ರಸಾರ)

ಕೇವಲ ಭಕ್ತಿಯೊಂದೇ ಇದ್ದರೆ ಅದು ಸಾಧಕನಿಗೆ ಅಭೀಷ್ಟವಾದ ಫಲವನ್ನು ಕೊಡುತ್ತದೆ. ಆ ಭಕ್ತಿಯು ಅಪರೋಕ್ಷದರ್ಶನದಿಂದ ಸಹಿತ ವಾದರೆ ಮುಕ್ತಿಯನ್ನೇ ನೀಡುತ್ತದೆ. ಆದ್ದರಿಂದ ಮೋಕ್ಷಸಾಧನ ವಿಷಯದಲ್ಲಿ ಅಪರೋಕ್ಷದರ್ಶನಕ್ಕಿಂತಲೂ ಭಕ್ತಿಯ ಪಾತ್ರ ಹೆಚ್ಚಿನದು. ಅವೆರಡಕ್ಕೆ ಸಾಮ್ಯವಿಲ್ಲ.

'ಅಪರೋಕ್ಷ ದೃಶೇರ್ಹೇತು ರ್ಮೋಕ್ಷಹೇತುಶ್ಚ ಸಾ ಪುನಃ'
(ಮ.ಭಾ.ತಾ.ನಿ. 1-114)

ಭಕ್ತಿಯು ಅನಾದಿಯಾಗಿರುವುದು

ಮುಕ್ತಿಯೋಗ್ಯರಾದ ದೇವತೆಗಳೇ ಮೊದಲಾದವರಿಗೆ ಸ್ವರೂಪ ಭೂತವಾದ ಅನಾದಿಯಾದ ಭಕ್ತಿಯೇ ಇರುವುದು. ಅದು ದಾನ-ತೀರ್ಥ ಯಾತ್ರೆ, ತೀರ್ಥಸ್ನಾನ, ತಪಸ್ಸು ಮುಂತಾದವುಗಳಿಂದ ಕ್ರಮವಾಗಿ ಅಭಿವೃದ್ಧವಾಗುವುದು, ಹಾಗು ಪರಿಪುಷ್ಟವಾಗುವುದು. ಶ್ರವಣ ಮನನ, ನಿದಿಧ್ಯಾಸನ ಮುಂತಾದವುಗಳಿಂದ ಅಭಿವ್ಯಕ್ತವಾಗಿ ಅಪರೋಕ್ಷಜ್ಞಾನಕ್ಕೆ ಕಾರಣವಾಗುವುದು. ಮುಂದೆ ಸ್ವಯೋಗ್ಯ ಅಪರೋಕ್ಷದರ್ಶನದಿಂದ ಸಹಿತವಾದ ಭಕ್ತಿಯು ಮೋಕ್ಷಹೇತುವು ಆಗುವುದು.

'ಅನಾದಿಭಕ್ತಿರ್ದೇವಾನಾಂ ಕ್ರಮಾದ್ ವೃದ್ಧಿಂ ಗತ್ಯೆವ ಸಾ ।
ಅಪರೋಕ್ಷದೃಶೇರ್ಹೇತುರ್ಮುಕ್ತಿಹೇತುಶ್ಚ ಸಾ ಪುನಃ ॥
(ಮ.ಭಾ.ತಾ.ನಿ. 1-113-114)

ಮೋಕ್ಷದಲ್ಲಿ ಭಕ್ತಿಯು ಸ್ವರೂಪದಿಂದಲೇ ಇರುವುದರಿಂದ ನಿತ್ಯವು ಮುಕ್ತರಲ್ಲಿ ಆನಂದರೂಪವಾಗಿಯೇ ಇರುತ್ತದೆ.

'ಸೈವಾऽನಂದಸ್ವರೂಪೇಣ ನಿತ್ಯಾ ಮುಕ್ತೇಷು ತಿಷ್ಠತಿ'
(ಮ.ಭಾ.ತಾ.ನಿ. 1-114)

ಮುಕ್ತರಲ್ಲಿ ಇರುವ ಭಕ್ತಿಯು ಆನಂದ ರೂಪವಾಗುವ ಬಗೆ ಹೇಗೆ? ಅಂದರೆ ಹೇಗೆ ಹಸುವಿನಲ್ಲಿರುವ ಬಿಳಿ-ಕಪ್ಪು ಮುಂತಾದ ಬಣ್ಣಗಳು ಜೀವಸಹಿತವಾದ ಹಸುವಿನ ದೇಹ ಸ್ವರೂಪವಾಗಿರುತ್ತದೋ ಅದೇ ರೀತಿಯಾಗಿ ವಿಶೇಷ ಬಲದಿಂದ ಆನಂದ ಜ್ಞಾನಾದಿಗಳು ಭಕ್ತಿಯ ಸ್ವರೂಪಭೂತ ಗುಣಗಳಾಗಿರುವುವು. ಮೋಕ್ಷದಲ್ಲಿ ಆನಂದಜ್ಞಾನಾದಿ

ಗಳಿಗಿಂತ ಬೇರೆಯಾಗಿ ಅತಿರಿಕ್ತವಾಗಿ ಅಥವಾ ವಿರುದ್ಧವಾಗಿ ಯಾವುದೂ ಇರುವುದಿಲ್ಲವಷ್ಟೆ.

'ಯಥಾ ಶೌಕ್ಲ್ಯಾದಿಕಂ ರೂಪಂ ಗೌರ್ಭವತ್ಯೇವ ಸರ್ವದಾ ।
ಸುಖಜ್ಞಾನಾದಿಕಂ ರೂಪಮೇವಂ ಭಕ್ತೇರ್ನಚಾನ್ಯಥಾ ॥
(ಮ.ಭಾ.ತಾ.ನಿ. 1-115)

ಮುಕ್ತರಾದ ಬ್ರಹ್ಮಾದಿದೇವತೆಗಳಿಗೆ ತಾರತಮ್ಯವಿರುವುದಕ್ಕೂ ಭಕ್ತಿಯ ತಾರತಮ್ಯವೇ ಕಾರಣ.

'ಬ್ರಹ್ಮಾದೀನಾಂ ಚ ಮುಕ್ತಾನಾಂ ತಾರತಮ್ಯೇ ತು ಕಾರಣಂ ।
ತಾರತಮ್ಯಸ್ಥಿತಾಽನಾದಿರ್ನಿತ್ಯಾ ಭಕ್ತಿರ್ನ ಚೇತರತ್॥''
(ಮ.ಭಾ.ತಾ.ನಿ. 1-117)

ಮುಕ್ತರಲ್ಲಿ ಭಕ್ತಿಯು ತಾನೇ ತಾರತಮ್ಯದಿಂದ ಅನಾದಿನಿತ್ಯವಾಗಿ ಇರುವುದು. ಇದೇ ಮುಕ್ತರಲ್ಲಿ ತಾರತಮ್ಯ ಬರಲು ಕಾರಣವಾಗಿದೆ. ಮೋಕ್ಷತಾರತಮ್ಯಕ್ಕೆ ಬೇರೆ ಯಾವ ಕಾರಣವು ಇಲ್ಲವಷ್ಟೆ.

ಮೋಕ್ಷಕ್ಕೆ ಸ್ವತಂತ್ರ ಸಾಧನ ಭಕ್ತಿಯೋ ಭಗವಂತನೋ?

ಸಂಸಾರರೂಪ ಪಾಶದಿಂದ ಜೀವರನ್ನು ಬಂಧನಕ್ಕೊಳಪಡಿಸುವವನೂ, ಭವಬಂಧನದಿಂದ ಬಿಡುಗಡೆ ಮಾಡುವವನೂ, ಅಜ್ಞಜನರಿಗೆ ಜ್ಞಾನವನ್ನು ಕೊಡುವವನೂ, ಜ್ಞಾನಿಗೆ ಮೋಕ್ಷಪ್ರದನೂ ಮುಕ್ತರಿಗೆ ಆನಂದನೀಡುವವನೂ ಶ್ರೀಹರಿ ಒಬ್ಬನೇ. ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರ, ನಿಯಮನ, ಜ್ಞಾನ, ತಿರೋಧಾನ, ಸಾಂಸಾರಿಕ ಬಂಧನ, ಬಂಧದಿಂದ ಮೋಕ್ಷ ಇವೆಲ್ಲ ಪುರುಷೋತ್ತಮನಾದ ಶ್ರೀಹರಿಯಿಂದಲೇ ಆಗುತ್ತವೆ. ಆದುದರಿಂದ ಅವನೇ ಸರ್ವತಂತ್ರ ಸ್ವತಂತ್ರ, ಪರಮ ಮುಖ್ಯ ಹಾಗೂ ಸರ್ವಸ್ವಾಮಿಯಾಗಿದ್ದಾನೆ-

'ಬಂಧಕೋ ಭವ ಪಾಶೇನ ಭವಪಾಶಾಚ್ಚ ಮೋಚಕಃ।'

(ಶ್ರೀಮನ್ನ್ಯಾಯಸುಧಾ - 1-1-1)

'ಸೃಷ್ಟಿಃ ಸ್ಥಿತಿಶ್ಚ ಸಂಹಾರೋ ನಿಯತಿರ್ಜ್ಞಾನಮಾವೃತಿಃ।
ಬಂಧಮೋಕ್ಷೌ ಚ ಪುರುಷಾದ್ ಯಸ್ಮಾತ್ ಸ ಹರಿರೇಕರಾಟ್ ॥'

(ಅನುವ್ಯಾಖ್ಯಾನ - 1-1-2)

ಹೀಗೆ ಮೇಲೆ ನಿರೂಪಿಸಿದ ಪ್ರಮಾಣವಚನಗಳಿಂದ ಶ್ರೀಹರಿಯೇ ಪರಮಮೋಕ್ಷಸಾಧನನೆಂದು ತಿಳಿಯುತ್ತದೆ.

ಹಾಗೆ

'ಭಕ್ತಿರೇವೈನಂ ನಯತಿ ಭಕ್ತಿರೇವೈನಂ
ದರ್ಶಯತಿ ಭಕ್ತಿವಶಃ ಪುರುಷೋ ಭಕ್ತಿರೇವ ಭೂಯಸೀ'

(ಸೂತ್ರಭಾಷ್ಯ-3-3-54. ಮಾಠರಶ್ರುತಿ)

ಭಕ್ತಿಯೇ ಅಧಿಕಾರಿಯನ್ನು ಪರಬ್ರಹ್ಮನ ಸಮೀಪಕ್ಕೆ ಕೊಂಡೊಯ್ಯುತ್ತದೆ. ಭಕ್ತಿಯೇ ವಿಷ್ಣುವನ್ನು ಭಕ್ತನಿಗೆ ತೋರಿಸುತ್ತದೆ. ಶ್ರೀಹರಿಯು ಹರಿಭಕ್ತಿಯ ಅಧೀನ. ಭಕ್ತಿಯೇ ಸಾಧನಗಳಲ್ಲೆಲ್ಲ ಶ್ರೇಷ್ಠವಾದುದು - ಎಂಬ ಶ್ರುತಿಗೆ ಅನುಸಾರವಾಗಿ ಮೋಕ್ಷಕ್ಕೆ ಪರಮಸಾಧನ ಭಕ್ತಿಯೆಂದು ತಿಳಿಯುತ್ತದೆ. ಹೀಗೆ ಅಸ್ವತಂತ್ರವಾದ ಭಕ್ತಿಗೆ ಮೋಕ್ಷದಾಯಕತ್ವ ವಚನವು ಹೇಗೆ ಯುಕ್ತವಾದೀತು?

ಈ ಎರಡು ವಚನಗಳನ್ನು ಹೀಗೆ ಹೊಂದಿಸಬೇಕು. ವಾಸ್ತವಿಕವಾಗಿ ಶ್ರೀಹರಿಯೇ ಸ್ವತಂತ್ರನಾಗಿ ಮೋಕ್ಷದಾಯಕನು. ಆದರೆ ಭಕ್ತಿಯಿಲ್ಲದಿದ್ದರೆ ಪರಮಾತ್ಮನು ಮೋಕ್ಷವನ್ನು ಕೊಡುವುದಿಲ್ಲ. ಭಕ್ತಿಯಾದರೂ ಮೋಕ್ಷ ಕಾರಣವಾದ ಭಗವತ್ಪ್ರಸಾದವನ್ನು ಹೊಂದಿಸಿ ಸಂಪಾದಿಸಿಕೊಡುವುದರಿಂದ ಅಸ್ವತಂತ್ರ ಮೋಕ್ಷಸಾಧನವಾದವುಗಳಲ್ಲಿ ಪರಮ ಮೋಕ್ಷಸಾಧನವೆನಿಸಿದೆ.

'ಭಕ್ತಿರೇವೈನಂ ನಯತಿ' ಇತ್ಯಾದಿ ಶ್ರುತ್ಯರ್ಥವನ್ನು ಶ್ರೀಮದಾಚಾರ್ಯರು ಬ್ರಹ್ಮಸೂತ್ರಭಾಷ್ಯದಲ್ಲಿ ಮಾಯಾವೈಭವ ಎಂಬ ಗ್ರಂಥದ ಪ್ರಮಾಣವನ್ನು (ಸೂತ್ರಭಾಷ್ಯ 3-3-54) ಉದಾಹರಿಸುವ ಮೂಲಕ ವ್ಯಾಖ್ಯಾನಿಸಿದ್ದಾರೆ.

'ಭಕ್ತಿಸ್ಥಃ ಪರಮೋ ವಿಷ್ಣುಃ ತಯೈವೈನಂ ವಶಂ ನಯೇತ್ ।
ತಯೈವ ದರ್ಶನಂ ಯಾತಃ ಪ್ರದದ್ಯಾನ್ಮುಕ್ತಿಮೇತಯಾ ।
ಸ್ನೇಹಾನುಬಂಧೋ ಯಸ್ತಸ್ಮಿನ್ ಬಹುಮಾನಪುರಸ್ಸರಃ ।
ಭಕ್ತಿರಿತ್ಯುಚ್ಯತೇ ಸೈವ ಕರಣಂ ಪರಮೇಶಿತುಃ ॥'

(ಬ್ರಹ್ಮಸೂತ್ರಭಾಷ್ಯ 3-3-54)

ಭಕ್ತಿಸ್ಥಿತನಾಗಿರುವ ಸರ್ವೋತ್ತಮನಾದ ವಿಷ್ಣುವೇ ಆ ಭಕ್ತಿಯ ಮೂಲಕ ಸಾಧಕನನ್ನು ತನ್ನ ವಶಕ್ಕೆ ತೆಗೆದುಕೊಳ್ಳುವನು. ತಾನು ನೆಲೆಸಿರುವ ಭಕ್ತಿಯಿಂದಲೇ ಸಾಧಕನಿಗೆ ಪ್ರತ್ಯಕ್ಷನಾಗುವನು. ತನ್ನ ಅಧೀನವಾದ ಭಕ್ತಿಯಿಂದಲೇ ಮೋಕ್ಷವನ್ನು ನೀಡುವನು. ಆ ಪರಮಾತ್ಮನಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವಾದ ಬಹುಮಾನ ಪುರಸ್ಸರವಾದ ಯಾವ ಸ್ನೇಹ ಬಂಧವಿದೆಯೋ ಅದೇ ಭಕ್ತಿ ಎನಿಸಿದೆ. ಭಗವಂತನನ್ನು ಹೊಂದಲು ಅದೆ ಪರಮಸಾಧನ (ಕರಣ)ವೆನಿಸಿದೆ.

ಹೀಗೆ ಹೇಳಿದ್ದರಿಂದ **'ಭಕ್ತಿರೇವೈನಂ ನಯತಿ'** (ಮಾಠರ ಶ್ರುತಿ) ಭಕ್ತಿಯೇ ಭಗವಂತನೆಡೆಗೆ ಸಾಧಕನನ್ನು ಕರೆದೊಯ್ಯುತ್ತದೆ ಮುಂತಾದ ವ್ಯವಹಾರವು **'ಕಾಷ್ಠಂ ಪಚತಿ'** ಕಟ್ಟಿಗೆ ಅಡಿಗೆ ಮಾಡುತ್ತದೆ - ಮುಂತಾದ ಪ್ರಯೋಗಗಳಂತೆ ಔಪಚಾರಿಕ ಅಂದರೆ ಅಮುಖ್ಯವೆಂದು ತಿಳಿಯಬೇಕು. ಸಾಧನಗಳಲ್ಲಿ ಭಕ್ತಿಯೇ ಶ್ರೇಷ್ಠವಾದುದು ಎಂಬ ಅರ್ಥದಲ್ಲಿ ಶ್ರುತಿಯು ಭಕ್ತಿಗೆ ಕರ್ತೃತ್ವವನ್ನು ಹೇಳಿದೆ. ಆದರೆ **'ಕರಣಂ ಪರಮೇಶಿತುಃ'** ಮೋಕ್ಷ ಕೊಡುವ ಭಗವಂತನಿಗೆ ಭಕ್ತಿಯು ಕರಣ ಅಂದರೆ 'ಸಾಧಕತಮಂ ಕರಣಂ' - ಶ್ರೇಷ್ಠಸಾಧನ ಅಥವಾ **'ಅಸಾಧಾರಣಂ ಕಾರಣಂ ಕರಣಂ'** - ಅಸಾಧಾರಣ

ಕಾರಣವೆಂದರ್ಥ. ಈ ಅರ್ಥವನ್ನೇ ಸ್ಮೃತಿಯು **'ತಯೈವ ದರ್ಶನಂ ಯಾತಃ'** ಎಂದು ಹೇಳಿದೆ. ಸಾಧನಗಳಲ್ಲಿ ಪ್ರಧಾನ ಸಾಧನ ಭಕ್ತಿ. ಯಾವುದೇ ಕಾರಣಕ್ಕೂ ಭಕ್ತಿಗೆ ಸ್ವಾತಂತ್ರ್ಯದಿಂದ ಮುಕ್ತಿ ಕಾರಣತ್ವವಿಲ್ಲ. ಸ್ವತಂತ್ರನಾಗಿ ಭಗವಂತನೇ ಮುಕ್ತಿ ಕಾರಣನು. ಇದರಿಂದ **'ಬಂಧಕೋ ಭವಪಾಶೇನ ಭವಪಾಶಾಚ್ಚ ಮೋಚಕಃ'** - ಮುಂತಾದ ಪ್ರಮಾಣಗಳ ಅರ್ಥವನ್ನು ವಿವರಿಸಿದಂತಾಯಿತು.

ಸಜ್ಜೀವನದಲ್ಲಿ ಅನಾದಿಕಾಲದಿಂದಲೂ ಭಕ್ತ್ಯಾದಿಗುಣಗಳು ಇದ್ದರೂ ಅವು ಜೀವನಿಗೆ ಮೋಕ್ಷವನ್ನು ಹೊಂದಿಸಿಲ್ಲ. ಏಕೆಂದರೆ ಆ ಗುಣಗಳು ಅಸ್ವತಂತ್ರಗಳು. ಅವುಗಳಿಗೆ ಜೀವನನ್ನು ಮುಕ್ತನನ್ನಾಗಿಸುವ ಸ್ವಾತಂತ್ರ್ಯವಿಲ್ಲ. ಸ್ವತಂತ್ರನಾದ ವಿಷ್ಣು ಒಬ್ಬನೇ ಜೀವನಲ್ಲಿ ಇರುವ ಭಕ್ತ್ಯಾದಿಗುಣಗಳನ್ನು ಅಭಿವ್ಯಕ್ತಮಾಡಿ ಅವನಿಗೆ ಮೋಕ್ಷವನ್ನು ನೀಡುತ್ತಾನೆ. ಯಾರಿಗೆ ಭಕ್ತ್ಯಾದಿಗುಣಗಳಿಲ್ಲವೋ ಅವನನ್ನು ವಿಷ್ಣುವು ಸಾಂಸಾರಿಕ ಬಂಧನದಿಂದ ಬಿಡುಗಡೆಗೊಳಿಸುವುದಿಲ್ಲ. ಮುಕ್ತನನ್ನಾಗಿಸುವುದಿಲ್ಲ.

ಅನಾದಿತೋ ಗುಣಾಃ ಸಂತೋ ಭಕ್ತ್ಯಾದ್ಯಾ ನಹ್ಯಮೂಮುಚನ್ ।
ಜೀವಂ ತದ್ಗುಣಸುವ್ಯಕ್ತಿಂ ಕೃತ್ವೈನಂ ಮೋಚಯೇದ್ಧರಿಃ ।
ಕಿಂಚಿನ್ನ ಮೋಚಯೇದ್ವಾಸೌ ಸ್ವಾತಂತ್ರ್ಯಂ ತೇನ ತಸ್ಯಹಿ ॥

(ಬ್ರಹ್ಮಸೂತ್ರಭಾಷ್ಯದ-ಬ್ರಹ್ಮತರ್ಕವಚನ)

ಮೋಕ್ಷವಾಗುವ ಪದ್ಧತಿಯನ್ನು ಶ್ರುತಿಯು ಹೀಗೆ ಹೇಳಿದೆ-

'ತಸ್ಯಾನುಧ್ಯಾನಾದ್ ಯೋಜನಾತ್ ತತ್ವಭಾವಾದ್
ಭೂಯಶ್ಚಾಂತೇ ವಿಶ್ವಮಾಯಾನಿವೃತ್ತಿಃ'

(ಶ್ವೆ1-10)

ಶ್ರೀಹರಿಯಲ್ಲಿ ಮತ್ತೆ ಮತ್ತೆ ಮನಸ್ಸನ್ನು ಸಂಯೋಜಿಸುವುದರಿಂದ, ಯಥಾರ್ಥ ಧ್ಯಾನದಿಂದ, ಯಥಾರ್ಥ ಜ್ಞಾನದಿಂದ ಉಂಟಾದ ಮಧ್ಯಮ

ಪ್ರಸಾದರೂಪವಾದ ಭಗವಂತನ ಇಚ್ಛಾ ವಿಶೇಷದಿಂದ ಪರಿಪಕ್ವ ಸಮಯ ಬಂದಾಗ ಪ್ರಾರಬ್ಧ ಕರ್ಮಾವಸಾನದಲ್ಲಿ ಪರಿಪೂರ್ಣವಾಗಿ ಪ್ರಕೃತಿಯಿಂದ ಬಿಡುಗಡೆ ರೂಪವಾದ ಮೋಕ್ಷವಾಗುತ್ತದೆ.

'ಮಾಯಾನಿವೃತ್ತಿ' ಶಬ್ದಾರ್ಥ

ಈ ಶ್ರುತಿಯಲ್ಲಿ ಬಂದಿರುವ 'ವಿಶ್ವಮಾಯಾ ನಿವೃತ್ತಿ' ಎಂಬ ಶಬ್ದದಲ್ಲಿ ಹೇಳಲಾದ ಮಾಯೆಯನ್ನು ಅವಿದ್ಯಾ, ಪ್ರಕೃತಿ ಮುಂತಾದ ಶಬ್ದಗಳಿಂದ ಕರೆಯಲಾಗುತ್ತದೆ. ಪ್ರಕೃತದಲ್ಲಿ ಮಾಯೆ ಎಂದರೆ ಎರಡು ದುಷ್ಟ ಪ್ರಕೃತಿಗಳು. ಇವುಗಳಿಂದ ಬಿಡುಗಡೆಯಾದಾಗ ಮುಕ್ತಿಯಾಗುತ್ತದೆ. ವಿಷ್ಣುವು ಜೀವನಿಗೆ ಈ ಪ್ರಕೃತಿಗಳಿಂದ ಮೋಕ್ಷವನ್ನು ಉಂಟುಮಾಡುತ್ತಾನೆ.

'ಅಥಾನ್ಯೇ ಪ್ರಕೃತೀ ದುಷ್ಟೇ ನೃಷು ಪ್ರಾತಿಸ್ವಿಕಂಸ್ಥಿತೇ ।
ಸ್ವಗುಣಾಚ್ಛಾದಿಕಾ ಹ್ಯೇಕಾ ಪರಮಾಚ್ಛಾದಿತಾ ಪರಾ ॥
ಸ್ವಗುಣಾಚ್ಛಾದಿಕಾಂ ಹತ್ವಾ ಪರಮಾಚ್ಛಾದಿಕಾಂ ಪರಃ ।
ವ್ಯಾಘುಟ್ಯ ಮೋಕ್ಷಪದವೀಂ ದದಾತಿ ಪುರುಷೋತ್ತಮಃ ॥'

(ಭಾಗವತ ತಾತ್ಪರ್ಯ-ಶ್ರುತಿಗೀತಾ ತಾತ್ಪರ್ಯ)

ಪ್ರತಿಯೊಬ್ಬ ಜೀವರಲ್ಲಿಯೂ ಪ್ರತ್ಯೇಕವಾಗಿ ಎರಡು ದುಷ್ಟ ಪ್ರಕೃತಿಗಳು ನೆಲೆಸಿವೆ. ಒಂದು ಸ್ವಗುಣಾಚ್ಛಾದಿಕಾ, ಮತ್ತೊಂದು ಪರಮಾಚ್ಛಾದಿಕಾ. ಜೀವರದ್ದೆ ಆದ ಜ್ಞಾನಾನಂದಾದಿಗಳ ಅನುಭವವು ಅವರಿಗೆ ಬರದೆ ಇರುವಂತೆ ತಡೆಯಾಗಿ ಇರುವ ತಾಮಸ ಪ್ರಕೃತಿಯೇ ಸ್ವಗುಣಾಚ್ಛಾದಿಕೆ ಎನಿಸಿದೆ. ಲಿಂಗದೇಹ, ಅನಿರುದ್ಧಶರೀರಗಳ ಮಧ್ಯದಲ್ಲಿ ಇರುವ ರಾಜಸ ಪ್ರಕೃತಿಯು ಜೀವರಿಗೆ ಭಗವಂತನ ಜ್ಞಾನಕ್ಕೆ ಪ್ರತಿಬಂಧಕವಾಗಿ ಆಚ್ಛಾದಕವಾಗಿದೆ. ಶ್ರೀಹರಿ ಭಕ್ತಿಯಿಂದ ಪ್ರಸನ್ನನಾಗಿ ಜೀವನಲ್ಲಿ ಆವರಣರೂಪದಿಂದ ಇರುವ ಸ್ವಗುಣಾಚ್ಛಾದಿಕವಾದ ತಾಮಸಪ್ರಕೃತಿ

ಯನ್ನು ನಾಶ ಮಾಡಿ ಪರಮಾಚ್ಛಾದಿಕವಾದ ರಾಜಸ ಪ್ರಕೃತಿಯನ್ನು ಜೀವನಿಂದ ಬಹುದೂರ ಸರಿಸಿ ಅವನಿಗೆ ಮೋಕ್ಷವನ್ನು ನೀಡುತ್ತಾನೆ. ಇದು ಭಗವಂತನು ಜೀವನಿಗೆ ಮೋಕ್ಷ ನೀಡುವ ಬಗೆ. ಇಷ್ಟೆಲ್ಲಾ ವ್ಯಾಪಾರ ಮಾಡುವ ಸಾಮರ್ಥ್ಯ ಭಕ್ತಿಗಿಲ್ಲ. ಆದುದರಿಂದ '**ಭಕ್ತಿರೇವೈನಂ ನಯತಿ**' ಮುಂತಾದ ಮಾತು ಕರಣವಾದ ಭಕ್ತಿಯಲ್ಲಿ ಕರ್ತೃತ್ವದ ಉಪಚಾರದಿಂದ ಪ್ರವೃತ್ತವಾಗಿ ಸಾವಕಾಶವಾಗಿದೆ ಎಂದು ತಿಳಿಯಬೇಕು.

ಅಧಿಕಾರಿ ವರ್ಗದಲ್ಲಿ ಜ್ಞಾನಯೋಗಿ ಮುಂತಾದ ಪ್ರಭೇದವು ಹೇಗೆ?

ಹಿಂದೆ ನಿರೂಪಿಸಿದ ರೀತಿಯಿಂದ ಎಲ್ಲರಿಗೂ ಭಕ್ತಿಯೋಗದಿಂದಲೇ ಮುಕ್ತಿಯಾಗುವುದಾದರೆ ಭಕ್ತಿಯೋಗವು ಸಕಲ ಮುಕ್ತಿಯೋಗ್ಯರಾದ ಅಧಿಕಾರಿ ಜನರಲ್ಲಿ ಸಾಧಾರಣವೆಂದಾಯಿತು. ಆ ಪಕ್ಷದಲ್ಲಿ ಮುಕ್ತಿಯೋಗ್ಯರಾದ ಸನಕಾದಿಗಳನ್ನು ಜ್ಞಾನಯೋಗಿಗಳೆಂದು, ದೇವತೆಗಳನ್ನು ಭಕ್ತಿಯೋಗಿಗಳೆಂದು, ಮನುಷ್ಯರನ್ನು ಕರ್ಮಯೋಗಿಗಳೆಂದು ಮೋಕ್ಷೋಪಾಯವುಳ್ಳ ಸಾಧಕವರ್ಗದವರನ್ನು ವಿಭಾಗಿಸಿದ ಬಗೆ ಹೇಗೆ? ಎಂಬ ಜಿಜ್ಞಾಸೆ ಉಂಟಾಗುತ್ತದೆ-

ಸನಕಾದ್ಯಾಃ ಜ್ಞಾನಯೋಗಾಃ ಭಕ್ತಿಯೋಗಾಸ್ತು ದೇವತಾಃ ।
ಮಾನುಷಾಃ ಕರ್ಮಯೋಗಾಶ್ಚ ತ್ರಿಧೈತೇ ಯೋಗಿನಃ ಸ್ಮೃತಾಃ ॥

ಸರ್ವೇಷಾಂ ಸರ್ವಯೋಗೈಶ್ಚ ಪ್ರಾಪ್ಯಾ ಮುಕ್ತಿರ್ನ ಸಂಶಯಃ ।
ತಥಾಽಪಿ ತು ವಿಶೇಷೇಣ ಸ ಸ ತೇಷಾಂ ವಿಧೀಯತೇ ॥

(**ಭಾಗವತ ತಾತ್ಪರ್ಯ 11-20-6**)

ಎಲ್ಲಾ ಸಾಧಕರಿಗೆ ಮೋಕ್ಷ ಪಡೆಯಲು ಭಕ್ತಿಯೇ ಪ್ರಧಾನ ಸಾಧನವಾದರೆ ಅವರಲ್ಲಿ ಇರುವ ಜ್ಞಾನ-ಕರ್ಮದ ಸ್ಥಾನ ಯಾವ

ಬಗೆಯದ್ದು? ಸಾಧಕರಲ್ಲಿ ಜ್ಞಾನಯೋಗಿ, ಭಕ್ತಿಯೋಗಿ, ಕರ್ಮಯೋಗಿ ಎಂಬ ತ್ರೈವಿಧ್ಯವು ಹೇಗೆ ಯುಕ್ತವಾಗುವುದು?

ಈ ಪ್ರಶ್ನೆಗೆ ಶ್ರೀಮದಾಚಾರ್ಯರು ಏಕಾದಶ ಭಾಗವತ ತಾತ್ಪರ್ಯದಲ್ಲಿ ಉತ್ತರವನ್ನು ನೀಡಿದ್ದಾರೆ-

ಯಾರು ಕರ್ಮಯೋಗಿಗಳು?

ಹಿಂದೆ ಹೇಳಿದ ಮೂವರು ಸಾಧಕರು ಭಕ್ತಿಯೋಗಿಗಳೇ. ಇವರೆಲ್ಲರೂ ಭಕ್ತಿಯಿಂದಲೇ ಮೋಕ್ಷವನ್ನು ಪಡೆಯುವರು. ಆದರೆ ಕರ್ಮಯೋಗಿಗಳಾದ ಮಾನುಷೋತ್ತಮರು ಶಾಸ್ತ್ರದಲ್ಲಿ ಹೇಳಿದ ಸತ್ಕರ್ಮಾಚರಣೆಯ ಪ್ರಕಾರವನ್ನು ಸರಿಯಾಗಿ ಅರಿತು ಹೆಚ್ಚಾಗಿ ಸತ್ಕರ್ಮಾಚರಣೆಯನ್ನು ಮಾಡಿ ವಿಷ್ಣುವಿನ ಜ್ಞಾನ ಪಡೆದು ಭಕ್ತಿಯೋಗ ಉಳ್ಳವರಾಗುವುದರಿಂದ ಕರ್ಮಯೋಗಿಗಳೆಂದು ಹೇಳಲ್ಪಟ್ಟಿದ್ದಾರೆ-

'ಕರ್ಮಾಣಿ ಶಾಸ್ತ್ರತೋ ಜ್ಞಾತ್ವಾ ತತ್ಪ್ರಾಧಾನ್ಯಾನುಸಾರತಃ।
ವಿಜ್ಞಾತಾ ಯೈರ್ಗುಣಾ ವಿಷ್ಣೋಃ ಜ್ಞೇಯಾಸ್ತೇ ಕರ್ಮಯೋಗಿನಃ॥

(ಭಾಗ.ತಾ.ನಿ. 11-20-6)

ಕರ್ಮಯೋಗಿಗಳ ಸ್ವರೂಪವನ್ನು ಶ್ರೀಮದಾಚಾರ್ಯರು ಅಲ್ಲಿ ಹೇಳಿದ್ದಾರೆ-

ನಿರಂಶಾಃ ಸತ್ಸಾಧನಾಯೋಚಿತಜನ್ಮಸಹಸ್ರತಃ।
ಜ್ಞಾನಂ ತು ದಶಭಿಃ ಪ್ರಾಪ್ಯ ಸದ್ಭಕ್ತಿಂ ತ್ರಿಭಿರಾಪ್ಯ ಚ।
ದೃಷ್ಟ್ವಾ ಹೃದಿಸ್ಥಂ ಮುಚ್ಯಂತೇ ಹ್ಯತಸ್ತೇ ಕರ್ಮಯೋಗಿನಃ॥

ನಿರಂಶರಾದ ಜೀವರು ಉತ್ತಮ ಸಾಧನೆಗಾಗಿ ಯೋಗ್ಯವಾದ ಸತ್ಕರ್ಮಾಚರಣೆಯನ್ನು ಸಾವಿರಜನ್ಮಗಳಲ್ಲಿ ಮಾಡಿ ಹತ್ತು ಜನ್ಮಗಳಿಂದ ಜ್ಞಾನವನ್ನು ಪಡೆಯುತ್ತಾರೆ. ಮುಂದಿನ ಮೂರು ಜನ್ಮಗಳಿಂದ

ಭಗವದ್ಭಕ್ತಿಯನ್ನು ಪಡೆದು ಸ್ವಬಿಂಬಾಪರೋಕ್ಷವನ್ನು ಪಡೆದು ಮುಕ್ತರಾಗುವರು. ಇವರು ಮೋಕ್ಷಕ್ಕೆ ಮುಖ್ಯ ಸಾಧನವಾದ ಅತಿಶಯ ಭಕ್ತಿಗೆ ಉಪಯುಕ್ತವಾದ ಜ್ಞಾನವನ್ನು ಹೊಂದಿಸುವ ಸತ್ಕರ್ಮ ಪ್ರಾಚುರ್ಯವುಳ್ಳವರಾದ್ದರಿಂದ ಕರ್ಮಯೋಗಿಗಳು.

ಯಾರು ಜ್ಞಾನಯೋಗಿಗಳು ?

ನಿರುಕ್ತ, ಕಲ್ಪ ಮುಂತಾದ ವೇದಾಂಗಗಳನ್ನು ಅನುಸರಿಸಿ ಬ್ರಹ್ಮ ಮೀಮಾಂಸಾಶಾಸ್ತ್ರಾನುಸಾರವಾಗಿ ವೇದಾರ್ಥವನ್ನು ಅರಿತು, ವೇದಾರ್ಥದ ಅನುಸಾರವಾಗಿ ಶ್ರೀಹರಿಯಲ್ಲಿ ಸಕಲ ಸದ್ಗುಣಗಳನ್ನು ಸಮನ್ವಯಿಸಿ ಕೊಳ್ಳುವವರು ಜ್ಞಾನಯೋಗಿಗಳೆನಿಸುತ್ತಾರೆ. ನಿಷ್ಕಾಮನೆಯಿಂದ ನಿವೃತ್ತಕರ್ಮಗಳನ್ನು ಆಚರಿಸಿ **'ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ'** ಎಂಬ ವೇದವು ಹೇಳುವಂತೆ ಶ್ರೋತ್ರಿಯರಾದ ಹಾಗು ಬ್ರಹ್ಮನಿಷ್ಠರಾದ ಗುರುಗಳ ಸಹವಾಸವನ್ನು ಪಡೆದ ಅತಾತ್ವಿಕ ದೇವತೆಗಳೆ ಜ್ಞಾನಯೋಗಿ ಗಳಾಗಿದ್ದಾರೆ. ಇವರು ತಾತ್ವಿಕ ದೇವತೆಗಳ ದಾಸರು ಹಾಗು ನೂರು ಜನ್ಮಗಳಲ್ಲಿ ಸತ್ಕರ್ಮಾನುಷ್ಠಾನ ಮಾಡಿ ಹತ್ತು ಸಾವಿರ ಜನ್ಮಗಳಲ್ಲಿ ಜ್ಞಾನಸಾಧನೆಯನ್ನು ಮಾಡಿ, ಮತ್ತೆ ನೂರು ಜನ್ಮಗಳಲ್ಲಿ ಭಕ್ತಿಯೋಗವನ್ನು ಅನುಷ್ಠಾನ ಮಾಡಿ ಮುಕ್ತಿಯನ್ನು ಪಡೆಯುವರು.

ಇವರು ಮೋಕ್ಷಕ್ಕೆ ಪರಮಸಾಧನವಾದ ಭಕ್ತ್ಯತಿಶಯಕ್ಕೆ ಉಪಯುಕ್ತ ವಾದ ಅಧಿಕ ಜ್ಞಾನವನ್ನು ಪಡೆದವರಾದ್ದರಿಂದ ಜ್ಞಾನಯೋಗಿಗಳೆಂದು ಕರೆಯಲ್ಪಟ್ಟಿದ್ದಾರೆ. ಇವರಲ್ಲಿ ಅಲ್ಪವಾದ ಕರ್ಮಯೋಗ ಹಾಗು ಭಕ್ತಿಯೋಗಗಳು ಇವೆ.

ಅಂಗಾನುಸಾರಿವೇದಾರ್ಥಂ ಜ್ಞಾತ್ವಾ ತದನುಸಾರತಃ ।
ಭಗವದ್ಗುಣಾ ಯೈರ್ನಿರ್ಣಯಂತೇ ತೇ ಪ್ರೊಕ್ತಾ ಜ್ಞಾನಯೋಗಿನಃ ॥

ಸತ್ಕರ್ಮ ಕೃತ್ವಾ ನಿಷ್ಕಾಮಂ ಲಭಂತೇ ಗುರುಸಂತತಿಂ ।
ಅತಾತ್ತ್ವಿಕಾ ದೇವದಾಸಾಃ ಸತ್ಕರ್ಮಶತಜನ್ಮಭಿಃ ॥
ಕೃತ್ವಾ ದಶಸಹಸ್ರೋರುಜನ್ಮಭಿರ್ಜ್ಞಾನಮಾಪ್ಯ ಚ ।
ಭಕ್ತಿಂ ಚ ತ್ರಿಶತ್ಯೈರಾಪ್ಯ ಮುಚ್ಯಂತೇ ಜ್ಞಾನಯೋಗಿನಃ ॥

(ಭಾ.ತಾತ್ಪರ್ಯ 11-20-6)

ಭಕ್ತಿಯೋಗಿಗಳು ಯಾರು ?

ತಾವು ನೋಡಿದ ಭಗವಂತನ ಗುಣಕ್ಕೆ ಅನುಸಾರವಾಗಿ ವೇದಭಾಗಗಳು ತಾವು ನೋಡಿದ ಗುಣಗಳನ್ನು ಹೇಳುತ್ತಿವೆ ಎಂದು ವೇದಾರ್ಥವನ್ನು ತಿಳಿಯುವವರು ಭಕ್ತಿಯೋಗಿಗಳಾಗಿರುತ್ತಾರೆ.

ಮುಖ್ಯವಾಗಿ ಭಕ್ತಿಯೋಗಿಗಳು ಪ್ರಸಿದ್ಧರಾದ ತತ್ವಾಭಿಮಾನಿ ದೇವತೆಗಳೇ. ಭಕ್ತಿಯೋಗಿಗಳಿಗೆ ಭಗವಂತನ ಗುಣಗಳಲ್ಲಿ ಹೆಚ್ಚು ಸ್ನೇಹವಿರುವುದರಿಂದ ಮೂರು ವಿಧ ಯೋಗಿಗಳಲ್ಲಿ ಇವರೇ ವಿಶೇಷವಾಗಿ ಶ್ರೇಷ್ಠರು.

'ಭಗವದ್ಗುಣಾನುಸಾರೇಣ ವೇದಾರ್ಥೋ ನೀಯತೇ ಹಿ ಯೈಃ ।
ಭಕ್ತಿಯೋಗಾಸ್ತು ತೇ ಪ್ರೋಕ್ತಾಸ್ತಾದೃಶಾ ಹಿ ಸುರಾಃ ಸದಾ ॥

(ಭಾ.ತಾತ್ಪರ್ಯ 11-30-8)

ಕರ್ಮಯೋಗಿಗಳಾದ ಮನುಷ್ಯರಲ್ಲಿ ಭಕ್ತಿ-ಜ್ಞಾನಗಳು ಸ್ವಲ್ಪ ಮಾತ್ರ ಕೊನೆಗೆ ಹುಟ್ಟುತ್ತವೆ. ಅವುಗಳು ಕರ್ಮದಿಂದ ಹುಟ್ಟುವುದರಿಂದ ಅವರು ಕರ್ಮಯೋಗಿಗಳು. ಭಕ್ತಿಯೋಗಿಗಳಾದ ದೇವತೆಗಳಲ್ಲಿ ಮಾಹಾತ್ಮ್ಯ ಜ್ಞಾನವೂ ಸ್ನೇಹವು ಎರಡೂ ಹೆಚ್ಚಾಗಿ ಇರುವುದರಿಂದ ಇವರು ಭಕ್ತಿಯೋಗಿಗಳು. ಜ್ಞಾನಯೋಗಿಗಳಾದ ಸನಕಾದಿಗಳು ಮನುಷ್ಯರಿಗಿಂತ ಹೆಚ್ಚು ಜ್ಞಾನವುಳ್ಳವರಾದ್ದರಿಂದ ಜ್ಞಾನಯೋಗಿಗಳೆಂದು ಉಕ್ತರಾಗಿದ್ದಾರೆ.

ವಿನಹ ದೇವತೆಗಳಿಗಿಂತ ಅವರಿಗೆ ಜ್ಞಾನಾಧಿಕ್ಯವಿಲ್ಲ. ದೇವತೆಗಳು ಕರ್ಮಾನುಷ್ಠಾನ ಮಾಡುವವರಾದರೂ ಅವರಿಗೆ '**ಅಕರಣೆ ಪ್ರತ್ಯವಾಯಃ**' ಕರ್ಮಾಚರಣೆ ಮಾಡದಿದ್ದರೆ ಕಾರ್ಯವಿಘ್ನ ಉಂಟಾಗುತ್ತದೆ ಎಂಬ ನಿಯಮದಿಂದ ಬಹಿರ್ಭೂತರಾದವರಾದ್ದರಿಂದ ಕರ್ಮಯೋಗಿಗಳೆನಿಸಿಲ್ಲ. ಮನುಷ್ಯರಿಗೆ ಮಾತ್ರ ಕರ್ಮಾನುಷ್ಠಾನವು ಅವಶ್ಯ ಕರ್ತವ್ಯವಾದ್ದರಿಂದ ಹಾಗೂ ಲೋಪದೋಷಾದಿಗಳಿಂದ ಪ್ರತ್ಯವಾಯವು ಉಂಟಾಗುವುದರಿಂದ ಕರ್ಮಯೋಗಿಗಳೆನಿಸಿದ್ದಾರೆ.

ಈ ತ್ರಿಯೋಗಗಳಲ್ಲಿ ಭಕ್ತಿಯೋಗವು ಉತ್ತಮವಾದುದು. ಜ್ಞಾನಯೋಗವು ಮಧ್ಯಮವಾದುದು. ಕರ್ಮಯೋಗವು ಅಧಮವಾದುದು. ಹೀಗೆ ಈ ಮೂರು ಯೋಗಗಳನ್ನು ಚೆನ್ನಾಗಿ ಅರಿತು ಭಕ್ತಿಯೋಗದಲ್ಲಿ ಹೆಚ್ಚಿನ ಪ್ರಯತ್ನವನ್ನು ಸಾಧಕರಾಗಿರುವವರು ಮಾಡಬೇಕು.

ಭಕ್ತಿಯ ಪರ್ಯಾಯ ಶಬ್ದಗಳು

1. ಆದರ, ಭಜನ, ಭಕ್ತಿ, ಬಹುಮಾನ, ಸೇವೆ ಇವೆಲ್ಲವೂ ಭಕ್ತಿಯನ್ನೆ ಹೇಳುವ ಶಬ್ದಗಳೆಂದು ಶಬ್ದನಿರ್ಣಯದಲ್ಲಿ ಹೇಳಿದೆ-

'ಆದರೋ ಭಜನಂ ಭಕ್ತಿರ್ಬಹುಮಾನಂ ಚ ಸೇವನಂ।
ಪರ್ಯಾಯ ವಾಚಕಾಃ ಸರ್ವೇ....॥'

(ಭಾಗವತ ತಾತ್ಪರ್ಯ 11-13-37)

2. ಭಾವ, ಭಕ್ತಿ, ಪ್ರಣಾಮ, ಪ್ರಾವಣ್ಯ ಮತ್ತು ಆದರ ಇವು ಏಕಾರ್ಥವಾಚಕ ಶಬ್ದಗಳು ಎಂದು ಅಭಿಧಾನವಿದೆ.

'ಭಾವೋ ಭಕ್ತಿಃ- ಪ್ರಣಾಮಶ್ಚ ಪ್ರಾವಣ್ಯಮಪಿ ಚಾಽದರಃ'

(ಅಭಿಧಾನ-ಭಾಗವತ ತಾತ್ಪರ್ಯ 2-7-49)

3. ಭಾವ-ಎಂದರೆ ಕೆಲವೆಡೆ ಮನಸ್ಸು, ಕೆಲವು ಕಡೆ ಭಕ್ತಿ, ಕೆಲವು ಕಡೆ ಅಭ್ಯಾಸ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.

'ಭಾವೋ ಮನಶ್ಚ ಭಕ್ತಿಶ್ಚ ಕ್ವಚಿದಭ್ಯಾಸ ಇಷ್ಯತೇ'
(ಶಬ್ದನಿರ್ಣಯ-ಭಾಗವತತಾತ್ಪರ್ಯ 11-15-29)

4. ಭಾವ ಅಂದರೆ ಭಕ್ತಿ. ಭಕ್ತನು ಭಾವುಕ ಎನಿಸುತ್ತಾನೆ.

'ಭಾವೋ ಭಕ್ತಿಃ ಸಮುದ್ದಿಷ್ಟಸ್ತದ್ವಾನ್ ಭಾವುಕ ಉಚ್ಯತೇ ।'
(ನಾರಸಿಂಹ ವಚನ-ಬೃಹದ್ಭಾಷ್ಯ 3-5 ಪುಟ 267)

5. ಅನುಬಂಧವೆಂದರೆ ಭಕ್ತಿ. 'ಸ್ವಾನುಸಾರೇಣ ಬಧ್ನಾತಿ ಹರಿಗುರು ಪ್ರಸಾದಾದಿಕಂ' ತನ್ನನ್ನು ಅನುಸರಿಸಿ ಹರಿಗುರು ಮೊದಲಾದವರ ಅನುಗ್ರಹಾದಿಗಳನ್ನು ಸಂಪಾದಿಸಿ ಕೊಡುವುದರಿಂದ ಭಕ್ತಿಗೆ ಅನುಬಂಧ ವೆಂದು ಹೆಸರು. ಬಂಧವೆಂದರೆ ಸ್ನೇಹ. ಸ್ನೇಹಪೂರ್ವಕವಾದ ಮಾಹಾತ್ಮ್ಯಜ್ಞಾನರೂಪವಾದ ಭಕ್ತಿಯೇ ಅನುಬಂಧ.

'ಅನುಬಂಧಸ್ತು ಭಕ್ತಿಃ ಸ್ಯಾತ್ ಬಂಧಃ ಸ್ನೇಹ ಉದಾಹೃತಃ'
(ಭಾಗ. ತಾ. 7-1-47)

ಭಕ್ತಿಯೋಗದ ನಾಲ್ಕು ಪ್ರಕಾರಗಳು

ಶ್ರೀಮದ್ಭಾಗವತದ ತೃತೀಯಸ್ಕಂಧದ 30ನೇ ಅಧ್ಯಾಯದಲ್ಲಿ ಭಕ್ತಿಯೋಗದ ನಾಲ್ಕು ಪ್ರಕಾರಗಳನ್ನು ಶ್ರೀಕಪಿಲದೇವರು ತಮ್ಮ ತಾಯಿಯಾದ ದೇವಹೂತಿದೇವಿಗೆ ಉಪದೇಶಿಸಿದ್ದಾರೆ. ಈ ಮೊದಲು ದೇವಹೂತಿದೇವಿಯರು-

'ಭಕ್ತಿಯೋಗಸ್ಯ ಮೇ ಮಾರ್ಗಂ ಬ್ರೂಹಿ ವಿಸ್ತರಶಃ ಪ್ರಭೋ'
(ಶ್ರೀಮದ್ಭಾಗವತ 3-30-2)

ಭಕ್ತಿಯೋಗದ ಮಾರ್ಗವನ್ನು ವಿಸ್ತಾರವಾಗಿ ಹೇಳಬೇಕು ಎಂದು ಕೇಳಿದಾಗ ಕಪಿಲದೇವರು-

'ಭಕ್ತಿಯೋಗೋ ಬಹುವಿಧೋ ಮಾರ್ಗೈರ್ಭಾಮಿನಿ ಭಾವ್ಯತೇ ।
ಸ್ವಭಾವಗುಣಮಾರ್ಗೇಣ ಪುಂಸಾಂ ಭಾವೋ ವಿಭಿದ್ಯತೇ ॥

(ಭಾಗ. 3-30-7)

ಜೀವರ ಸ್ವರೂಪಯೋಗ್ಯತೆಯನ್ನು ತೋರುವ ಸತ್ವಾದಿಗುಣಗಳ ವ್ಯತ್ಯಾಸದಿಂದ ಭಕ್ತಿಯೂ ನಾನಾ ಬಗೆಯಾಗಿರುತ್ತದೆ. ಆದುದರಿಂದ ಭಕ್ತಿಯೋಗವು ನಾನಾ ವಿಧವಾಗಿ ಶಾಸ್ತ್ರಗಳಲ್ಲಿ ಹೇಳಲಾಗಿದೆ ಎಂದು ಹೇಳಿರುವರು-

ತಾಮಸಭಕ್ತ, ರಾಜಸಭಕ್ತ, ಸಾತ್ವಿಕಭಕ್ತ ಎಂದು ಸತ್ವಾದಿಗುಣ ಭೇದದಿಂದ ಮೂರು ರೀತಿಯ ಭಕ್ತರಿದ್ದಾರೆ. ನಾಲ್ಕನೆಯ ಭಕ್ತ ನಿರ್ಗುಣ ಭಕ್ತ ಅಥವಾ ಆತ್ಯಂತಿಕ ಭಕ್ತ ಎಂದು ಭಕ್ತಿಯೋಗದಲ್ಲಿ ಒಟ್ಟು ನಾಲ್ಕು ಪ್ರಭೇದಗಳಿವೆ.

ತಾಮಸಭಕ್ತ

'ಅಭಿಸಂಧಾಯ ಯೋ ಹಿಂಸಾಂ ದಂಭಂ ಮಾತ್ಸರ್ಯಮೇವ ವಾ ।
ಸಂರಂಭೀ ಭಿನ್ನದೃಗ್ ಭಾವಂ ಮಯಿ ಕುರ್ಯಾತ್ ಸ ತಾಮಸಃ ॥

(ಭಾಗ. 3-30-8)

ಹಿಂಸೆ, ಉಪದ್ರವ, ದಂಭಾಚಾರ, ಮಾತ್ಸರ್ಯಗಳನ್ನು ಮನಸ್ಸಿನಲ್ಲಿ ತುಂಬಿಕೊಂಡು ವಸ್ತುಗಳನ್ನು ವಿಪರೀತವಾಗಿ ತಿಳಿಯುತ್ತಾ ವಿಷ್ಣುಭಕ್ತರನ್ನು ದ್ವೇಷ ಮಾಡುತ್ತಾ ವಿಷ್ಣುಭಕ್ತಿ ಮಾಡಿದರೆ ಅವನು ತಾಮಸ ಭಕ್ತನೆನಿಸುತ್ತಾನೆ. ಇವನೇ ಭಕ್ತಾಧಮನಾಗಿದ್ದಾನೆ.

ಭಕ್ತಾಧಮರಲ್ಲಿ ಮೂರು ಬಗೆ

ವಿಷ್ಣುವು ಪ್ರತಿಮೆಯಲ್ಲಷ್ಟೆ ಇರುತ್ತಾನೆ. ಬೇರೆಡೆ ಇಲ್ಲ ಎಂದು ಭ್ರಾಂತನಾದ ಹಾಗು ಶ್ರೀಹರಿಯು ಭಗವದ್ಭಕ್ತರಲ್ಲಿಯೂ ಇದ್ದಾನೆಂದು ತಿಳಿಯದ ಮನುಷ್ಯನು ಅಧಮ ಭಕ್ತನು.

ಇಂತಹ ಭಕ್ತಾಧಮರು ಮೂರು ವಿಧರಾಗಿದ್ದಾರೆ. ಭಗವದ್ಭಕ್ತರಲ್ಲಿ ಇರುವ ತಾರತಮ್ಯವನ್ನು ಅರಿಯದೆ ತಾನು ಶ್ರೇಷ್ಠ ಭಕ್ತನೆಂಬ ಅಹಂಕಾರದಿಂದ ವಿಷ್ಣುಭಕ್ತರನ್ನು ದ್ವೇಷಿಸುವವ ಅಧಮಭಕ್ತರಲ್ಲಿ ಅಧಮನು. ಭಗವದ್ಭಕ್ತರನ್ನು ಉಪೇಕ್ಷಿಸುವ ಭಕ್ತನು ಅಧಮಭಕ್ತರಲ್ಲಿ ಮಧ್ಯಮನು. ಹರಿಭಕ್ತರ ಸ್ಮರಣೆಯನ್ನಷ್ಟೆ ಮಾಡದವ ಅಧಮ ಭಕ್ತರಲ್ಲಿ ಉತ್ತಮನು ಎಂದು ಶ್ರೀಮದಾಚಾರ್ಯರು ಹನ್ನೊಂದನೇ ಸ್ಕಂಧದ ಭಾಗವತ ತಾತ್ಪರ್ಯದಲ್ಲಿ ತಿಳಿಸಿದ್ದಾರೆ.

ಮನುಷ್ಯರಲ್ಲಿ ಒಬ್ಬನಿಗೆ ಅಲ್ಪವಾದ ಆಧಿಕ್ಯವನ್ನು ತೋರಿಸುವಂತೆ ವಿಷ್ಣುವಿಗೂ ಇತರರಿಗಿಂತ ಸ್ವಲ್ಪವಾದ ಶ್ರೇಷ್ಠತೆಯನ್ನು ತಿಳಿಯುವವರು ಭಕ್ತಾಧಮರೆನಿಸುತ್ತಾರೆ. ಅವರು ಸ್ವರ್ಗಾದಿಫಲವನ್ನಷ್ಟೆ ಹೊಂದುವರು. ಮೋಕ್ಷವನ್ನೆಂದೂ ಪಡೆಯುವುದಿಲ್ಲ-

'ಅರ್ಚಾಯಾಮೇವ ಸಂಸ್ಥಿತಂ ।
ವಿಷ್ಣುಂ ಜ್ಞಾತ್ವಾ ತದನ್ಯತ್ರ ನೈವ ಜಾನಾತಿ ಯಃ ಪುಮಾನ್ ॥

ತಾರತಮ್ಯಂ ಚ ತದ್ಭಕ್ತೈರ್ನ ಜಾನಾತಿ ಕಥಂಚನ ।
ಅವಜಾನಂಶ್ಚ ತದ್ಭಕ್ತಾನಾತ್ಮನೋ ಭಕ್ತಿದರ್ಪತಃ ॥

ಉಪೇಕ್ಷಕೋಽಪಿ ವಾ ತೇಷು ನ ಸ್ಮರೇದಥವಾಽಪಿ ತಾನ್ ।
ಮಾನುಷೇಷು ಯಥಾ ಕಶ್ಚಿತ್ ಕಿಂಚಿದುಚ್ಚೈಃ ಪ್ರದೃಶ್ಯತೇ ॥

ಏವಮೇವೋಚ್ಚತಾಂ ವಿಷ್ಣೋರಲ್ಪಾಂ ಪಶ್ಯತಿ ಚಾನ್ಯತಃ ।
ತೇ ತು ಭಕ್ತಾಧಮಾಃ ಪ್ರೋಕ್ತಾಃ ಸ್ವರ್ಗಾದಿಫಲಭೋಗಿನಃ ॥
(ಭಾಗವತ ತಾತ್ಪರ್ಯ 11-2-47)

ರಾಜಸ ಭಕ್ತರು

ವಿಷಯ ಪದಾರ್ಥಗಳನ್ನು, ಕೀರ್ತಿಯನ್ನೂ, ಐಶ್ವರ್ಯವನ್ನೂ ಬಯಸಿ ಭಗವದ್ರೂಪಗಳಲ್ಲಿ ಭೇದಭಾವನೆಯನ್ನು ಇಟ್ಟುಕೊಂಡು ಪ್ರತಿಮೆ ಮುಂತಾದವುಗಳಲ್ಲಿ ಹರಿಯನ್ನು ಆರಾಧಿಸುವ ಭಕ್ತನು 'ರಾಜಸ ಭಕ್ತ' ಎನಿಸುತ್ತಾನೆ.

'ವಿಷಯಾನಭಿಸಂಧಾಯ ಯಶ ಐಶ್ವರ್ಯಮೇವ ವಾ ।
ಅರ್ಚಾದಾವರ್ಚಯೇದ್ ಯೋ ಮಾಂ ಪೃಥಗ್ಭಾವಃ ಸ ರಾಜಸಃ ॥
(ಭಾಗ. 3-30-9)

ಸಾತ್ವಿಕ ಭಕ್ತರು

ಪಾಪಕ್ಷಯವನ್ನು ಬಯಸಿ ಶ್ರೀಹರಿಯನ್ನು ಯಾವನು ಪೂಜಿಸುತ್ತಾನೋ ಅಥವಾ ಸರ್ವೋತ್ತಮನಾದ ಭಗವಂತನಲ್ಲಿ ತನ್ನ ಕರ್ಮಗಳನ್ನು ಸಮರ್ಪಿಸುತ್ತಾನೋ, ಹಾಗೆಯೆ ಯಜ್ಞಾದಿಗಳು ತನಗೆ ವಿಹಿತಗಳಾದುದರಿಂದ ಅವಶ್ಯ ಕರ್ತವ್ಯಗಳೆಂದು ತಿಳಿದು ಮಾಡಿ ಭಗವದ್ರೂಪಗಳಿಗೆ ಪರಸ್ಪರ ಭೇದವನ್ನು ತಿಳಿಯದೆ ಅಭೇದವನ್ನೆ ತಿಳಿದು ಪೂಜಿಸಿ ಭಗವಂತನ ಆರಾಧನೆ ಮಾಡುತ್ತಾನೋ ಅವನು ಸಾತ್ವಿಕ ಭಕ್ತನು-

'ಕರ್ಮನಿರ್ಹಾರಮುದ್ದಿಶ್ಯ ಪರಸ್ಮಿನ್ ವಾ ತದರ್ಪಣಂ ।
ಯಜೇದ್ ಯಷ್ಟವ್ಯಮಿತಿ ವಾ ಪೃಥಗ್ಭಾವಃ ಸ ಸಾತ್ವಿಕಃ ॥
(ಭಾಗ. 3-30-10)

ಈ ಮೂರು ಬಗೆಯ ಭಕ್ತಿಗಳು ಸತ್ವ ಮುಂತಾದ ಮೂರು ಗುಣಗಳಿಂದ ಹುಟ್ಟುತ್ತವೆ.

ನಾಲ್ಕನೆಯ ನಿರ್ಗುಣ ಭಕ್ತಿ ಅಥವಾ ಆತ್ಯಂತಿಕ ಭಕ್ತಿಯೋಗ

ಗಂಗಾನದಿಯ ಪ್ರವಾಹದ ನೀರು ಸಮುದ್ರವನ್ನು ಸೇರುವಾಗ ನಿರಂತರವಾಗಿ ಹರಿಯುವಂತೆ ಯಾರಿಗೆ ಶ್ರೀಹರಿಯ ಗುಣ ಶ್ರವಣ ಮಾತ್ರದಿಂದಲೆ ಸಕಲಗುಣಪೂರ್ಣನಾದ ಅವನಲ್ಲಿ ನಿರಂತರವಾಗಿ ಎಡಬಿಡದೆ ಮನೋವೇಗದ ಹರಿಯುವಿಕೆಯು ಆಗುತ್ತದೋ ಅವನ ಭಕ್ತಿಯು 'ನಿರ್ಗುಣಭಕ್ತಿ' ಎನಿಸುವುದು.

ಶ್ರೀಹರಿಯಲ್ಲಿ ಕಾರಣವಿಲ್ಲದೆ ವ್ಯವಧಾನವಿಲ್ಲದೆ ಅಂದರ ನಿರಂತರವಾಗಿ ಭಕ್ತನಿಂದ ಆಚರಿಸಲ್ಪಡುವ ಭಕ್ತಿಯೋಗಕ್ಕೆ ನಿರ್ಗುಣ ಭಕ್ತಿ ಎನ್ನುವರು.

'ಮದ್ಗುಣಶ್ರುತಮಾತ್ರೇಣ ಮಯಿ ಸರ್ವಗುಣಾಶ್ರಯೇ ।
ಮನೋಗತಿರವಿಚ್ಛಿನ್ನಾ ಯಥಾ ಗಂಗಾಂಭಸೋಽಂಬುಧೌ ॥
ಲಕ್ಷಣಂ ಭಕ್ತಿಯೋಗಸ್ಯ ನಿರ್ಗುಣಸ್ಯ ಹ್ಯುದಾಹೃತಂ ।
ಅಹೈತುಕ್ಯವ್ಯವಹಿತಾ ಯಾ ಭಕ್ತಿಃ ಪುರುಷೋತ್ತಮೇ ॥

(ಭಾಗ. 3-30-11,12)

ಸಾಲೋಕ್ಯ, ಸಾರ್ಷ್ಟಿ (ಸಮಾನೈಶ್ವರ್ಯ) ಸಾಮೀಪ್ಯ, ಸಾರೂಪ್ಯ, ಸಾಯುಜ್ಯ (ಏಕತ್ವ)ಗಳೆಂಬ ಮೋಕ್ಷಗಳನ್ನು ಭಕ್ತಿಯ ಫಲವಾಗಿ ಶ್ರೀಹರಿ ಕೊಡುವ ಸಂದರ್ಭ ಬಂದಾಗ, ನೀಡಿದರೂ ಅವುಗಳನ್ನು ಏಕಾಂತ ಭಕ್ತರಾದ ಬ್ರಹ್ಮಾದಿ ಉತ್ತಮ ಭಕ್ತರು ಅವನ ಸೇವೆಯನ್ನು ಬಿಟ್ಟು ಸ್ವೀಕರಿಸಲಾರರು.

ಈ ಸ್ವಾಭಾವಿಕ ನಿರ್ಗುಣ ಭಕ್ತಿಯೋಗವೇ ಆತ್ಯಂತಿಕ ಭಕ್ತಿಯೋಗವೆನಿಸುತ್ತದೆ. ಏಕೆಂದರೆ ಸ್ವಾಭಾವಿಕ ಭಕ್ತಿಯಿಂದ ಏಕಾಂತಭಕ್ತರು ಸಾತ್ವಿಕಾದಿ ಗುಣತ್ರಯ ಭಕ್ತರನ್ನೂ ಮೀರಿ ಆತ್ಯಂತಿಕ ಭಕ್ತಿಯ ಫಲವಾಗಿ ಸಾಯುಜ್ಯರೂಪ ಮೋಕ್ಷವನ್ನು ಪಡೆಯುತ್ತಾರೆ-

'ಸಾಲೋಕ್ಯ ಸಾರ್ಷ್ಟಿಸಾಮೀಪ್ಯ ಸಾರೂಪ್ಯೈಕತ್ವಮಿತ್ಯುತ ।
ದೀಯಮಾನಂ ನ ಗೃಹ್ಣಂತಿ ವಿನಾ ಮತ್ಸೇವನಂ ಜನಾಃ ॥
ಸ ಏವ ಭಕ್ತಿಯೋಗಾಖ್ಯ ಆತ್ಯಂತಿಕ ಉದಾಹೃತಃ ।
ಯೇನಾತಿವ್ರಜ್ಯ ತ್ರಿಗುಣಾನ್ ಮದ್ಭಾವಾಯೋಪಪದ್ಯತೇ ॥

(ಭಾಗ. 3-30-13,14)

ಭಕ್ತರ ಪ್ರಭೇದಗಳು

ಶ್ರೀಮದಾಚಾರ್ಯರು ಏಕಾದಶ ಭಾಗವತ ತಾತ್ಪರ್ಯದಲ್ಲಿ ಮತ್ತೊಂದು ಬಗೆಯಿಂದ ಭಕ್ತರನ್ನು ವಿಭಾಗಿಸುತ್ತಾರೆ. ಭಗವಂತನಲ್ಲಿ ಭಕ್ತಿವುಳ್ಳ ಭಕ್ತರಲ್ಲಿ ಹೊರಗೆ ಭಕ್ತಿ ಚಿಹ್ನೆಗಳನ್ನು ಪ್ರದರ್ಶಿಸುವ ಬಾಹ್ಯಭಕ್ತರು ಹಾಗೂ ಒಳಗೆ ಗಾಢವಾದ ಭಕ್ತಿಯಿರುವ, ಹೊರಗೆ ಯಾವುದೇ ಚಿಹ್ನೆಯನ್ನು ಪ್ರದರ್ಶಿಸದ ಆಂತರ ಭಕ್ತರು ಮತ್ತು ಉಭಯ ರೂಪಿಗಳೆಂದು ಮೂರು ವಿಧದವರಾಗಿರುತ್ತಾರೆ. ಉನ್ಮತ್ತರಂತೆ ಪರಮಾತ್ಮನ ಗುಣಾನುಸಂಧಾನ ದಿಂದ ಅಟ್ಟಹಾಸ, ಅಳು ಮುಂತಾದ ಬಾಹ್ಯಭಕ್ತಿ ಚಿಹ್ನೆಗಳನ್ನು ತೋರಿಸುವವರು ಮೊದಲ ಬಗೆಯವರಾದರೆ, ಮುಖಪ್ರಸಾದ, ನಿಶ್ಚಲತೆ ದಾರ್ಢ್ಯ ಮುಂತಾದ ಆಂತರ ಭಕ್ತಿ ಚಿಹ್ನೆವುಳ್ಳವರು ಆಂತರ ಭಕ್ತರೆಂದು ತಿಳಿಯಬೇಕು. ಮತ್ತೆ ಕೆಲವರಲ್ಲಿ ಇವೆರಡರ ಸಮನ್ವಯವಿರುವುದು. ಇವರು ಉಭಯ ರೂಪಿಗಳೆಂದು ಎನಿಸಿದ್ದಾರೆ. ಆದರೆ ನಿಜವಾದ ಭಕ್ತಿಯನ್ನು ಮುಖಪ್ರಸಾದ, ನಿಶ್ಚಲತೆಯಿಂದಲೇ ಗುರುತಿಸಬೇಕು.

'ಕೇಚಿದುನ್ಮಾದವದ್ ಭಕ್ತಾಃ ಬಾಹ್ಯ ಲಿಂಗ ಪ್ರದರ್ಶಕಾಃ।
ಕೇಚಿದಾಂತರ ಭಕ್ತಾಃ ಸ್ಯುಃ ಕೇಚಿಚ್ಚೈವೋಭಯಾತ್ಮಕಾಃ।
ಮುಖಪ್ರಸಾದಾದ್ ದಾರ್ಢ್ಯಾಚ್ಚ ಭಕ್ತಿರ್ಜ್ಞೇಯಾ ನ ಚಾನ್ಯತಃ॥'
(ವಾರಾಹಪುರಾಣ-ಭಾಗವತ ತಾತ್ಪರ್ಯ 11-2-40)

ಭಕ್ತಿಯೋಗದ ಅಭಿವೃದ್ಧಿಗೆ ಸಾಧನಗಳು

ಫಲದಾಸೆ ಇಲ್ಲದೆ ಭಗವದರ್ಪಣ ಬುದ್ಧಿಯಿಂದ ದೇವಪೂಜೆ ಸಂಧ್ಯಾವಂದನೆ ಮುಂತಾದ ನಿತ್ಯ ನೈಮಿತ್ತಿಕ ಕರ್ಮ, ವ್ರತ-ಉಪವಾಸಾದಿಗಳನ್ನು ಮಾಡುತ್ತಾ ಎಲ್ಲಾ ಪ್ರಾಣಿಗಳಲ್ಲಿ ಶ್ರೀಹರಿ ನೆಲೆಸಿರುವನೆಂದು ತಿಳಿದು ಉಪಕಾರ ಮಾಡುತ್ತಾ ತನ್ನೊಳಗೂ ಉಳಿದವರಲ್ಲಿಯೂ ಅಂತರ್ಯಾಮಿಯಾಗಿರುವವನು ಒಬ್ಬನೇ ಶ್ರೀಹರಿ ಎಂದು ಚಿಂತಿಸುತ್ತಿದ್ದರೆ ಭಕ್ತಿ ಅಭಿವೃದ್ಧಿಯಾಗುತ್ತದೆ.

ಅಜ್ಞಾನಿ ಪ್ರತಿಮಾರ್ಚನೆ ಮಾಡದಿದ್ದರೆ ದೋಷವನ್ನು ಹೊಂದುತ್ತಾನೆ. ಅದೇ ಅಪರೋಕ್ಷಜ್ಞಾನಿ ಮಾಡದಿದ್ದರೆ ದೋಷವಿಲ್ಲ. ಮಾಡಿದರೆ ಮೋಕ್ಷದಲ್ಲಿ ಆನಂದಾಭಿವೃದ್ಧಿಯಾಗುವುದು.

ಶ್ರೀಹರಿಯ ಚಲಪ್ರತಿಮೆಗಳೆನಿಸಿದ ಪ್ರಾಣಿಗಳಲ್ಲಿ ತಾರತಮ್ಯವು ಸ್ವಾಭಾವಿಕವಾಗಿ ಇದ್ದೇ ಇದೆ. ಸ್ಥಾವರಗಳಿಗಿಂತ ನಡೆದಾಡುವ ಪ್ರಾಣಿಗಳು ಶ್ರೇಷ್ಠವಾದವು. ಬೇರೆ ಪ್ರಾಣಿಗಳಿಗಿಂತ ಭಗವಂತನ ಜ್ಞಾನಪಡೆಯುವ ಯೋಗ್ಯತೆ ಇರುವ ಮನುಷ್ಯರು ಶ್ರೇಷ್ಠರು. ಮನುಷ್ಯರಿಗಿಂತ ಋಷಿಗಳು, ಅವರಿಗಿಂತ ದೇವತೆಗಳು ಶ್ರೇಷ್ಠರು. ದೇವತೆಗಳಲ್ಲಿಯೂ ಇಂದ್ರಾದಿ ದೇವತೆಗಳಿಗಿಂತ ಗರುಡಶೇಷರು ಬ್ರಹ್ಮವಾಯುಗಳು ಹೀಗೆ ತಾರತಮ್ಯವನ್ನು ತಿಳಿದುಕೊಂಡೆ ಪೂಜಿಸಬೇಕು.

'ಪರಿವಾರತಯಾ ಗ್ರಾಹ್ಯಾಃ ಅಪಿ ಹೇಯಾಃ ಪ್ರಧಾನತಃ'

(ಅನುವ್ಯಾಖ್ಯಾನ)

ಮೋಕ್ಷಸಾಧನಗಳಲ್ಲಿ ಭಕ್ತಿಗೆ ಪ್ರಾಮುಖ್ಯತೆ

ಮೋಕ್ಷಕ್ಕೆ ಭಕ್ತಿಯೊಂದೆ ಪ್ರಮುಖ ಸಾಧನ. ಉಳಿದ ಸಾಧನಗಳೆಲ್ಲ ಸಾಧಾರಣ ಸಾಧನಗಳೆನಿಸಿವೆ. ಶ್ರೀಮದಾಚಾರ್ಯರು ಮುಕ್ತಿಗೆ ಸಾಧಾರಣ ಕಾರಣಗಳನ್ನು ಮಹಾಭಾರತ ತಾತ್ಪರ್ಯ ನಿರ್ಣಯದಲ್ಲಿ ಹೀಗೆ ತಿಳಿಸಿದ್ದಾರೆ.

1. ತಾರತಮ್ಯಜ್ಞಾನ

ತಾರತಮ್ಯಂ ತತೋಜ್ಞಾನಂ ಸರ್ವೋಚ್ಚತ್ವಂ ಹರೇಸ್ತಥಾ ।
ಏತದ್ವಿನಾ ನ ಕಸ್ಯಾಪಿ ವಿಮುಕ್ತಿಃ ಸ್ಯಾತ್ ಕಥಂಚನ ॥

(ಮ.ಭಾ.ತಾ.ನಿ. 1-80)

ಬ್ರಹ್ಮಾದಿ ಸರ್ವಜೀವರ ತಾರತಮ್ಯಜ್ಞಾನ, ವಿಷ್ಣುವಿನ ಸರ್ವೋತ್ತಮತ್ವಜ್ಞಾನ ಇವುಗಳಿಂದಲೇ ಮುಕ್ತಿ. ಇವುಗಳ ಹೊರತಾಗಿ ಬೇರೆ ಮಾರ್ಗಗಳಿಂದ ಯಾರಿಗೂ ಮೋಕ್ಷವಾಗುವುದಿಲ್ಲ.

2. ಪಂಚಭೇದಾದಿಗಳ ಜ್ಞಾನ

ಪಂಚಭೇದಾಂಶ್ಚ ವಿಜ್ಞಾಯ ವಿಷ್ಣೋಃ ಸ್ವಾಭೇದಮೇವ ಚ ।
ನಿರ್ದೋಷತ್ವಂ ಗುಣೋದ್ರೇಕಂ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥

(ಮ.ಭಾ.ತಾ.ನಿ. 1-81)

ಜೀವೇಶ್ವರ ಭೇದ, ಜೀವ ಜೀವರ ಭೇದ, ಜೀವ ಜಡರ ಭೇದ, ಜಡ ಈಶರ ಭೇದ, ಜಡ ಜಡದ ಭೇದಗಳೆಂಬ ಐದು ಭೇದಗಳನ್ನೂ, ಶ್ರೀಹರಿಗೆ ಅವತಾರಾದಿಗಳಲ್ಲಿ, ಗುಣಕ್ರಿಯಾದಿಗಳಲ್ಲಿಯೂ ಭೇದಾಭಾವವನ್ನು ಚೆನ್ನಾಗಿ ತಿಳಿದು, ವಿಷ್ಣುವಿನ ನಿರ್ದೋಷತ್ವವನ್ನು, ಗುಣಪೂರ್ಣತ್ವವನ್ನು ತಿಳಿದರೆ ಮಾತ್ರ ಮುಕ್ತಿಯಾಗುತ್ತದೆ. ಇಲ್ಲದಿದ್ದರೆ ಇಲ್ಲ.

3. ಶ್ರೀಹರಿಯ ಅವತಾರಾದಿಗಳ ಬಗ್ಗೆ ಸರಿಯಾದ ತಿಳುವಳಿಕೆ-

ಅವತಾರಾನ್ ಹರೇರ್ಜ್ಞಾತ್ವಾನಾವತಾರಾ ಹರೇಶ್ಚ ಯೇ ।
ತದಾವೇಶಾನ್ ತಥಾ ಸಮ್ಯಗ್ ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥

ಶ್ರೀಹರಿಯ ಅವತಾರಗಳನ್ನು, ಆವೇಶಗಳನ್ನು, ಅಂಶಗಳನ್ನು ಅವತಾರವಾಗದವುಗಳನ್ನು ಚೆನ್ನಾಗಿ ತಿಳಿದೆ ಮುಕ್ತನಾಗುತ್ತಾನೆ.

4. ಸೃಷ್ಟಿ ಮುಂತಾದವುಗಳ ಕರ್ತನು ವಿಷ್ಣು-ಎಂಬ ಜ್ಞಾನ

ಸೃಷ್ಟಿರಕ್ಷಾಹೃತಿಜ್ಞಾನನಿಯತ್ಯಜ್ಞಾನ ಬಂಧನಾನ್ ।
ಮೋಕ್ಷಂ ಚ ವಿಷ್ಣುತಸ್ತ್ವೇವ ಜ್ಞಾತ್ವಾ ಮುಕ್ತಿರ್ನಚಾನ್ಯಥಾ ॥

(ಮ.ಭಾ.ತಾ.ನಿ. 1-83)

ಬ್ರಹ್ಮಾದಿ ಸಕಲ ಜಗತ್ತಿನ ಸೃಷ್ಟಿ, ರಕ್ಷಣೆ, ಸಂಹಾರ, ನಿಯಮನ, ಅಜ್ಞಾನ, ಜ್ಞಾನ, ಬಂಧನ, ಮುಕ್ತಿ ಈ ಎಂಟು ವಿಷ್ಣುವಿನಿಂದಾಗಿ ಆಗುವುದೆಂದು ತಿಳಿದರಷ್ಟೆ ಮುಕ್ತಿಯಾಗುವುದು. ಇಲ್ಲದಿದ್ದರೆ ಇಲ್ಲ.

5. ವೇದಾದಿಗಳು ವಿಷ್ಣುಪರ - ಎಂಬ ಜ್ಞಾನ

ವೇದಾಂಶ್ಚ ಪಂಚರಾತ್ರಾಣಿ ಸೇತಿಹಾಸ ಪುರಾಣಕಾನ್ ।
ಜ್ಞಾತ್ವಾ ವಿಷ್ಣು ಪರಾನೇವ ಮುಚ್ಯತೇ ನಾನ್ಯಥಾ ಕ್ವಚಿತ್ ॥

(ಮ.ಭಾ.ತಾ.ನಿ. 1-84)

ನಾಲ್ಕು ವೇದಗಳು, ಪಂಚರಾತ್ರ, ಸ್ಮೃತಿಗಳು, ಇತಿಹಾಸಗಳು, ಸಕಲ ಪುರಾಣಗಳು ಮುಖ್ಯವಾಗಿ ಶ್ರೀಹರಿಯನ್ನೆ ಪ್ರತಿಪಾದಿಸುತ್ತವೆ, ಎಂದು ತಿಳಿದರೆ ಮಾತ್ರ ಮುಕ್ತಿಯಾಗುತ್ತದೆ. ಇಲ್ಲದಿದ್ದರೆ ಎಂದಿಗೂ ಮೋಕ್ಷ ವಾಗುವುದಿಲ್ಲ. ಹೀಗೆ ಆಚಾರ್ಯರು ಮೋಕ್ಷಪ್ರಾಪ್ತಿಗೆ ಬೇಕಾದ ಸಾಧಾರಣ ಸಾಧನಗಳನ್ನು ಹೇಳಿ ಮುಂದೆ ಮೋಕ್ಷಕ್ಕೆ ಬೇಕಾದ ಅಸಾಧಾರಣ ಕಾರಣ ಅಥವಾ ಮುಖ್ಯಸಾಧನವಾದ ಭಕ್ತಿಯನ್ನು ಹೇಳಿದ್ದಾರೆ.

ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋ ಭಕ್ತಿರಿತಿ ಪ್ರೋಕ್ತಸ್ತಯಾ ಮುಕ್ತಿರ್ನಚಾನ್ಯಥಾ ॥
(ಮ.ಭಾ.ತಾ.ನಿ. 1-85)

ಭಗವನ್ಮಾಹಾತ್ಮ್ಯಜ್ಞಾನಪೂರ್ವಕವಾದ ಹಾಗೂ ದೃಢವಾಗಿ ಬೇರೂರಿದ, ತಾನು ಮತ್ತು ತನ್ನವರಾದ ಸಮಸ್ತ ವಸ್ತುಗಳಲ್ಲಿ ಮಾಡುವ ಸ್ನೇಹಕ್ಕಿಂತಲೂ ಹಲವು ಪಟ್ಟು ಅಧಿಕವಾದ ಸ್ನೇಹವನ್ನು ಸರ್ವೋತ್ತಮನಾದ ವಿಷ್ಣುವಿನಲ್ಲಿ ಮಾಡುವುದೇ 'ಭಕ್ತಿ' ಎನಿಸುತ್ತದೆ. ಇಂತಹ ಭಕ್ತಿಯಿಂದಲೇ ಮೋಕ್ಷವಾಗುತ್ತದೆ. ಇಲ್ಲದಿದ್ದರೆ ಮೋಕ್ಷ ದೊರಕಲಾರದು.

ಉಪಸಂಹಾರ

ಇಷ್ಟು ಪ್ರಬಂಧದಿಂದ ತಿಳಿಯಲಾದ ವಿಷಯವೆಂದರೆ- ಸಾಧಕನು ನಿವೃತ್ತ ಕರ್ಮಾನುಷ್ಠಾನದಿಂದ ಶುದ್ಧಾಂತಃ ಕರಣನಾಗಿ ಶಮದಮಾದಿ ಸದ್ಗುಣಗಳು, ಜ್ಞಾನ ಭಕ್ತಿ ವೈರಾಗ್ಯ ರೂಪವಾದ ಅಧಿಕಾರದಿಂದ ಸಹಿತನಾಗಿ ಶ್ರೀಹರಿಯಲ್ಲಿ ನಿರ್ಮಲವಾದ ನಿರ್ನಿಮಿತ್ತಕವಾದ ನಿರ್ವ್ಯಾಜಭಾವನೆಯಿಂದ ಅಚಲನಿಷ್ಠೆಯಿಂದ ಸದ್ಭಕ್ತಿಯನ್ನು ಹೊಂದಿದಾಗ ಆ ಭಕ್ತಿಯಿಂದ ಮುಕ್ತಿಯನ್ನು ಪಡೆಯುವನು. ಮುಕ್ತಿಗಿಂತ ಪೂರ್ವದಲ್ಲಿ ಇರುವ ಭಕ್ತಿ ಸಾಧ್ಯ ಸಾಧನರೂಪವಾಗಿಯೂ ಮೋಕ್ಷದಲ್ಲಿ ಆನಂದ ರೂಪವಾಗಿಯೂ ನೆಲೆಸಿರುತ್ತದೆ.

ಸೈವಾನಂದ ಸ್ವರೂಪೇಣ ನಿತ್ಯಮುಕ್ತೇಷು ತಿಷ್ಠತಿ ।
ಭಕ್ತ್ಯೈತಾದೃಶಯೋಪಾಸ್ಯೋ ಭಗವಾನ್ ಇಂದಿರಾಪತಿಃ ॥
(ಸತತ್ತ್ವರತ್ನಮಾಲಾ -399)

ಮನುಷ್ಯೋತ್ತಮರಿಂದ ಆರಂಭಿಸಿ ಚತುರ್ಮುಖ ಬ್ರಹ್ಮದೇವರ ವರೆಗೆ ಇರುವ ಜೀವರಲ್ಲಿ ಆನಂದ ತಾರತಮ್ಯವಿರುವಂತೆ ಭಕ್ತಿತಾರತಮ್ಯವೂ ಇರುವುದು.

ಸಾಧಕರಲ್ಲಿ ಹೆಚ್ಚಿನ ಭಕ್ತಿಯನ್ನು ಹುಟ್ಟಿಸಿ ಅದರ ಮೂಲಕವಾಗಿ ಭಗವಂತನ ಅನುಗ್ರಹವನ್ನು ಸಂಪಾದಿಸಿ ಮೋಕ್ಷವನ್ನು ಹೊಂದಿಸಿ ಕೊಡಲು ಸಕಲ ಪೌರುಷೇಯ- ಅಪೌರುಷೇಯ ಆಗಮಗಳು ಹೊರಟವೆ.

'ತೇಷಾಂ ದುಃಖ ಪ್ರಹಾಣಾಯ ಶ್ರುತಿರೇಷಾ ಪ್ರವರ್ತತೇ'

(ಭಾಷ್ಯದೀಪಿಕೋದಾಹೃತಶ್ರುತಿಃ 1-1-1)

ಆಗಮಗಳಾದರೂ ಭಗವನ್ಮಹಿಮೆಯನ್ನು ಪ್ರತಿಪಾದಿಸುವ ಮೂಲಕ ಮುಮುಕ್ಷುಗಳಲ್ಲಿ ಭಗವದ್ಭಕ್ತಿಯನ್ನು ಹುಟ್ಟಿಸುತ್ತವೆ.

'ಭಕ್ತ್ಯರ್ಥಂ ಭಗವನ್ಮಹಿಮೋಕ್ತಿಃ'

(ಬ್ರಹ್ಮಸೂತ್ರಭಾಷ್ಯ 3-1-1)

ಶಾಸ್ತ್ರಗಳು ಭಗವದ್ಭಕ್ತಿಯಿಂದ ಭಗವತ್ಪ್ರೀತಿ ಅಥವಾ ಭಗವದನುಗ್ರಹ ವನ್ನು ಸಾಧಕರಿಗೆ ಸಂಪಾದಿಸಿಕೊಟ್ಟು ಮೋಕ್ಷವನ್ನು ಹೊಂದಿಸಿಕೊಡುತ್ತವೆ.

॥ ಶ್ರೀ ಮಧ್ವೇಶಾರ್ಪಣಮಸ್ತು ॥

ಆಚಾರ್ಯ ಮಧ್ವರು ಮೋಕ್ಷಕ್ಕಾಗಿ ಮಾಡುವ ಸಾಧನೆಗಳಲ್ಲಿ ಭಕ್ತಿಗೆ ಹೆಚ್ಚಿನ ಸ್ಥಾನವನ್ನು ನೀಡಿದ್ದಾರೆ. ಆರಂಭಿಕ ಸಾಧನೆಯ ಹಂತವಾದ ಕರ್ಮದಿಂದಾರಂಭಿಸಿ ಮೋಕ್ಷಕ್ಕೆ ಕಾರಣವಾದ ಅಪರೋಕ್ಷಜ್ಞಾನದ ಉದಯವಾಗುವವರೆಗೆ ಸಾಧಕರು ಮಾಡುವ ಸಕಲ ಸಾಧನೆಗಳಿಗೆ ಭಕ್ತಿಯೇ ಕಾರಣ ವೆಂದು ಶ್ರೀ ಮಧ್ವಾಚಾರ್ಯರು ತಮ್ಮ ಸರ್ವಮೂಲ ಗ್ರಂಥಗಳಲ್ಲಿ ನಿರೂಪಿಸಿದ್ದಾರೆ. ಅಲ್ಲಿ ಹೇಳಿದ ಭಕ್ತರ ಪ್ರಭೇದಗಳು, ಅಧಿಕಾರಿವರ್ಗದಲ್ಲಿರುವ ನಾನಾ ಬಗೆಗಳು, ದ್ವೇಷದಿಂದ ಮುಕ್ತಿದೂರ, ಭಕ್ತಿಯಿಂದಲೇ ಮುಕ್ತಿ, ಭಕ್ತಿಯ ನಾನಾ ಲಕ್ಷಣಗಳು, - ಮುಂತಾದ ಅನೇಕ ವಿಚಾರಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಲಾಗಿದೆ.

ಸಂಶೋಧನ ಕ್ಷೇತ್ರದಲ್ಲಿ ಖ್ಯಾತ ನಾಮರೂ, ಪೂರ್ಣಪ್ರಜ್ಞ ಸಂಶೋಧನ ಮಂದಿರದ ಉಪನಿರ್ದೇಶಕರೂ ಹಾಗೂ ಪರಮಪೂಜ್ಯ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ 108 ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಲ್ಲಿ ಶ್ರೀಮನ್ನ್ಯಾಯಸುಧಾ ಚಂದ್ರಿಕಾದಿ ಗ್ರಂಥಗಳ ಅಧ್ಯಯನ ಮಾಡಿದವರೂ, ರಾಷ್ಟ್ರಪತಿ ಪ್ರಶಸ್ತಿ ಪುರಸ್ಕೃತರೂ ಆದ ಡಾ।। ಶ್ರೀ ಶಂಕರನಾರಾಯಣ ಅಡಿಗರು ಈ ಗ್ರಂಥ ರಚನೆಯನ್ನು ಮಾಡಿದ್ದಾರೆ.